# ಪುಸ್ತಕ ಪ್ರಪಂಚ

ಸಂಪುಟ ೫೦ ಜುಲೈ ೨೦೦೦ ಸಂಚಿಕೆ ೧೦



ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು

# ಪುಸ್ತಕ ಪ್ರಪಂಚ

## ಮಾಸಿಕ

ಸಂಪಾದಕ ಮಂಡಳಿ :

ಪ್ರಧಾನ ಸಂಪಾದಕರು

ಡಾ|| ದೇ. ಜವರೇಗೌಡ

ಗೌರವ ಪ್ರಧಾನ ಸಂಪಾದಕರು

ಜಿ. ಕೆ. ಲೋಕರೆ

ವಿಭಾಗಾಧಿಕಾರಿಗಳು

ಮತ್ತು

ಅಧ್ಯಕ್ಷರು, ಕ.ರಾ.ವ.ಶಿ. ಸಮಿತಿ

ಧರ್ಮರಾಜ ಲಿಂಗಪ್ಪ ರಿತ್ತಿ ಮರಿಯಣ್ಣನವರ್, ಉಪಾಧ್ಯಕ್ಷರು

ವೈ. ಎನ್. ಶಂಕರೇಗೌಡ, ಖಜಾಂಚಿ

ಶ್ರೀರಂಗರಾಜು, ಪ್ರಧಾನಕಾರ್ಯದರ್ಶಿ

ಸದಸ್ಯರು :

ಜಿ. ಟಿ. ನಾರಾಯಣರಾವ್

ರಾ. ವೆಂ. ಶ್ರೀನಿವಾಸಮೂರ್ತಿ

ಡಾ|| ಪ್ರಧಾನ್ ಗುರುದತ್ತ

ಪರಮಶಿವ ನಡುಬೆಟ್ಟ

ಡಾ|| ಹಾ. ತಿ. ಕೃಷ್ಣೇಗೌಡ

ಪ್ರೊ|| ಸಿ. ನಾಗಣ್ಣ

ಲತಾ ರಾಜಶೇಖರ್

ಆರ್. ಬೋರಯ್ಯ, ಸಂಪಾದಕ

# ಪರಿವಿಡಿ



ಮುಖ ಚಿತ್ರ : ಕಲ್ಲಿನ ರಥ, ಹಂಪೆ

**PUSTAKA PRAPANCHA:** Monthly

Published and printed by Karnataka State Adult Education Council,Mysore-(
Price : Rupees Ten

ಬಿಡಿಪ್ರತಿ : ರೂ.೧೦

ವಾರ್ಷಿಕ ಚಂದಾ : ರೂ, ೧೦೦

**ಅಜೀವ ಸದಸ್ಯತ್ವ ಚಂದಾ :**

ವ್ಯಕ್ತಿಗೆ : ರೂ. ೬೦೦

ಸಂಸ್ಥೆಗೆ : ರೂ. ೯೦೦

**ಪ್ರಕಟಣೆ**
**ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ**
**ಮೈಸೂರು-೫೭೦ ೦೦೬**

# ೧. ಶತಾಯುಷಿ ಸಾಹಿತಿಗೆ ನಮನ

ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಚಂಪೂ, ವಚನ, ಷಟ್ಪದಿ, ಸಾಂಗತ್ಯಗಳ ಸುವರ್ಣಯುಗ ಆಗಿ ಹೋಗಿವೆ. ಆದರೆ ಬಹುವೈವಿಧ್ಯಮಯವೂ, ಸಂಪತ್ಸಮೃದ್ಧವೂ, ಬಹುವರ್ಣರಂಜಿತವೂ, ಬಹುವ್ಯಾಪಕವೂ, ಸಮಗ್ರವೂ ಆದ ಸುವರ್ಣಯುಗ ಸಂದದ್ದೇ ಇಪ್ಪತ್ತನೆಯ ಶತಮಾನದಲ್ಲಿ. ಮೂಲ ಸಂಸ್ಕೃತಿಯನ್ನು ತ್ಯಜಿಸದೆ, ಸ್ವದೇಶೀ ಅಂತಸ್ಸತ್ವದ ಮೇಲೆ ವಿಶ್ವವಿಶಾಲ ಅತ್ಯಾಧುನಿಕ ಸಂಸ್ಕೃತಿಯನ್ನು ಕಸಿಕಟ್ಟಿ ಬೆಳೆಸಿದ ಸರ್ವಂಕಷವೂ ಅತ್ಯಮೂಲ್ಯವೂ ಆಧುನಿಕ ಕನ್ನಡ ಸಾಹಿತ್ಯದ ವೈಶಾಲ್ಯಕ್ಕೆ ವೈಪುಲ್ಯಕ್ಕೆ ಯಾರಾದರೂ ಆಶ್ಚರ್ಯಪಡಬೇಕು.

ಕನ್ನಡ ಭಾಷಾ ಸಾಹಿತ್ಯ ಸಂವರ್ಧನೆಗಾಗಿ ವಿಶೇಷ ಆಸ್ಥೆಯಿಂದ ಶ್ರಮಿಸಿದ ಹಿರಿಯ ತಲೆಮಾರಿನವರಾದ ಪ್ರೊ. ಅಕ್ಕಿಹೆಬ್ಬಾಳು ನರಸಿಂಹಮೂರ್ತಿರಾವ್ ಅವರು ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಪ್ರಾಧ್ಯಾಪಕರು. ಇಂಗ್ಲಿಷ್ ಸಂಸ್ಕೃತ ಸಾಹಿತ್ಯ ಸಾಗರಗಳ ಸಂಮಥನದಿಂದ ಪಡೆದ ಅಮೃತವನ್ನು ಕನ್ನಡಕ್ಕಾಗಿ ಧಾರೆಯೆರೆದು, ಅದನ್ನು ಪೋಷಿಸಿದ ಪುಣ್ಯಪುರುಷರು. ಈವರೆಗಿನ ಕನ್ನಡ ಸಾಹಿತಿಗಳ ಪೈಕಿ, ಕೈಲಾಸವಾಸಿ ವ್ಯಾಕರಣ ತೀರ್ಥ ಚಂದ್ರಶೇಖರ ಶಾಸ್ತ್ರಿಗಳನ್ನು ಬಿಟ್ಟರೆ, ಶತಾಯುಷಿಗಳಾಗಿ ಆಶೀರ್ವಾದ ರಕ್ಷೆಯಾಗಿ ನಮ್ಮೊಡನಿರುವ ನಾಡಿನ ಪಿತಾಮಹರು. ಕಳೆದ ಜೂನ್ ಹದಿನಾರರಂದು ನೂರೊಂದನೆಯ ವರ್ಷಕ್ಕೆ ಪದಾರ್ಪಣ ಮಾಡಿರುವ ಡಾ. ಮೂರ್ತಿರಾಯರು ಇನ್ನೂ ಹಲವು ವರ್ಷ ಹೆಮ್ಮೆಯ ಹಿರಿಯರಾಗಿ, ಆರಾಧ್ಯರಾಗಿ ನಮ್ಮೊಡನಿರಬೇಕೆಂಬುದೇ ಎಲ್ಲ ಕನ್ನಡಿಗರ ಪ್ರಾರ್ಥನೆ.

ಮೂರ್ತಿರಾಯರು ಕರ್ನಾಟಕದಲ್ಲಿ ಮೊದಲು ಪ್ರಸಿದ್ಧಿಗೆ ಬಂದದ್ದು ಲಲಿತ ಪ್ರಬಂಧಕಾರರಾಗಿ ಸಣ್ಣಕತೆಗಳಿಗೆ ಮಾಸ್ತಿಯವರೆಂತೊ ಲಲಿತ ಪ್ರಬಂಧಗಳಿಗೆ ಮೂರ್ತಿರಾಯರು ಅಂತೆಯೇ ಮಾರ್ಗದರ್ಶಕರು. ಅವರ ಲೇಖನಿಯಿಂದ ಮೊದಲು ಹೊರಬಿದ್ದ ಪ್ರಬಂಧಗಳ ಸಂಕಲನ 'ಹಗಲು ಗನಸುಗಳು'. 'ಸಾಕ್ರಟೀಸನ ಕೊನೆಯ ದಿನಗಳು' ಅವರಿಗೆ ಯಶಸ್ಸು ತಂದು ಕೊಟ್ಟ ಮೊದಲ ಅನುವಾದ ಕೃತಿ. ಅದೇ ಸಮಯದಲ್ಲಿ ಮೋಲಿಯೇರ್‌ನ 'ತಾರ್ತುಫ್' ನಾಟಕದ ರೂಪಾಂತರವಾದ 'ಆಷಾಢಭೂತಿ' ವಿದ್ಯಾರ್ಥಿ ಹಾಗೂ ಅಧ್ಯಾಪಕ ವೃಂದದಲ್ಲಿ ಪ್ರಿಯತೆಯನ್ನು ಪಡೆದ ನಂತರ, ಅನೇಕ ಯಶಸ್ವೀ ಪ್ರಯೋಗಗಳ ಮೂಲಕ ಹವ್ಯಾಸೀ ಹಾಗೂ ವೃತ್ತಿರಂಗ ಭೂಮಿಗಳ ಗಮನವನ್ನು ಸೆಳೆಯುತ್ತದೆ. ಇತರ ಹಿರಿಯ ತಲೆಮಾರಿನ ಹಲವು ಸಾಹಿತಿಗಳಂತೆ ಮೂರ್ತಿರಾಯರೂ ಭಾಷಾಂತರ ಮಾರ್ಗದ ಮೂಲಕ ಸಾಹಿತ್ಯ ಲೋಕವನ್ನು ಪ್ರವೇಶಿಸುತ್ತಾರೆ. ಅಷ್ಟೇ ಅಲ್ಲ, ಅವರ ಸಾಹಿತ್ಯರಾಶಿಯಲ್ಲಿ ಭಾಷಾಂತರ ಸಾಹಿತ್ಯವೇ ಸಿಂಹಪಾಲನ್ನು ಪಡೆದುಕೊಂಡಿದೆ. ಹವಳದ ದ್ವೀಪ, ಯೋಧನ ಪುನರಾಗಮನ, ಪಾಶ್ಚಾತ್ಯ ಸಣ್ಣ ಕಥೆಗಳು ಅಮೆರಿಕನ್ ಸಾಹಿತ್ಯ, ಮೋಲಿಯೇರ್‌ನ ಎರಡು ನಾಟಕಗಳು, ಇಂಡಿಯ-ಇಂದು ಮತ್ತು ನಾಳೆ ಜವಹರಲಾಲ್ ನೆಹ್ರೂ ಅವರ (India-Today and Tomorrow), ಚಂಡಮಾರುತ-ಇವೇ ಮೊದಲಾದ ಅನುವಾದಗಳು ಕನ್ನಡ ಸಾಹಿತ್ಯವನ್ನು ಸಂಪದ್ಭರಿತಗೊಳಿಸಿರುವುದಲ್ಲದೆ, ಭಾಷೆಯನ್ನು ಸಾಣೆಗೊಳಿಸಿ, ಅದರ ಕ್ರಾಂತಿಯನ್ನು ಹೆಚ್ಚಿಸಿವೆ.

ಪ್ರಬಂಧ, ಅನುವಾದ ಸಾಹಿತ್ಯಗಳ ನಂತರದ ಸ್ಥಾನ ವಿಮರ್ಶೆಗೆ ಸಲ್ಲಬೇಕಾಗಿದೆ. ಷೇಕ್ಸ್‌ಪಿಯರ್-ಪೂರ್ವಭಾಗ, ಮಾಸ್ತಿಯವರ ಕಥೆಗಳು, ಪೂರ್ವಸೂರಿಗಳೊಡನೆ, ಸಾಹಿತ್ಯ ಮತ್ತು ಸತ್ಯ ಹಾಗೂ ವಿಮರ್ಶಾತ್ಮಕ ಪ್ರಬಂಧಗಳು-ಇಷ್ಟೂ ಕೃತಿಗಳ ಮೂಲಕ ರಾಯರು ಕನ್ನಡ ವಿಮರ್ಶಾಕ್ಷೇತ್ರದ ಬಡತನವನ್ನು ನೀಗಿದ್ದಾರೆ. 'ಅಪರ ವಯಸ್ಕನ ಅಮೆರಿಕಾ ಯಾತ್ರೆ' ಅನುಭವಪೂರ್ಣ ಪ್ರವಾಸಕಥನ. 'ಸಂಜೆಗಣ್ಣಿನ ಹಿನ್ನೋಟ' ವೆಂಬ ಅವರ ಆತ್ಮಕಥೆಯಲ್ಲಿ ಅವರ ಸ್ವಂತ ಸಂಸಾರದ ಕಷ್ಟಸುಖಗಳ ಚಿತ್ರಣದ

ಜತೆಗೆ ಆ ಕಾಲದ ಶೈಕ್ಷಣಿಕ ವ್ಯವಸ್ಥೆಯ ಸ್ವರೂಪದ ಅದನ್ನು ಪ್ರಭಾವಿಸಿದ ತತ್ವ ಸಿದ್ಧಾಂತಗಳ ಪರಿಚಯ ಸಿಗುತ್ತದೆ.

ಮೂರ್ತಿರಾಯರನ್ನು ನಾಸ್ತಿಕರೆನ್ನಲಾಗದಿದ್ದರೂ, ಶ್ರೇಷ್ಠ ವಿಚಾರವಾದಿಯಂತೂ ನಿಜ. ಸಂಪ್ರದಾಯದ ಕುಟುಂಬದಲ್ಲಿ ಜನಿಸಿದ್ದರೂ, ಬಾಲ್ಯದಲ್ಲಿಯೇ ಸಂಪ್ರದಾಯ ವಿರೋಧೀ ಪ್ರವೃತ್ತಿಯೂ, ದೇವರ ಅಸ್ತಿತ್ವದ ಬಗ್ಗೆ ಸಂಶಯಾತ್ಮಕ ಪೃಚ್ಛಾಮನೋಧರ್ಮವೂ ಅವರ ಮನಸ್ಸಿನಲ್ಲಿ ಮೊಳಕೆಯೊಡೆಯುತ್ತವೆ. ಅವರ ಇಡೀ ಜೀವನದುದ್ದಕ್ಕೂ, ಅವರ ನಡೆನುಡಿ ಬರಹಗಳಲ್ಲಿ ಈ ಪ್ರವೃತ್ತಿಯ ವಿಕಸನವನ್ನು ಕಾಣಬಹುದು. ಅವರ ವೈಜ್ಞಾನಿಕ ಮನೋಧರ್ಮದ ಹಾಗೂ ವೈಚಾರಿಕ ಪ್ರವೃತ್ತಿಯ ಫಲವೇ 'ದೇವರು' ಎಂಬ ಪುಸ್ತಕ. ವಿಚಾರ ಸಾಹಿತ್ಯಕ್ಕೆ ಅವರು ನೀಡಿರುವ ಕೊಡುಗೆ ಅಪಾರ. ಕೇವಲ ಬೆರಳೆಣಿಕೆಯ ವಿಚಾರ ಸಾಹಿತಿಗಳಲ್ಲಿ ಅವರೊಬ್ಬರು.

'ಚಿತ್ರಗಳು ಮತ್ತು ಪತ್ರಗಳು' ಎಂಬ ಅವರ ಪುಸ್ತಕಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಬಹುಮಾನ ಬಂದಿದೆ. ಶಿವರಾಮ ಕಾರಂತರ 'ಮರಳಿಮಣ್ಣಿಗೆ' ಯನ್ನು ಇಂಗ್ಲಿಷಿಗೆ ಭಾಷಾಂತರಿಸಿದ್ದಾರೆ. ದೇಶ ಭಾಷೆಗಳಲ್ಲಿ ಹಲವು ಬಗೆಯ ಕೆಲಸಮಾಡಬೇಕಾದ್ದು ಆಂಗ್ಲಪ್ರಾಧ್ಯಾಪಕನ ಆದ್ಯ ಕರ್ತವ್ಯ ಎನ್ನುವ ಮಾತಿಗೆ ರಾಯರು ಆದರ್ಶವಾಗಿದ್ದಾರೆ. ಸರ್ಕಾರದ ಆಹ್ವಾನದ ಮೇರೆಗೆ  ಕರ್ನಾಟಕದ ಪ್ರಪ್ರಥಮ ಆಕಾಶವಾಣಿ ರೇಡಿಯೋ ಸ್ಟೇಷನ್ನಿನ ನಿರ್ದೇಶಕರಾಗಿ , ಕರ್ನಾಟಕ ರಾಜ್ಯದ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆಯ ನಿರ್ದೇಶಕರಾಗಿ ಅವುಗಳನ್ನು ಕಟ್ಟಿದ್ದು, ಬೆಳೆಸಿದ್ದು ಅವರ ಕರ್ತೃತ್ವಶಕ್ತಿಗೆ ದಾಖಲೆಗಳಾಗಿವೆ. ಇಷ್ಟೇ ಅಲ್ಲದೆ, ಸಾಹಿತ್ಯ ಸಂಸ್ಕೃತಿಗಳಿಗೆ ಸಂಬಂಧಿಸಿದ ರಾಷ್ಟ್ರೀಯ ಮತ್ತು ಪ್ರಾದೇಶಿಕ ಸಂಸ್ಥೆಗಳ ಗೌರವಾಧ್ಯಕ್ಷ ಕಾರ್ಯದರ್ಶಿಗಳಾಗಿ ಕಾರ್ಯನಿರ್ವಹಿಸಿದ್ದಾರೆ. ಗೌರವ ಡಾಕ್ಟೊರೇಟ್ ಮೊದಲಾದ ಅನೇಕ ಪ್ರಶಸ್ತಿಗಳನ್ನು ಪಡೆದಿದ್ದಾರೆ. ೧೯೮೪ರಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಲನದ ಅಧ್ಯಕ್ಷರಾದದ್ದುಂಟು. ಸಂತೃಪ್ತ ನಿರಾಡಂಬರ ಜೀವನವೇ ತಮ್ಮ ದೀರ್ಘಾಯುಷ್ಯದ ರಹಸ್ಯವೆನ್ನುವ ರಾಯರ ಜೀವನ ಇಂದಿನ ಮುಂದಿನ ಹಾಗೂ ಎಲ್ಲ ಕಾಲದ ಕನ್ನಡಿಗರಿಗೆ, ಭಾರತೀಯರಿಗೆ ಆದರ್ಶವಾಗಲಿ.

---

## ೨. ಮುಖ್ಯಮಂತ್ರಿಯವರ ದಿಟ್ಟ ಹೆಜ್ಜೆ

ಕರ್ನಾಟಕದ ಇತಿಹಾಸದಲ್ಲಿ ಪ್ರಾಯಶಃ ಎಂದೂ ಕಾಣದಿದ್ದ ಘಟನೆಯೊಂದು ೨೧.೫.೨೦೦೦ ದಿನದಂದು ನಡೆದು, ಸರ್ಕಾರಿ ನೌಕರರ ಎಲುಬುಗಳೊಳಗ ಚಳಿ ಹರಿದದ್ದು, ನಾಡಿನ ಹಿತಾಸಕ್ತಿಯುಳ್ಳ ಸಜ್ಜನರಿಗೆ ಸಮಾಧಾನವಾದದ್ದು, ಅಪರೂಪವಾಗಿ ದೊರೆಯುವ ಸುವಾರ್ತೆ. ಮುಖ್ಯಮಂತ್ರಿ ಶ್ರೀ ಎಸ್.ಎಂ.ಕೃಷ್ಣ ಅವರು ತಮ್ಮ ಆಪ್ತ ಸಿಬ್ಬಂದಿ ವರ್ಗಕ್ಕೂ ತಿಳಿಸದೆ, ಬೆಂಗಳೂರಿನ  ಕೆಲವು ಕಚೇರಿಗಳಿಗೆ ದಿಢೀರ್ ಭೇಟಿ ನೀಡಿದಾಗ, ಪ್ರಜಾಪ್ರಭುತ್ವ ಜಾರಿಗೆ ಬಂದಾಗಿನಿಂದ ನಡೆಯುತ್ತಿದ್ದ ವಂಚನೆಯ ಪ್ರಕರಣಗಳು ಬಯಲಾದದ್ದು ಮುಖ್ಯಮಂತ್ರಿ ಆಡಳಿತ ದಕ್ಷತೆಗೂ, ಕರ್ತವ್ಯ ಪ್ರಜ್ಞೆಗೂ, ನೈತಿಕ ಶ್ರದ್ಧೆಗೂ ಸಾಕ್ಷಿಯಾಗಿದೆ. ಸಮಾಜಸೇವಾ ಇಲಾಖೆ, ವಾಣಿಜ್ಯ ತೆರಿಗೆ ಇಲಾಖೆ, ಮಹಿಳೆಯರ ಮತ್ತು ಮಕ್ಕಳ ಕ್ಷೇಮಾಭಿವೃದ್ಧಿ ಇಲಾಖೆ, ರೇಷ್ಮೆ ಇಲಾಖೆ-ಇವುಗಳಲ್ಲಿಯ ಐವತ್ತೆರಡು ಅಧಿಕಾರಿಗಳು-ಕರಣಿಕರಲ್ಲ-ತಮ್ಮ ಜವಾಬ್ದಾರಿಯನ್ನು

ಮರೆತು, ಅನಧಿಕೃತವಾಗಿ ಗೈರುಹಾಜರಾಗಿದ್ದರೆಂಬುದು ತುಂಬ ಗಂಭೀರವಾಗಿ ಪರಿಗಣಿಸಬೇಕಾದ ಪ್ರಸಂಗ; ಇಲಾಖೆಯ ಮುಖ್ಯಸ್ಥರು ತಲೆತಗ್ಗಿಸಬೇಕಾದ ಸಂಗತಿ. ಜಿಲ್ಲಾಧಿಕಾರಿಗಳ ಇಲಾಖೆಗಳ ಮುಖ್ಯಸ್ತರು ಹಾಗೂ ಸರ್ಕಾರದ ಕಾರ್ಯದರ್ಶಿಗಳ ದಕ್ಷತೆಗೆ, ಕರ್ತವ್ಯನಿಷ್ಠೆಗೆ, ಜಾಗರೂಕತೆಗೆ, ದೇಶಾಭಿಮಾನಕ್ಕೆ ಈ ಪ್ರಕರಣಗಳು ಸವಾಲಾಗಿವೆಯೆಂಬುದಂತು ನಿಜ. ಕಾರ್ಯದರ್ಶಿಗಳು ವಿಧಾನ ಸೌಧದಲ್ಲಿದ್ದರೂ, ಅವರ ಎಚ್ಚರಿಕೆಯ ಕಣ್ಣು ರಾಜ್ಯದ ಮೂಲೆ ಮೂಲೆಗೂ ಹರಿಯುತ್ತಿರಬೇಕು. ಜಿಲ್ಲಾಧಿಕಾರಿಗಳು ರಾಜ್ಯದ ಯಾವ ಮೂಲೆಯಲ್ಲಿದ್ದರೂ, ಜಿಲ್ಲೆಯ ಎಲ್ಲಕಡೆ ಅವರ ಧ್ವನಿ ಕೇಳಿಸುವಂತಿರಬೇಕು. ವಿದ್ಯುನ್ಮಾನ ಸೌಕರ್ಯಗಳಿರುವ ಈ ಕಾಲದಲ್ಲಿ ಇದು ಕಷ್ಟವಾಗದು. ಮುಖ್ಯಮಂತ್ರಿಗಳ ಈ ಕ್ರಮವನ್ನು ಪಕ್ಷಭೇದವಿಲ್ಲದೆ ನಾಡಿನ ಎಲ್ಲ ಸಜ್ಜನರೂ ಶ್ಲಾಘಿಸಿದ್ದಾರೆನ್ನುವುದು ಶುಭ ಸೂಚಕ ಸಂಗತಿ. ಆಡಳಿತ ಪಕ್ಷವನ್ನು ನಿಯಂತ್ರಿಸಬೇಕಾದ್ದು ವಿರೋಧ ಪಕ್ಷಗಳ ಧರ್ಮ, ನಿಜ. ಆದರೆ ಆಡಳಿತ ಪಕ್ಷ ಮಾಡಿದ ಒಳ್ಳೆಯ ಕೆಲಸವನ್ನು ಶ್ಲಾಘಿಸಬೇಕಾದ್ದು ಅವುಗಳ ಕರ್ತವ್ಯ.

ಇಂಡಿಯಾದಲ್ಲಿ ರಜಾದಿನಗಳ ಪಿಡುಗು ಅತಿ. ಅವುಗಳು ಸಾಲದೆಂಬಂತೆ, ಅನಧಿಕೃತ ಗೈರುಹಾಜರಿ, ಅನುಮತಿ ಗೈರುಹಾಜರಿ ಹಾಗೂ ವಿಲಂಬಹಾಜರಿ ಯಾವಾಗಲೂ ಇದ್ದದ್ದೇ. ಇಷ್ಟೇ ಅಲ್ಲ, ಕಾಫಿ ವಿರಾಮದ ಅವಧಿ ತಾನಾಗಿಯೇ ದೀರ್ಘವಾಗುತ್ತದೆ. ದುಡಿಯುವ ನೌಕರೇತರ ಜನರಿಗೆ ಈ ಸುಖ ಸೌಲಭ್ಯಗಳುಂಟೆ? ಆದ್ದರಿಂದಲೇ ಸಾಮಾನ್ಯ ಜನ ಹೇಳೋದು, ಸರ್ಕಾರಿ ಕಚೇರಿಗಳೇ ಹಲವು ಸ್ವರ್ಗಗಳು, ಅಲ್ಲಿಯ ನೌಕರರೇ ದೇವತೆಗಳೆಂದು. ಅವರಿಗೆ ಸುಖವುಂಟು, ಹೊಣೆಗಾರಿಕೆ ಇಲ್ಲ. ಮಾಡಿದಷ್ಟು ಕೆಲಸ, ಕೈತುಂಬ ಸಂಬಳ. ಈ ಮಾತು ಉನ್ನತಾಧಿಕಾರಿಗಳಿಗೂ ಅನ್ವಯಿಸುತ್ತದೆ. ಕಡತಗಳ ವಿಲೇವಾರಿಯೊಂದೇ ಅನೇಕ ಅಧಿಕಾರಿಗಳ ಮುಖ್ಯವಾದ ಕೆಲಸ. ಪತ್ರವ್ಯವಹಾರ ಆಡಳಿತದ ಪ್ರಮುಖ ಕರ್ಮವಷ್ಟೇ. ಅದರಲ್ಲವರಿಗೆ ಆಸಕ್ತಿಯೇ ಇಲ್ಲ. ಒಂದು ಮೇಜಿನಲ್ಲಿ ಹೊರಗಿನಿಂದ ಬಂದ ಪತ್ರ ಹದಿನೈದು ದಿನಗಳಿಗಿಂತ ಹೆಚ್ಚಾಗಿ ಉಳಿಯಿತೆಂದರೆ, ಸಂಶಯಿಸಲೇಬೇಕು. ಕಾಗದ ಕಡತಗಳ ವಿಲೇವಾರಿಯ ಆಧಾರದ ಮೇಲೆ ಅಧಿಕಾರಿಗಳ ದಕ್ಷತೆಯನ್ನು,ನೌಕರರ ಪ್ರಾಮಾಣಿಕತೆಯನ್ನು ಪರೀಕ್ಷಿಸಬಹುದಾಗಿದೆ. ರಾಜರ ಕಾಲದಲ್ಲಿ ಕಡತಗಳ ಚಲನೆ ನಿರ್ದಿಷ್ಟ ವೇಳೆಯಲ್ಲಿ ಸಾಗದಿದ್ದರೆ ಸರ್ಕಾರದ ಕಾರ್ಯದರ್ಶಿಗಳೇ ನೌಕರರ ಮೇಲೆ ಕ್ರಮತೆಗೆದುಕೊಳ್ಳುತ್ತಿದ್ದರು.

ಬೇರೆ ಇಲಾಖೆಗಳಿಗಿಂತ ವಿದ್ಯಾ ಇಲಾಖೆಯಲ್ಲಿ ಭಾರಿ ಮೋಸ ನಡೆಯುತ್ತದೆ. ಅಲ್ಲಿ ರಜಾದಿನಗಳು ಜಾಸ್ತಿ. ಅರೆದಿನ ರಜಾ ಸವಲತ್ತು ಅಲ್ಲಿ ದುರುಪಯೋಗವಾಗುತ್ತಿದೆ, ಭ್ರಷ್ಟಾಚಾರಾವಕಾಶ ಮುಖ್ಯೋಪಾಧ್ಯಾಯರಿಗಿದೆ. ಉಪಾಧ್ಯಾಯರಿಗೆ ಜ್ಞಾನ ಕುತೂಹಲವಿಲ್ಲ. ಕೆಲಸಕ್ಕೆ ಸೇರಿದಾಗಿನಿಂದ ನಿವೃತ್ತಿಹೊಂದುವವರೆಗೆ ಒಂದು ಹೊಸಪುಸ್ತಕ ಓದುವುದಿಲ್ಲ. ಮಕ್ಕಳ ಟಿಪ್ಪಣಿ ಪುಸ್ತಕ ಓದದೆಯೆ ಕೆಂಪುಗೆರೆ ಎಳೆಯುತ್ತಾರೆ. ಮಕ್ಕಳ ಬಗ್ಗೆ ಲಕ್ಷ್ಯವೇ ಇಲ್ಲ. ಹಿಂದುಳಿದ ಮಕ್ಕಳ ಬಗ್ಗೆ ಮುತುವರ್ಜಿವಹಿಸುವ ಅನುಕಂಪೆಯೂ ಅವರಿಗಿಲ್ಲ. ವ್ಯಾಯಾಮ ಶಿಕ್ಷಣವಂತು ಸೊನ್ನೆಯಾಗಿದೆ. ಕ್ರೀಡಾವೇಳೆಯಲ್ಲಿ ಮಕ್ಕಳನ್ನು ಅಂಗಳಕ್ಕೆ ಕಳಿಸಿ ತಾವು ಕೋಣೆಯಲ್ಲಿ ಚಕ್ಕಂದವಾಡುತ್ತ ಕುಳಿತಿರುತ್ತಾರೆ. ಅವರಲ್ಲಿ ಕೆಲವರು ಲೇವಾದೇವಿಯೋ ವ್ಯಾಪಾರವಹಿವಾಟೋ ನಡಸುತ್ತಾರೆ. ಮಕ್ಕಳನ್ನು ಕ್ರೀಡಾಂಗಣದಲ್ಲಿ ಬಿಟ್ಟು, ತಮ್ಮ ಖಾಸಗಿ ಕೆಲಸಗಳಿಗೆ ಹೋಗುತ್ತಾರೆ.

ಅವರಿಗೆ ವ್ಯಾಪಾರವಹಿವಾಟೇ ಮುಖ್ಯೋದ್ಯೋಗ. ಶಾಲಾಉದ್ಯೋಗವೊಂದು ಹವ್ಯಾಸ. ಅಂಥವರ ಮೇಲೆ ಕ್ರಮ ಜರುಗಿಸಿದರೆ, ರಾಜಕೀಯನಾಯಕರ ಹಿಂದೆ ನಾಯಿಯಂತೆ ಅಲೆಯುತ್ತಾರೆ. ತಮ್ಮ ವಂಚನೆಗೆ ಕರ್ತವ್ಯ ಲೋಪಕ್ಕೆ ಸಂಘಸಂಸ್ಥೆಗಳನ್ನು ಬಳಸಿಕೊಳ್ಳುತ್ತಾರೆ. ಪದಾಧಿಕಾರಿಗಳು ಅವರಿಂದ ನಾನಾರೀತಿಯ ಸಹಾಯ ಪಡೆದು, ಅಶಿಸ್ತನ್ನು ಬೆಳೆಸುತ್ತಾರೆ. ಕೆಲವು ಅಧಿಕಾರಿಗಳಂತು ಇಂಥ ಶಿಕ್ಷಕರಿಗೂ ಪದಾಧಿಕಾರಿಗಳಿಗೂ ಹೆದರುತ್ತಾರೆ. ಇಲ್ಲವೇ ಸಾಮಿಲಾಗುತ್ತಾರೆ. ಭ್ರಷ್ಟಾಚಾರ ಎಷ್ಟು ರೀತಿಯಲ್ಲಿ ನಡೆಯುತ್ತಿದೆಯೆನ್ನುವುದನ್ನು ವರ್ಣಿಸಲು ಆದಿಶೇಷನಿಗೂ ಸಾಧ್ಯವಿಲ್ಲ. ಪ್ರಾಮಾಣಿಕತೆಯುಳ್ಳ ಆಡಳಿತ ಮಂಡಳಿಯೊಡನೆ ಸರಕಾರ ಸಹಕರಿಸಿದರೆ ಮಾತ್ರ ಉಪಾಧ್ಯಾಯರಲ್ಲಿ ಶಿಸ್ತು ಮೂಡಿಸಲು ಹಾಗೂ ಶಿಕ್ಷಣದ ಮಟ್ಟವನ್ನು ಉತ್ತಮಪಡಿಸಲು ಸಾಧ್ಯ.

ಮುಖ್ಯಮಂತ್ರಿ ಕೃಷ್ಣ ಅವರ ತನಿಖೆಗೆ ಒಳಗಾದದ್ದು ನಾಲ್ಕೈದು ಕಚೇರಿಗಳು ಮಾತ್ರ. ಬೆಂಗಳೂರಿನಲ್ಲಿರುವ ಎಲ್ಲ ಕಚೇರಿಗಳಿಗೆ ಏಕಕಾಲದಲ್ಲಿ ಅವರ ಸಹೋದ್ಯೋಗಿಗಳೂ ಮುತ್ತಿಗೆ ಹಾಕಿದ್ದರೆ ಸಾವಿರಾರು ಮಂದಿ ಅಪರಾಧಿಗಳು ಬಲೆಗೆ ಬೀಳುತ್ತಿದ್ದರು. ಗೈರುಹಾಜರಿ ಯಾವರೂಪದ್ದೇ ಆಗಲಿ, ಅದು ಭ್ರಷ್ಟಾಚಾರ, ದೇಶದ್ರೋಹ, ಆತ್ಮದ್ರೋಹ. ಮಾಹಿತಿ ತಂತ್ರಜ್ಞಾನ ಕಂಪ್ಯೂಟರೀಕರಣಗಳ ಮೂಲಕ ಆಡಳಿತದಲ್ಲಿ ದಕ್ಷತೆಯನ್ನೂ ಪಾರದರ್ಶಿಕತೆಯನ್ನು ಕುದುರಿಸಲು ಎಸ್ಮಾ ಮೂಲಕ ಶಿಕ್ಷಕರ ಅಶಿಸ್ತನ್ನು ನಿವಾರಿಸಿ, ತಂದೆತಾಯಿಯರ ಆತಂಕವನ್ನು ಪರಿಹರಿಸಲು ನಡೆಸಿರುವ ಅವರ ಪ್ರಾಮಾಣಿಕ ಪ್ರಯತ್ನ ಸಾಮಾನ್ಯ ಜನರಿಗೆ ಭರವಸೆಯುಂಟುಮಾಡಿದೆ. ಅವರ ಅನುಭವ ಸಮೃದ್ಧ ಪ್ರತಿಭಾಕೌಶಲ ನಾಡಿನ ಏಳ್ಗೆಗೆ ಸಮರ್ಪಿತವಾಗಿದೆ. ಶ್ರೀ ಕೃಷ್ಣ ಅವರ ಕಾಲದಲ್ಲಿ ಆಡಳಿತದಲ್ಲಿ ದಕ್ಷತೆ ಹೆಚ್ಚಿದೆಯೆಂಬ ಮಾತು ಜನಜನಿತವಾಗಿದೆ. ಅದು ಹೀಗೆಯೇ ಮುಂದುವರಿಯಲೆಂದು, ಅದಕ್ಕಾಗಿ ಅವರು ಸಮಸ್ತ ಕನ್ನಡಿಗರ ಅಭಿನಂದನೆಗೆ ಪಾತ್ರರಾಗಲೆಂದು ಪುಸ್ತಕ ಪ್ರಪಂಚ ಹಾರೈಸುತ್ತದೆ.

ಲೇಸೆನಿಸಿಕೊಂಡು ಐದುದಿನ ಬದುಕಿದಡೇನು ?
ಲೇಸೆನಿಸಿಕೊಂಡು ನಾಲ್ಕುದಿನ ಬದುಕಿದಡೇನು ?
ಲೇಸೆನಿಸಿಕೊಂಡು ಮೂರುದಿನ ಬದುಕಿದಡೇನು ?
ಲೇಸೆನಿಸಿಕೊಂಡು ಎರಡುದಿನ ಬದುಕಿದಡೇನು ?
ಲೇಸೆನಿಸಿಕೊಂಡು ಒಂದುದಿನ ಬದುಕಿದಡೇನು ?

---

## ೩. ಭಾರತ ರತ್ನ ಶ್ರೀ ಸಿ.ಸುಬ್ರಮಣಿಯವರ ಹಿತನುಡಿ

ಪ್ರಜೆಗಳು, ಶಾಸಕರು, ಮಂತ್ರಿಗಳು, ಅಧಿಕಾರಿಗಳು ಎಲ್ಲಿಯವರೆಗೆ ತಂತಮ್ಮ ಹೊಣೆ ಕರ್ತವ್ಯಗಳನ್ನರಿಯುವುದಿಲ್ಲವೊ, ಎಲ್ಲಿಯವರೆಗೆ ಶಿಸ್ತುಸಂಯಮ ದೇಶಾಭಿಮಾನ ಸಮಷ್ಟಿಹಿತದ ಹಿನ್ನೆಲೆಯಲ್ಲಿ ತಮ್ಮ ಬದುಕನ್ನು ನಡಸುವುದಿಲ್ಲವೊ ಅಲ್ಲಿಯವರೆಗೆ ರಾಷ್ಟ್ರದ ಅಭ್ಯುದಯ ಸಾಧ್ಯವಿಲ್ಲ. ಶಾಂತಿಕ್ಷೇಮಗಳಿಗೆ ಆಸ್ಪದವಿಲ್ಲ. ಪ್ರಜಾಪ್ರಭುತ್ವ ನಿಷ್ಫಲವಾಗುತ್ತದೆ; ರಾಜ್ಯಾಂಗ ನಿಷ್ಪ್ರಯೋಜಕವಾಗುತ್ತದೆ. ರಾಷ್ಟ್ರದ ನೈತಿಕ ಮಟ್ಟದ ತಕ್ಕಡಿ ಮೇಲೇರದಿದ್ದರೆ ರಾಜ್ಯಾಂಗದ ಬದಲಾವಣೆಯಾಗಲಿ, ಕಾನೂನುಗಳ ಬಾಹುಳ್ಯವಾಗಲಿ ಈಗಿರುವ ಪರಿಸ್ಥಿತಿಯನ್ನು ಉತ್ತಮಪಡಿಸಲಾರವೆಂದೇ ಹೇಳಬೇಕು.

ಯದ್ಯದಾಚರತಿ ಶ್ರೇಷ್ಠ ಸ್ತತ್ತದೇವೇತರೋ ಜನಾಃ
ಸಯತ್ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ (ಗೀತಾ ೩-೨೧)

ಸಮಾಜದ ಮುಂದಾಳುಗಳು ಹಾಗೂ ವಿದ್ಯಾವಂತರು ರಾಷ್ಟ್ರದ ನೈತಿಕ ಮಟ್ಟಕ್ಕೆ ಜವಾಬ್ದಾರರಾಗಬೇಕೆಂಬ ತತ್ತ್ವವನ್ನು ಈ ಶ್ಲೋಕ ಪ್ರತಿಪಾದಿಸುತ್ತದೆ.

ಪ್ರಜಾಪ್ರಭುತ್ವದಲ್ಲಿ ಏನೇನನಾಹುತಗಳು ಅನ್ಯಾಯಗಳು ನಡೆಯುತ್ತವೆ, ಜಂಬೊ ಗಾತ್ರದ ಸಚಿವ ಸಂಪುಟಗಳ ಶೋಷಣೆ, ಗಾತ್ರ ನಿಯಂತ್ರಣ ಮತ್ತು ಮಂತ್ರಿಗಳ ಅರ್ಹತೆಯ ಬಗ್ಗೆ ರಾಜ್ಯಾಂಗದಲ್ಲಿ ವಿಧಿನಿಷೇಧಗಳ ಅಗತ್ಯ-ಈ ವಿಷಯಗಳನ್ನು ಕುರಿತು ೧೫.೫.೨೦೦೦ನೆಯ ದಿನಾಂಕದಂದು ಹಿಂದೂ ಪತ್ರಿಕೆಯಲ್ಲಿ ಪ್ರಕಟಗೊಂಡಿರುವ ಶ್ರೀ ಸಿ.ಸುಬ್ರಮಣಿಯಮ್ ಅವರ ಲೇಖನ ರಾಜನೀತಿಜ್ಞರು ಅವಶ್ಯವಾಗಿ ಓದಬೇಕಾದ್ದು. ಭಾರತರತ್ನ ಸುಬ್ರಮಣಿಯಂ ನಾಡಿನ ಹೆಸರಾಂತ ಮುತ್ಸದ್ದಿಗಳು, ಹಲವು ವರ್ಷ ರಾಷ್ಟ್ರದ ಮಹಾನಾಯಕರೊಡನೆ ಸೇವೆ ಸಲ್ಲಿಸಿದ ಧೀಮಂತರು, ದಕ್ಷ ಆಡಳಿತಗಾರರು, ಮಾಜಿ ರಾಜ್ಯಪಾಲರು, ಸದ್ಯದಲ್ಲಿ ಭಾರತೀಯ ವಿದ್ಯಾಭವನದ ಅಧ್ಯಕ್ಷರಾಗಿರುವವರು. ಅವರ ಅನುಭವಾಲೋಚನೆಗಳ ಪ್ರಯೋಜನ ಕನ್ನಡಿಗರಿಗೆ ದೊರೆಯಲೆಂದು ಲೇಖನದ ಸಾರಾಂಶವನ್ನಿಲ್ಲಿ ಕೊಟ್ಟಿದೆ.

'ಅತಂತ್ರ ಸಂಸತ್ ಮತ್ತು ಶಾಸನ ಸಭೆಗಳು ಈಗಿನ ಭಾರತೀಯ ರಾಜಕೀಯದ ಲಕ್ಷಣಗಳಾಗಿವೆ. ಅಡ್ಡಗೋಡೆಯ ಮೇಲೆ ಕುಳಿತಿರುವ ನೀತಿಬಾಹಿರ ಸದಸ್ಯರು ದುರಾಸೆಯಿಂದ ಅಧಿಕಾರಗ್ರಹಣಕ್ಕಾಗಿ ಕಾಯುತ್ತಾರೆ. ರಾಜ್ಯಾಂಗದ ಪ್ರಕಾರ ರಾಷ್ಟ್ರಪತಿ ಅಥವಾ ರಾಜ್ಯಪಾಲರು ಪ್ರಧಾನಿ ಅಥವಾ ಮುಖ್ಯಮಂತ್ರಿಯನ್ನು ನೇಮಿಸುತ್ತಾರೆ. ಸಚಿವ ಮಂಡಲಿಯನ್ನು ರಚಿಸುವ ಅಧಿಕಾರ ಪ್ರಧಾನಿ ಅಥವಾ ಮುಖ್ಯಮಂತ್ರಿಗಿದೆ. ಅಧಿಕಾರದ ಗದ್ದುಗೆಗಂಟಿಕೊಂಡಿರುವ ಸಲುವಾಗಿ, ಅವರು ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು, ಅರ್ಹಾನರ್ಹರೆಲ್ಲರನ್ನು ಸೇರಿಸಿಕೊಂಡು, ಗಜಗಾತ್ರದ ಮಂತ್ರಿಮಂಡಲವನ್ನು ರಚಿಸುತ್ತಾರೆ. ನಮ್ಮ ನಾಯಕರಲ್ಲಿ ವಿಶ್ವಾಸವಿಟ್ಟ ರಾಜ್ಯಾಂಗ ನಿರ್ಮಾಪಕರು ತಮ್ಮ ಅಧಿಕಾರವನ್ನವರು ಅಪಿತ್ರಗೊಳಿಸುತ್ತಾರೆಂದು ತಿಳಿಯಲಾರದೆ ಹೋದರು. ಪ್ರಾರಂಭದಲ್ಲಿ, ಅದರಲ್ಲಿಯೂ ಏಕ ಪಕ್ಷೀಯ ಸರ್ಕಾರಗಳಿದ್ದಾಗ ಸಚಿವರ ಸಂಖ್ಯೆ ಹಿಡಿತದಲ್ಲಿತ್ತು. ಕಿಚಡಿ ಪಕ್ಷಗಳ ಒಕ್ಕೂಟ ಸರ್ಕಾರ ಬಂದನಂತರ ಆಗಬಾರದ್ದೆಲ್ಲ ಆಗುತ್ತಿದೆ.

'ರಾಜ್ಯಾಂಗ ತಮಗೆ ನೀಡಿರುವ ರಾಜಕೀಯಾಧಿಕಾರವನ್ನು ಇತ್ತೀಚೆಗೆ ಉತ್ತರ ಪ್ರದೇಶ ಮತ್ತು ಬಿಹಾರ ರಾಜ್ಯಗಳ ಮುಖ್ಯಮಂತ್ರಿಗಳು ಪಕ್ಷದ್ರೋಹಿಗಳನ್ನು ಸಂಪುಟಕ್ಕೆ ಸೇರಿಸಿಕೊಳ್ಳುವ ಮೂಲಕ ಲಜ್ಜಾರಹಿತರಾಗಿ ದುರ್ಬಳಕೆ ಮಾಡಿಕೊಂಡಿದ್ದಾರೆನ್ನುವುದು ಭಾರತೀಯರೆಲ್ಲರೂ ತಲೆತಗ್ಗಿಸಬೇಕಾದ ಸಂಗತಿ. ಖಜಾನೆಗಳನ್ನು ಬರಿದು ಮಾಡುವ , ರಾಷ್ಟ್ರವನ್ನು ಶೋಷಿಸುವ ದುರ್ನೀತಿ ಇದು. ಪ್ರತಿಯೊಂದು ಇಲಾಖೆಯ ವ್ಯವಹಾರಗಳನ್ನು ಸಮಗ್ರವಾಗಿ ಹಾಗೂ ಅಖಂಡವಾಗಿ ನಡಸಿದಾಗ ಮಾತ್ರ ಸುಶೀಘ್ರ ಪ್ರಪೂರ್ಣ ಪ್ರಯೋಜನ ಲಭಿಸುತ್ತದೆನ್ನುವುದು ದಕ್ಷ ಆಡಳಿತಗಾರರ ಮತ. ಹೆಚ್ಚು ಸಂಖ್ಯೆಯ ಮಂತ್ರಿಗಳಿಗೆ ಖಾತೆಗಳನ್ನು ಜೋಡಿಸುವ ಸಲುವಾಗಿ, ಒಂದೊಂದು ಇಲಾಖೆಯ ಅಂಗಾಂಗಗಳನ್ನು ತುಂಡುತುಂಡಾಗಿ ಕತ್ತರಿಸಿದಾಗ ಮೂಲ ಭೂತವಾದ ಆಡಳಿತ ತತ್ತ್ವಕ್ಕೆ ಭಂಗವೊದಗುತ್ತದೆ. ಆ ತುಂಡುಗಳಿಂದಲೇ ಹೆಮ್ಮೆ

ಪಟ್ಟುಕೊಳ್ಳುವ ಮಂತ್ರಿಗಳ ಬಗ್ಗೆ ಕನಿಕರ ಮೂಡುತ್ತದೆ. ಆಪ್ತಕಾರ್ಯದರ್ಶಿಯನ್ನೊಳಗೊಂಡ ಖಾಸಗಿ ಸಿಬ್ಬಂದಿ, ಕಾರು, ಬಂಗಲೆ, ಚಾಲಕರು, ಸೇವಕರು, ಉಚಿತ ವಿದ್ಯುತ್ತು, ನೀರು, ಫೋನು, ಪ್ರಯಾಣ ಭತ್ಯ, ಭದ್ರತಾ ಪಡೆ, ಇಂಥ ಅನೇಕಾನೇಕ ಸೌಲಭ್ಯಗಳಿಂದ ಅವರು ಸಂತೃಪ್ತರಾಗುತ್ತಾರೆ.

'ಮಂತ್ರಿಗಳ ಗುಣಮಟ್ಟದ ಬಗ್ಗೆಯೂ ಆತಂಕವಿದೆ. ಯಾರಾದರೂ ಮಂತ್ರಿಯಾಗಬಹುದೆಂಬ ಕಲ್ಪನೆ ಮುಗ್ಧತೆಯ ಫಲವೆಂದು ತೋರುತ್ತದೆ. ಆಡಳಿತವೊಂದು ಗಂಭೀರವಾದ ವ್ಯವಹಾರ. ಆ ವ್ಯವಹಾರ ನಿರ್ವಹಣೆಗೆ ಬುದ್ಧಿಬೇಕು, ಪ್ರತಿಭೆಬೇಕು. ಹೊಸ ಹೊಸ ತಂತ್ರಜ್ಞಾನಗಳ ಅವತಾರದಿಂದಾಗಿ ಆಡಳಿತ ಹೆಚ್ಚು ಹೆಚ್ಚು ಸಂಕೀರ್ಣವಾಗುತ್ತಿದೆ. ರಾಜಾಜಿಯವರಿಂದ ಕಲಿತ ಪಾಠ ನನ್ನ ನೆನಪಿಗೆ ಬರುತ್ತಿದೆ. ಮಂತ್ರಿಯಾದವನು ವೃತ್ತಿಸಮರ್ಥರೊಡನೆ ಚರ್ಚಿಸಿ, ತನ್ನ ಖಾತೆಯ ಸಮಸ್ತ ವಿವರಗಳನ್ನರಿಯಬೇಕು. ಖಾತೆಗೆ ಸಂಬಂಧಪಟ್ಟ ಸಾಹಿತ್ಯವನ್ನು ಅಧ್ಯಯನ ಮಾಡಬೇಕು. ಆಡಳಿತದ ರಚನೆಯನ್ನು, ಅದರ ಅಂಗಾಂಗಗಳ ನಡುವಣ ಆಂತರಿಕ ಸಂಬಂಧವನ್ನು, ಆಡಳಿತ ವ್ಯವಹಾರದಚೌಕಟ್ಟನ್ನು, ಗತಿಗಮನ ರೀತಿನೀತಿ ಕ್ರಮಗಳನ್ನು ಅವರು ಮೊದಲೇ ತಿಳಿದುಕೊಳ್ಳದಿದ್ದರೆ ನೌಕರಶಾಹಿಯ ಅರಣ್ಯದಲ್ಲಿ ದಾರಿ ತಪ್ಪುತ್ತದೆ ; ನೌಕರರು ಲಕ್ಷ್ಮಣ ರೇಖೆಯನ್ನು ನಿರ್ಮಿಸುತ್ತಾರೆ. ನಾಯಕತ್ವವನ್ನು ತನ್ನ ಕೈಯಲ್ಲಿ ಭದ್ರಪಡಿಸಿಕೊಂಡು, ಹೊಣೆಯುಳ್ಳ ಸಹೋದ್ಯೋಗಿಗಳನ್ನು ನೌಕರರನ್ನು ಮಂತ್ರಿಯಾದವನು ಕಾರ್ಯನಿರ್ಣಯ ಮತ್ತು ನಿರ್ವಹಣೆಗಳಲ್ಲಿ ತೊಡಗಿಸಬೇಕು. ವೈಯಕ್ತಿಕ ಮತ್ತು ಸ್ವಪಕ್ಷೀಯ ಪಕ್ಷಪಾತ ಪೂರ್ವಗ್ರಹ ದೋಷಗಳನ್ನು ದೂರವಿಡಬೇಕು. ಅವುಗಳೊಡನೆ ರಾಜಿಮಾಡಿಕೊಳ್ಳಕೂಡದು; ಅವು ನಿರ್ಣಯಾವಸರದಲ್ಲಿ ಪರಿಣಾಮ ಬೀರಬಾರದು. ತಪ್ಪನ್ನೊಪ್ಪಿಕೊಳ್ಳುವ ಮತ್ತು ತಿದ್ದಿಕೊಳ್ಳುವ ನೈತಿಕಧೈರ್ಯವಿರಬೇಕು. ತಪ್ಪುಗಳನ್ನು ಪುನರಾವರ್ತನೆ ಮಾಡಬಾರದು. ಪ್ರತಿಯೊಂದು ವಿವರಗಳಿಗೂ ಗಮನಹರಿಸಬೇಕು.

'ಈ ಆದರ್ಶಗಳನ್ನು ಪಾಲಿಸುವ ಮಂತ್ರಿಗಳು ವಿರಳ. ಕೇಂದ್ರ ಮಂತ್ರಿಗಳು ಖಜಾನೆಯ ಖರ್ಚಿನಲ್ಲಿ ತಮ್ಮ ಕ್ಷೇತ್ರದಲ್ಲಿ ಸುಲಭ ಜನಪ್ರಿಯತೆ ಸಂಪಾದಿಸುವ ಸಲುವಾಗಿ ಯಾವಾಗಲೂ ಹಾಜರು. ಹೀಗಾಗಿ ರಾಷ್ಟ್ರೀಯ ಸರ್ಕಾರವೆಂಬುದು ಹುಸಿಯಾಗಿದೆ. ಇಂದಿನ ಕುಟಿಲನೀತಿಯ ರಾಜಕೀಯ ಯುಗದಲ್ಲಿ ಅಪರಾಧಿಗಳು ಮತ್ತು ದರೋಡೆಕೋರರು ಸಚಿವಮಂಡಲಿಯನ್ನು ಪ್ರವೇಶಿಸುತ್ತಾರೆ. ಸಾರ್ವಜನಿಕ ಅಧಿಕಾರ ವೈಯಕ್ತಿಕ ಪ್ರತಿಷ್ಠೆಯನ್ನಾಗಲಿ, ಸ್ವಾರ್ಥಲಾಭವನ್ನಾಗಲಿ ಪಡೆಯಬಹುದಾದ ಹಾರು ಹಲಗೆಯಾಗದೆ, ರಾಷ್ಟ್ರೀಯ ಸಂಪತ್ತನ್ನು ಹೆಚ್ಚಿಸುವ, ಸಮಸ್ತಪ್ರಜೆಗಳ ಉನ್ನತಿಯನ್ನು ಸಾಧಿಸುವ ಸೃಜನಶೀಲ ಸಾಧನೆಯಾಗಬೇಕು. ಮಂತ್ರಿಗಳ ವರ್ತನೆಯಲ್ಲಿ ಹಾಗೂ ರೀತಿನೀತಿಗಳಲ್ಲಿ ಕ್ರಾಂತಿಯಾಗುವುದಾದರೆ, ಅದರ ಸತ್ಪರಿಣಾಮ ಇಡೀ ಪ್ರಜಾಸ್ತೋಮದ ಮೇಲಾಗುತ್ತದೆ.

'ಸಚಿವ ಸಂಪುಟಗಳ ಗಾತ್ರ, ಮತ್ತು ಮಂತ್ರಿಗಳ ಅರ್ಹತೆಯನ್ನು ಕುರಿತ ವಿಧಿವಿಧಾನಗಳು ರಾಜ್ಯಾಂಗದಲ್ಲಿ ಬಿಟ್ಟುಹೋಗಿವೆ. ಈ ಪಿಗ್ಗದ ತುಂಬಣೆ ಅನಿವಾರ್ಯವೆಂದು ಐವತ್ತು ವರ್ಷಗಳ ಅನುಭವ ಎಚ್ಚರಿಸುತ್ತಿದೆ. ಡಾ. ರಾಜೇಂದ್ರಪ್ರಸಾದ್‌ರಿಗೂ ಈ ಲೋಪದ ಅರಿವಿತ್ತು. ನ್ಯಾಯಮೂರ್ತಿ ವೆಂಕಟಾಚಲಯ್ಯ ಅವರ ನೇತೃತ್ವದಲ್ಲಿ ರಚನೆಯಾಗಿರುವ ರಾಜ್ಯಾಂಗ ಪರಾಮರ್ಶನ ಸಮಿತಿ ಈ ಲೋಪದೋಷಗಳ ಕಡೆಗೆ ಗಮನ ಹರಿಸುತ್ತದೆಂದು ಯೋಚಿಸಬಹುದಾಗಿದೆ'.

ಪರಿಪಕ್ವಾನುಭವಿ, ನೀತಿ ನಿಷ್ಠ ಪ್ರತಿಭಾವಂತ ಮೇಧಾವಿ ರಾಜಕಾರಣಿ ಭಾರತರತ್ನ

ಸುಬ್ರಮಣಿಯಮ್ ಅವರು ರಾಷ್ಟ್ರ ಹಿತದೃಷ್ಟಿಯಿಂದ ಅಭಿವ್ಯಕ್ತಪಡಿಸಿರುವ ಪ್ರಾಮಾಣಿಕ ಭಾವನೆಗಳನ್ನು ರಾಷ್ಟ್ರದ ಪ್ರತಿಯೊಬ್ಬ ಪ್ರಜೆಯೂ ರಾಷ್ಟ್ರಾಭಿಮಾನಿಯೂ , ರಾಷ್ಟ್ರಭವಿಷ್ಯದ ದೃಷ್ಟಿಯಿಂದ ಹಾಗೂ ಶ್ರದ್ಧೆಯಿಂದ ಆಲೋಚನೆ ಮಾಡಬೇಕಾಗಿದೆ ; ಈ ಸಂದೇಶವನ್ನು ಎಲ್ಲ ಕಡೆಗೂ ಬಿತ್ತರಿಸಬೇಕಾಗಿದೆ. ಪರಾಮರ್ಶನ ಸಮಿತಿ ಶಾಸಕರಿಗೂ ಮಂತ್ರಿಗಳಿಗೂ ವಿಧಿನಿಷೇಧಗಳನ್ನು ರೂಪಿಸುವುದಾದರೆ ರಾಷ್ಟ್ರದ ಭವಿಷ್ಯ ಭವ್ಯೋಜ್ವಲವಾಗುತ್ತದೆ.

ಇತ್ತೀಚೆಗೆ ನಿವೃತ್ತ ನ್ಯಾಯಾಧೀಶ ಹಾಗೂ ಖ್ಯಾತ ಅಂಕಣಕಾರ ಶ್ರೀ ಶಂಕರ ಬಂಡೇರಿ ಪ್ರಧಾನಿ ಹಾಗೂ ವರಿಷ್ಠ ನ್ಯಾಯಮೂರ್ತಿಯ ನೇಮಕಾತಿಯ ವಿಧಾನ ಸರಿಯಿಲ್ಲ, ಆ ಸಂಬಂಧದ ಸಂವಿಧಾನ ಬದಲಾವಣೆ ಅವಶ್ಯವೆಂದಿದ್ದಾರೆ. ( ಅಂತರಂಗ ೨೪.೫.೨೦೦೦) . ಇಂಥ ಇನ್ನು ಹಲವು ಅಭಿಪ್ರಾಯಗಳು ಹೊರಬರಬಹುದು. ಇವನ್ನೆಲ್ಲ ಪರಾಮರ್ಶ ಸಮಿತಿ ಪರಿಶೀಲಿಸುತ್ತದೆಂಬ ವಿಶ್ವಾಸವಂತು ಇದ್ದೇ ಇದೆ.

ಸಬ್ ಕೋ ಸನ್ಮತಿ ದೇ ಭಗವಾನ್ !

## ೪. ಕೋಗಿಲೆಯ ಕಂಠಕ್ಕೆ ಕುತ್ತು

ಜಾನಪದ ಕೋಗಿಲೆಯೆಂದೇ ಕನ್ನಡನಾಡಿನಲ್ಲೆಲ್ಲ ಪ್ರಕೀರ್ತಿತರಾದ ಜನಪದ ರತ್ನ ತರೀಕೆರೆಯ ಶ್ರೀ ಕೆ. ಆರ್. ಲಿಂಗಪ್ಪ ಕಳೆದ ಮೇ ತಿಂಗಳಲ್ಲಿ ( ೨೦೦೦) ತೀರಿಕೊಂಡಾಗ ಜಾನಪದ ತೇರಿನ ಒಂದು ಕಳಶ ಮುರಿದುಬಿದ್ದಂತಾಗಿದೆ. ತರೀಕೆರೆ ಲಿಂಗಪ್ಪ ಮತ್ತು ಜಾನಪದ ಎರಡೂ ಅಭಿನ್ನ. ಇಡೀ ಕರ್ನಾಟಕದಲ್ಲಿ ಜಾನಪದ ಕೋಗಿಲೆಯೆಂದರೆ ಅವರೊಬ್ಬರೇ ! ಕೋಗಿಲೆಯ ಕಂಠಕ್ಕಾದರೂ ಋತುಮಾನವುಂಟು; ಜಾನಪದ ಕೋಗಿಲೆಗೆ ಋತುಮಾನದ ನಿರ್ಬಂಧವೇ ಇಲ್ಲ. ಅವರ ಶ್ರೀಕಂಠ ಮಾಧುರ್ಯದಲ್ಲಿ ಸ್ವರ್ಗೀಯ ಸುಖವನ್ನು ಕಾಣದವರಿಲ್ಲ. ಅವರು ಹಾಡಲು ಶುರುಮಾಡಿದರೆಂದರೆ, ಕಾಲ ನಿಲ್ಲುತ್ತಿತ್ತು. ಜಾನಪದವೇ ಕಾಯಕ, ಅದೇ ಪೂಜೆ, ಅದೇ ತಮ್ಮ ಬದುಕೆಂಬಂತೆ, ಅದಕ್ಕೆ ತಮ್ಮನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡವರು ಅವರು. ಹಾಲೂಡುತ್ತಿದ್ದಂತೆ ಜತೆಜತೆಗೆ ತಮಗೆ ಜಾನಪದ ದೀಕ್ಷೆಯನ್ನು ಕೊಟ್ಟ ಪ್ರಥಮಗುರು ತಮ್ಮ ತಾಯಿ ಬಸಮ್ಮನವರೆಂದು ಅವರಿಗೆ ಹೆಮ್ಮೆ. ಜಾನಪದ ಸೇವೆಗೆಂದೇ ಮಗನನ್ನು ಕರುಣಿಸಿದ ಆ ತಾಯಿ ಧನ್ಯೆ!

೧೯೬೭ನೆಯ ಇಸವಿಯಲ್ಲಿ ಅವರು ತರೀಕೆರೆಯಲ್ಲಿ ಗೊರುಚ ಅವರೊಡನೆ ಅದ್ಭುತವಾಗಿ ನಡೆಸಿದ ಅಖಿಲ ಕರ್ನಾಟಕ ಜಾನಪದ ಸಮ್ಮೇಲನ ಕನ್ನಡ ನಾಡಿನ ಮಣ್ಣಿನ ಕಣಕಣಗಳಲ್ಲಿ ಜಾನಪದ ಮಲ್ಲಿಗೆಯನ್ನರಳಿಸಿತು, ಚೈತನ್ಯವನ್ನುಕ್ಕಿಸಿತೆಂಬುದನ್ನು ಮರೆಯಲಾಗದು. ಆದ್ದರಿಂದ ಇಂದಿನ ಮುಂದಿನ ಜಾನಪದವಿದ್ವಾಂಸರು ಮತ್ತು ಆಸಕ್ತರು ಅವರ ನೆನಪಿಗೆ ಕೃತಜ್ಞತೆಯ ಮಂದಾರ ಪುಷ್ಪವನ್ನು ಸಲ್ಲಿಸಿ ಮುಂದುವರಿಯುವುದು ಸೌಜನ್ಯದ ಲಕ್ಷಣ.

ಅವರು ವಕೀಲರು, ಸಮಾಜ ಸೇವಾಧುರಂಧರರು ನಿಜ. ನಗರ ಪ್ರದೇಶದಲ್ಲಿ ವಾಸವಾಗಿದ್ದು, ಲಾಬಿ ನಡೆಸಿದ್ದರೆ, ಅವರಿಗೆ ನ್ಯಾಯವಾಗಿ ಸಲ್ಲಬೇಕಾಗಿದ್ದ ಪ್ರಶಸ್ತಿಗಳು ದಕ್ಕುತ್ತಿದ್ದುವೆಂದು ತೋರುತ್ತದೆ. ಎಂಥ ದೊಡ್ಡ ಬಹುಮಾನವಾದರೂ, ಯೋಗ್ಯತೆ ಇದ್ದರೆ ಸಾಲದು. ಲಾಬಿಯಿಂದಲೇ ಒದಗಬೇಕು. ಕುವೆಂಪು ವಿಶ್ವವಿದ್ಯಾನಿಲಯದ ಸ್ಥಾಪನೆಗೆ ನಾಂದಿ ಹಾಡಿದ ಒಬ್ಬಿಬ್ಬರಲ್ಲಿ ಅವರೊಬ್ಬರೆಂಬ ಸತ್ಯ ಸಂಗತಿ ನನಗಲ್ಲದೆ ಬೇರಾರಿಗೂ ಗೊತ್ತಿಲ್ಲ.

ವಕೀಲರಾಗುವ ಮುನ್ನ ಲಿಂಗಪ್ಪನವರು ವಯಸ್ಕರ ಶಿಕ್ಷಣ ಸಮಿತಿಯಲ್ಲಿ ಕೆಲವು ಕಾಲ ದುಡಿದಿದ್ದರೆಂಬುದನ್ನು ನೆನೆಯುತ್ತ ಅವರ ಆತ್ಮಕ್ಕೆ ಶಾಂತಿ ಲಭಿಸಲೆಂದು ಪುಸ್ತಕ ಪ್ರಪಂಚ ಕಂಬನಿದುಂಬಿ ಹಾರೈಸುತ್ತದೆ.

**ದೇಜಗೌ**

# ಪ್ರೇಮ ಮಂದಾರ

**ಶೋಭಾ ಪ್ರಮೋದ್**
ಮಹಾಲಕ್ಷ್ಮೀ ಏಜನ್ಸೀಸ್
ಪೋಸ್ಟ್: ಮಹಂಗಾವ-೪೦೨ ೧೦೪
ರಾಯಗಡ್ ಜಿಲ್ಲೆ ಮಹಾರಾಷ್ಟ್ರ

''ಪೋಸ್ಟ್'' ಎಂಬ ಅಂಚೆಯವನ ಕೂಗಿಗೆ ಅಡುಗೆ ಮನೆಯಿಂದ ಧಾವಿಸಿ ಬಂದೆ. ಪತ್ರವನ್ನು ಒಡೆದು ಓದಿದಾಗ ಹಿಂದಿನ ಲವ-ಲವಿಕೆ, ಉತ್ಸಾಹ-ಉಲ್ಲಾಸಗಳು ಮಾಯವಾಗಿಬಿಟ್ಟವು. ಮಗ ಪ್ರಶಾಂತ ಮಂಗಳೂರಿನ ಕೆನರಾ ಬ್ಯಾಂಕಿನಲ್ಲಿ ನೌಕರಿ ಮಾಡುತ್ತಿದ್ದು, ಆತ ಉತ್ತರಿಸಿದ್ದ.

ಪ್ರಿಯ ಅಮ್ಮ ನಮಸ್ಕಾರಗಳು,

ಎಷ್ಟೋ ದಿವಸಗಳಿಂದ ನಿನಗೆ ಒಂದು ವಿಷಯವನ್ನು ತಿಳಿಸಬೇಕೆಂದುಕೊಂಡಿದ್ದೇನೆ. ನನ್ನ ಬ್ಯಾಂಕಿನಲ್ಲಿ ಸುದೇಷ್ಣಾ ಅಂತ ಹುಡುಗಿಯಿದ್ದಾಳೆ. ಅವಳಪ್ಪ ಕನ್ನಡದ ಖ್ಯಾತ ಕವಿ ವಿವೇಕಾನಂದ ಕಾಮತ್. ನಾವಿಬ್ಬರೂ ವಿವಾಹವಾಗಬೇಕೆಂದು ತೀರ್ಮಾನಿಸಿದ್ದೇವೆ. ಹುಡುಗಿ ಸ್ವಭಾವದಿಂದ ತುಂಬ ಒಳ್ಳೆಯವಳು. ಸ್ವ-ಜಾತಿಯಾದ ಕಾರಣ ನೀನು ತಿರಸ್ಕರಿಸಲಾರೆ ಎಂಬ ಅಚಲ ವಿಶ್ವಾಸ ನನ್ನದು. ಆದರೂ ಅಪ್ಪನ ಕಿವಿಗೂ ಈ ವಿಷಯ ಹಾಕಿಬಿಟ್ಟರೆ ಒಳ್ಳೆಯದು...

ಮುಂದೆ ಓದಲಾರದೆ, ತಲೆಸುತ್ತು ಬಂದಂತಾಗಿ, ಕುಸಿದು ಕುಳಿತೆ.

ಒಬ್ಬನೇ ಮಗನೆಂದು ಪ್ರಶಾಂತನನ್ನು ಅತಿ ಮುದ್ದಿನಿಂದ ಬೆಳೆಸಿದ್ದೆವು. ಡಾಕ್ಟರ್, ಇಂಜನಿಯರ್ ಓದಿಸಬೇಕೆಂದು ಇಚ್ಛೆಯಿದ್ದರೂ, ಆತನಿಗೆ ಪ್ರವೇಶ ಸಿಗಲಿಲ್ಲ. ಬಿ.ಕಾಂ ಡಿಗ್ರಿ ಮುಗಿಸಿ, ಎರಡು ವರ್ಷ ನಿರುದ್ಯೋಗಿಯಾಗಿ, ಅಂತೂ ಮಂಗಳೂರಿನ ಬ್ಯಾಂಕಿನಲ್ಲಿ ನೌಕರಿಗೆ ಸೇರಿದಾಗ ಸಮಾಧಾನದ ನಿಟ್ಟುಸಿರು ಬಿಟ್ಟಿದ್ದೂ ಸುಳ್ಳಲ್ಲ. ಇದೀಗ ಆತ ಬರೆದ ಪತ್ರ ಓದಿದರೆ ಎದೆ ಹಾರಿದಂತಾಗಿದೆ. ನನ್ನೆದೆಯಲ್ಲಿ ಇಷ್ಟು ಕಾಲದ ತನಕ ತಣ್ಣಗೇ ಅವಿತುಕೊಂಡಿದ್ದ ನೋವುಗಳು, ವ್ಯಥೆಗಳು ಗರಿಗೆದರಿ ಹಾರಿದಂತೆ, ನಿಗಿ-ನಿಗಿ ಕುಲುಮೆಯ ಕೆಂಡದಂತೆ, ಎದೆ ಅಗ್ನಿ ಧಗ-ಧಗಿಸಿ ಕಣ್ಣಾಲೆ ಅಟ್ಟಹಾಸ ಮಾಡಿದಂತೆ ಕಾಡತೊಡಗಿದುವು.

ಏನೋ ನಿಶ್ಚಯಿಸಿಕೊಂಡವಳಂತೆ- ''ಮಂಗಳೂರಿಗೆ ಬರುತ್ತೇನೆ. ಬಸ್‌ಸ್ಟಾಂಡಿನಲ್ಲಿ ಕಾದಿರು'' ಎಂದು ಬಸ್ ತಲುಪುವ ವೇಳೆಯನ್ನು ಮಗನಿಗೆ ಫೋನಿನ ಮೂಲಕ ತಿಳಿಸಿದೆ. ಗಂಡನಿಗೂ ಏನೋ ಹಾರಿಕೆಯ ಉತ್ತರ ನೀಡಿ, ಮಗನ ನೆನಪಾಗುವುದರಿಂದ ಒಮ್ಮೆ ನೋಡಿ ಬರುತ್ತೇನೆಂದು ಹೇಳಿ ಪ್ರಯಾಣಿಸಿದೆ. ಮತ್ತದೇ ನೋವು-ಅದೇ ಏಕಾಂತ-ಅದೇ ವಿರಹ!

ರಾತ್ರಿ ಹತ್ತಕ್ಕೆ ಮಂಗಳೂರು ತಲುಪಿದಾಗ ಪ್ರಶಾಂತ ನಗುತ್ತ ಕೈಬೀಸಿದ. ''ಅಮ್ಮ ಇದೇನಿದು? ಅಚಾನಕ್ ಆಗಮಿಸಿದೆ? ವಿಸ್ಮಯ ನೋಟ ಬೀರಿದವನತ್ತ ಬಳಿ ಸಾರಿ ಮೆಲ್ಲಗೇ, ''ನೋಡು ನಿನ್ನಲ್ಲಿ ತುಂಬ ಮಾತನಾಡುವುದಿದೆ. ನಾಳೆ ಸುದೇಷ್ಣಾಳಿಗೆ ನಿನ್ನ ಬಾಡಿಗೆ ಮನೆಗೆ ಬರಲಿಕ್ಕೆ ತಿಳಿಸು. ಸೊಸೆಯನ್ನು ನಾನು ನೋಡಬೇಕಲ್ಲ''?! ನನ್ನ ಕಂಗಳಿಂದ ದುಮುಕುತ್ತಿದ್ದ ಕಂಬನಿ, ಪ್ರಶಾಂತನಿಗೆ ಕಾಣಬಾರದೆಂದು ತಲೆತಗ್ಗಿಸಿದ ನಾಟಕ ಮಾಡಿದೆ.

ಬೆಳಿಗ್ಗೆ ಪ್ರಶಾಂತ ಹೋಗಿ ಸುದೇಷ್ಣಾಳನ್ನು ಕರೆದುಕೊಂಡು ಬಂದ. ಆಕೆಯ ಹೆತ್ತವರು ಈ ವಿವಾಹಕ್ಕೆ ಸಮ್ಮತಿ ಕೊಟ್ಟಿದ್ದ ಕಾರಣ ಬಹಳ ಹರ್ಷಚಿತ್ತಳಾಗಿಯೇ ಕಂಡುಬಂದಳು.

ಚೂಡಿದಾರ್ ಹಾಕಿದ್ದರೂ ಬಂದವಳೇ ನನ್ನ ಕಾಲಿಗೆರಗಿ ನಮಸ್ಕರಿಸಿದಾಗ ಗೌರವಾದರಗಳನ್ನು ಉಳಿಸಿಕೊಂಡಿರುವ ಹುಡುಗಿ ಪರವಾಗಿಲ್ಲ ಎಂದು ಕೊಂಡೆ.

ಸುಮಾರು ಐದಡಿ ಎತ್ತರ, ನೀಳ ನಾಸಿಕ, ಮುದ್ದಾದ ತುಟಿ, ಗೌರವರ್ಣ, ನಕ್ಕರೆ ಕೆನ್ನೆಗೆ ಗುಳಿ ಬೀಳುವಂತಹ ಆಕರ್ಷಕ ವ್ಯಕ್ತಿತ್ವ. ನಾನು ತಿರಸ್ಕರಿಸುವ ಹಾಗೆ ದೈಹಿಕ ನ್ಯೂನತೆಗಳಿರಲಿಲ್ಲ. ಆಕೆಯ ಬೆನ್ನು ತಟ್ಟಿ, ''ನೋಡು ಮಗು, ಪ್ರಶಾಂತ ನಿನ್ನನ್ನು ಮೆಚ್ಚಿದ್ದು ಸುಳ್ಳಲ್ಲ. ಆದರೂ ನಿನಗೆ ನಾನೊಂದು ವಿಷಯ ತಿಳಿಸುತ್ತೇನೆ. ಮೊದಲು ಕಾಫಿ ಕುಡಿ''. ಸುದೇಷ್ಣಾ ಕಾಫಿ ಕುಡಿದಾದ ಬಳಿಕ ನನ್ನ ಅಂತರಂಗದ ಕಥೆ ಬಿಚ್ಚಿದೆ....

''ಸುಮಾರು ಮೂವತ್ತು ವರ್ಷಗಳ ಹಿಂದೆ ನಿನ್ನ ತಂದೆ ವಿವೇಕ್ ಅವಿವಾಹಿತರಾಗಿದ್ದರು. ಕನ್ನಡದ ಉದಯೋನ್ಮುಖ ಕವಿಯಾದ ಕಾರಣ ಕವಯತ್ರಿಯಾದ ನನ್ನೊಂದಿಗೆ ಪತ್ರ-ಮೈತ್ರಿ ಬೆಳೆಯಿತು. ಅವರನ್ನು ನಾ ನೋಡಿರಲಿಲ್ಲ. ನಿನಗೆ ಆಶ್ಚರ್ಯವೆನಿಸಬಹುದು ಇನ್ನೂ ತನಕ ಫೋಟೋ ಕೂಡ ನೋಡಿಲ್ಲ! ತೀರ ಹಚ್ಚಿಕೊಂಡು ದಿನಾಲೂ ಪತ್ರಿಸುತ್ತಿದ್ದೆ. ನನಗರಿವಿಲ್ಲದೆ ಮೊದ-ಮೊದಲು ಕವಿತೆಗಳನ್ನು ಹೊಗಳುತ್ತಿದ್ದ ನಾನು ಬಳಿಕ ಅವರನ್ನೇ ಪ್ರೀತಿಸಲಾರಂಭಿಸಿದೆ. ದೈಹಿಕ- ಆಕರ್ಷಣೆ ಪ್ರಣಯ. ಆದರೆ ಪ್ರೀತಿಯೋ ದೇಹ-ಮನಸ್ಸುಗಳನ್ನು ಮೀರಿ ನಿಂತದ್ದು. ನಾನು ಬಡವಳೆಂದು ಅವರು ನನ್ನನ್ನು ನಿರಾಕರಿಸಿದಾಗ, ಖಿನ್ನತೆಗೆ ಒಳಗಾಗಿ ಮಾನಸಿಕ ನೋವು ತಿಂದೆ. ಅಷ್ಟೆಲ್ಲ ಪ್ರೀತಿ-ಆತ್ಮೀಯತೆ- ಆದರ್ಶಗಳನ್ನು ಪತ್ರದುದ್ದಕ್ಕೂ ಚೆಲ್ಲುತ್ತಿದ್ದ ಅವರು ಶ್ರೀಮಂತ ಹುಡುಗಿಯನ್ನು ವಿವಾಹವಾಗಿ ಈ ಬಡ ಗೆಳತಿಗಾಗಿ ವಿವಾಹ ಆಮಂತ್ರಣ ಪತ್ರಿಕ ಕೂಡ ಕಳುಹಿಸಲಿಲ್ಲ! ಇಂದಿಗೂ ನನ್ನದು ದೇವರಲ್ಲಿ ಒಂದೇ ಪ್ರಾರ್ಥನೆ. ಅವರು ಸುಖವಾಗಿರಲಿ ಎಂದು. ಆಶ್ಚರ್ಯವೆಂದರೆ ನನ್ನ ಹೊಟ್ಟೆಯಲ್ಲಿ ಹುಟ್ಟಿದ ಪ್ರಶಾಂತ ಅವರ ಮಗಳಾದ ನಿನ್ನನ್ನು ಪ್ರೀತಿಸಿದ್ದಾನೆ! ವಿಧಿಯಾಟವೆಂದರೆ ಇದೇ ಇರಬೇಕು! ನನ್ನ ಜಾಗದಲ್ಲಿ ಬೇರೆ ಯಾವ ಹೆಣ್ಣಿದ್ದರೂ ಮುಯ್ಯಿಗೆ ಮುಯ್ಯಿ ತೀರಿಸಿಕೊಂಡು, ಮಗನ ಕಿವಿಚುಚ್ಚಿ, ಈ ವಿವಾಹ ತಪ್ಪಿಸುತ್ತಿದ್ದರು. ಆದರೆ 'ದ್ವೇಷದಿಂದ ಪ್ರೀತಿ ಬೆಳೆಯದು. ಪ್ರೀತಿಯಿಂದಲೇ ಪ್ರೀತಿ ಜನಿಸುವುದು' ಎಂಬ ಮಾತಿನಲ್ಲಿ ನನಗೆ ಅಪಾರ ನಂಬಿಕೆಯಿದೆ. ಅದಕ್ಕಾಗಿ ನಿನ್ನ ತಂದೆಗೆ ಪ್ರಶಾಂತ್ ನನ್ನ ಮಗನೆಂದು ಗೊತ್ತಾದರೆ ಖಂಡಿತ ಈ ವಿವಾಹ ತಪ್ಪಿಸುತ್ತಾರೆ. ನೀನು ಹೆದರಬೇಡ. ನಿನ್ನ ಪ್ರೀತಿಯ ಪ್ರಶಾಂತ್ ಖಂಡಿತ ನಿನಗೆ ಸಿಗುತ್ತಾನೆ. ದೇವರು ''ನಿನಗೆ ಒಳ್ಳೆಯದು ಮಾಡಲಿ. ನನ್ನ ಆಶೀರ್ವಾದ ಸದಾ ನಿಮ್ಮಿಬ್ಬರಿಗಿದೆ.''

ನಾನು ಕಳಿಸಿಕೊಟ್ಟಂತೆ ಪ್ರಶಾಂತ-ಸುದೇಷ್ಣಾ ತಂದೆಯವರಿಗೆ ನನ್ನ ವಿಷಯ ತಿಳಿಸಲಿಲ್ಲ. ವಿವಾಹ ಸಮಯದಲ್ಲಿ ಸುದೇಷ್ಣಾಳ ತಂದೆ ವಿವೇಕಾನಂದರನ್ನು ಮೊದಲ ಬಾರಿಗೆ ನೋಡಿದೆ!

ವಿವಾಹ ಮುಗಿದಾದ ಬಳಿಕ ನನ್ನ ಬಳಿಗೆ ಬಂದು ವಿವೇಕಾನಂದ ನುಡಿದರು. ''ಕ್ಷಮಿಸಿ,, ನಿಮ್ಮನ್ನು ಎಲ್ಲೋ ನೋಡಿದಂತೆ ಆಗುತ್ತೆ. ಆದರೆ ನೆನಪಾಗಲಿಲ್ಲ.''

''ಹೌದು, ಕವಿಗಳೇ, ಸುಮಾರು ೩೦ ವರ್ಷಗಳ ಹಿಂದೆ ಕಾಲೇಜಿನ ಅಂತಿಮ ವರ್ಷದಲ್ಲಿ ಕಲಿಯುವ ಸುಧಾ ಎಂಬ ಕವಯತ್ರಿ ಸದಾ ತಮಗೆ ಪತ್ರಿಸಿದ್ದಳು. ಆಕೆಯ ಭಾವಚಿತ್ರ ನಿರಾಕರಿಸಿ, ''ಖಂಡಿತ ನಿನಗೆ ತಲೆ ಕೆಟ್ಟಿದೆ. ನಾನೆಂದಿಗೂ ನಿನ್ನ ಪ್ರೇಮಿಸಿರಲಿಲ್ಲ'' ಎಂದು

ಬರೆದಾಗ ವಿಷವನ್ನು ತಿಂದಿದ್ದಳು. ಆದರೆ ಸಾವು ಬಾರದೆ ಬದುಕುಳಿದು, ಮುಂದೆ ಕಲಿತು, ಕಾಲೇಜಿನ ಪ್ರಾಧ್ಯಾಪಕಳಾದಳು. ಅವಳೇ ಈಗ ನಿಮ್ಮ ಮುಂದೆ ನಿಂತಿರುವ ಪ್ರಶಾಂತನ ತಾಯಿ! ಅಂದಿನ ಸೇಡನ್ನು ನಾನಿಂದು ತೀರಿಸಿ, ನಿಮ್ಮ ಮಗಳನ್ನು ನಿರಾಕರಿಸಬಹುದಿತ್ತು. ಆದರೆ... ಪ್ರಶಾಂತ, ನನ್ನಷ್ಟೇ ಭಾವುಕ ಹುಡುಗ. ಅತನ ಬಾಳು ಹಾಳಾಗಬಾರದು. ಶೀಲಾ ಮುಗ್ಧಳಾದ ನಿಮ್ಮ ಮಗಳು ನನಗೇನು ಮಾಡಿದ್ದಾಳೆ? ಹಾಗಾಗಿ ಎಲ್ಲ ಮರೆತು ಸೊಸೆಯನ್ನಾಗಿಸಿ ಕೊಂಡಿದ್ದೇನೆ"....

ನನ್ನ ಕೊರೆತ ನಿಲ್ಲಿಸಿ ವಿವೇಕಾನಂದರತ್ತ ನೋಡಿದಾಗ, ಪಶ್ಚಾತ್ತಾಪದಿಂದ ಅವರ ಕಂಗಳಿಂದ ಕಂಗಳಿಂದ ಕಣ್ಣೀರು ಚಿಮ್ಮುವುದರಲ್ಲಿತ್ತು!

ಪ್ರೀತಿಯನ್ನು ಹಣದಿಂದಲೇ ಅಂದು ಅಳೆದ ಅವರ ಮುಂದೆ ಪ್ರೀತಿಯನ್ನು ಪ್ರೀತಿಯೊಂದಿಗೆ ತೂಗಿಸಿದ ನನ್ನಲ್ಲಿ ಇಂದು ಸಾರ್ಥಕತೆ ಅವತರಿಸಿತ್ತು. ಪ್ರೇಮ ಸೋತು ಗೆಲ್ಲುತ್ತದೆ. ಕಾಮ ಗೆದ್ದು ಸೋಲುತ್ತದೆ. ನಮ್ಮದು ಪ್ರೇಮ, ಪ್ರೇಮಿಸಿದರಾ ಕಾಮ.



ವಿಕಾಸವೇ ಬದುಕು. ಸಂಕೋಚವೇ ಮರಣ, ಪ್ರೇಮವೆಲ್ಲಾ ವಿಕಾಸ. ಸ್ವಾರ್ಥವೆಲ್ಲ ಸಂಕೋಚ. ಆದ್ದರಿಂದ ಪ್ರೇಮವೇ ಬದುಕಿನ ಧರ್ಮ.

-ಸ್ವಾಮಿವಿವೇಕಾನಂದ

# ಪ್ರಾಕೃತಿಕ ಹವಾನಿಯಂತ್ರಣ ಯಂತ್ರಗಳು

**ಪ್ರೊ. ಎಂ.ಎಸ್. ಗೋಪಾಲನ್**
೫೭, ಮಾರುತಿ ದೇವಸ್ಥಾನ ರಸ್ತೆ
ನಾಲ್ಕನೆಯ ಮುಖ್ಯ ರಸ್ತೆ
ಕುವೆಂಪುನಗರ, ಮೈಸೂರು ೫೭೦ ೦೦೭

ಪರಿಶುದ್ಧ ವಾತಾವರಣದಲ್ಲಿ ವಾಸ ಮಾಡಲು ಯಾರಿಗೆ ತಾನೆ ಇಷ್ಟವಿಲ್ಲ? ಆದರೆ, ಇದು ಈಚೀಚೆಗೆ ಹಗಲುಗನಸಾಗುತ್ತಿದೆ! ಕಳೆದ ಅರ್ಧಶತಮಾನದಲ್ಲಿ ಆಗಿರುವಷ್ಟು ಪ್ರಕೃತಿ ಮಾಲಿನ್ಯ ಹಿಂದೆಂದೂ ಆಗಿಲ್ಲವೆಂದು ತಿಳಿಸಲು ದುಃಖವಾಗುತ್ತದೆ. ಈ ರೀತಿ ಪ್ರಕೃತಿಯು ಮಾಲಿನ್ಯಗೊಳ್ಳಲು ಕಾರಣ ಏನು? ಕಾರಣಗಳು ಹಲವಾರು. ಅವುಗಳಲ್ಲಿ ಮುಖ್ಯವಾದವು ಯಾವುವೆಂದರೆ :೧. ವಾಯು ಮಾಲಿನ್ಯ; ೨. ಜಲಮಾಲಿನ್ಯ: ೩. ಭೂ ಮಾಲಿನ್ಯ; ೪. ಶಬ್ದ ಮಾಲಿನ್ಯ;

ಸದ್ಯಕ್ಕೆ ವಾಯುಮಾಲಿನ್ಯದ ಬಗ್ಗೆ ತಿಳಿಯೋಣ. ವಾಯು ಮಾಲಿನ್ಯಯಕ್ಕೆ ಹಲವಾರು ಕಾರಣಗಳಿವೆ. ಎಲ್ಲಕ್ಕಿಂತ ಮಿಗಿಲಾಗಿ, ಕಲ್ಲಿದ್ದಲು, ಡೀಸೆಲ್ ಮತ್ತು ಪೆಟ್ರೋಲ್ ಚಾಲಿತ ವಾಹನಗಳು ಸಾಕಷ್ಟು ಪ್ರಮಾಣದಲ್ಲಿ ಇಂಗಾಲದ ಮಾನಾಕ್ಸೈಡ್ ಮತ್ತು ಇಂಗಾಲದ ಡೈ ಆಕ್ಸೈಡ್ ಅನಿಲಗಳನ್ನು ವಾತಾವರಣಕ್ಕೆ ಹರಿದು ಬಿಡುತ್ತವೆ. ಈ ಎರಡು ಅನಿಲಗಳಲ್ಲಿ ಅತ್ಯಂತ ಮಾರಕವಾದದ್ದು ಇಂಗಾಲದ ಮಾನಾಕ್ಸೈಡ್. ಇಂಗಾಲದ ಡೈ ಆಕ್ಸೈಡ್ ಅನಿಲವು ಅಷ್ಟು ಮಾರಕವಲ್ಲದಿದ್ದರೂ, ಇದು ವಾತಾವರಣದ ಮೇಲೆ ತನ್ನದೇ ಆದ ದುಷ್ಪರಿಣಾಮವನ್ನು ಬೀರುತ್ತ ಬಂದಿದೆ. ಇದನ್ನು "ಗ್ರೀನ್ ಹೌಸ್ ಎಫೆಕ್ಟ್" ಹಸಿರು ಮನೆ ಪರಿಣಾಮ ಎನ್ನುತ್ತಾರೆ. ಇದಲ್ಲದೆ, ನಾವು ನಮ್ಮ ಸೌಕರ್ಯಕ್ಕಾಗಿ ಮತ್ತು ವಿನೋದಕ್ಕಾಗಿ ನಿತ್ಯ ಬಳಸುವ ರೆಫ್ರಿಜರೇಟರ್, ಏರ್ ಕಂಡಿಷನರ್ ಮತ್ತು ಟಿ.ವಿ. ಇತ್ಯಾದಿ ವಸ್ತುಗಳಿಂದಲೂ ಹೊಮ್ಮುವ ಕೆಲವು ವಿಷಾನಿಲಗಳು ವಾತಾವರಣವನ್ನು ಸಾಕಷ್ಟು ಹದಗೆಡಿಸಿವೆ. ಹೀಗೆಯೇ ಮುಂದುವರಿದರೆ ಪ್ರಪಂಚದಲ್ಲಿರುವ ಸಮಸ್ತ ಜೀವರಾಶಿಗಳು ನಶಿಸಿಹೋಗುತ್ತದೆ. ವಿಜ್ಞಾನವನ್ನು ಹಿತಮಿತವಾಗಿ ಬಳಸಿಕೊಳ್ಳಬೇಕು. ಅದಕ್ಕೆ ಕತ್ತಿಯಂತೆ ಎರಡು ಅಲಗುಗಳಿವೆ. ಒಂದು ಅಲಗು ಉಪಕಾರಿಯಾದರೆ, ಮತ್ತೊಂದು ವಿನಾಶಕಾರಿ! ವಿನಾಶಕಾರಿಯಾದ ಅಲಗಿನ ಬಗ್ಗೆ ಮಾನವನ ಅತ್ಯಂತ ಜಾಗ್ರತೆಯಿಂದಿರಬೇಕು. ಇಲ್ಲದಿದ್ದರೆ ತನ್ನ ಗೋರಿಯನ್ನು ತಾನೇ ತೋಡಿಕೊಳ್ಳಬೇಕಾಗುತ್ತದೆ. ಇತ್ತೀಚೆಗೆ ಮಾನವನು ವಿಜ್ಞಾನದ ದುಷ್ಪರಿಣಾಮಗಳ ಬಗ್ಗೆ ಸಾಕಷ್ಟು ಕಾಳಜಿ ವಹಿಸಲು ಆರಂಭಿಸಿದ್ದಾನೆ. ಇದು ಅತ್ಯಂತ ಸಂತಸ ತರುವ ಸುದ್ದಿ. ವಿಜ್ಞಾನಿಗಳು ತಮ್ಮ ಅಮೂಲ್ಯ ಸಂಶೋಧನೆಗಳಿಂದ ಪ್ರಕೃತಿಯನ್ನು ವಿರೂಪಗೊಳಿಸದೆ ಜೀವನ ಸುಗಮವಾಗಿ ಸಾಗಲು ಪ್ರಯತ್ನಿಸುತ್ತಿದ್ದಾರೆ. ಇಂಥ ಪ್ರಯತ್ನಗಳ ಪ್ರಾಕೃತಿಕ ಹವಾ ನಿಯಂತ್ರಣ ಯಂತ್ರದ ಸಂಶೋಧನೆ ಪ್ರಮುಖವಾದದ್ದು.

ಪ್ರಾಕೃತಿಕ ಹವಾ ನಿಯಂತ್ರಣ ಯಂತ್ರಗಳು (ನ್ಯಾಚುರಲ್ ಏರ್ ಕಂಡಿಷನರ್ಸ್) ವಿಜ್ಞಾನದ ಅತ್ಯಂತ ಪ್ರಮುಖ ಕೊಡುಗೆಗಳು. ಈ ನೂತನ ಯಂತ್ರಗಳನ್ನು ಇಂಗ್ಲೆಂಡಿನ ಬ್ರಿಸ್ಟಲ್

ಆಧಾರ : ಸೈನ್ಸ್ ಎಕ್ಸ್‌ಪ್ರೆಸ್ ಮ್ಯಾಗ್‌ಸೈನ್, ಸಪ್ಲಿಮೆಂಟ್ ಟು ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್ ಡೈಲಿ ದಿನಾಂಕ : ೨೮. ೩. ೨೦೦೦.

ವಿಶ್ವವಿದ್ಯಾಲಯ, ಫುಡ್ ರೆಫ್ರಿಜರೇಷನ್ ಅಂಡ್ ಪ್ರೋಸೆಸ್ ಎಂಜಿನಿಯರಿಂಗ್ ರಿಸರ್ಚ್ ಸೆಂಟರ್ ಮತ್ತು ಬಿಲ್ಡಿಂಗ್ ರಿಸರ್ಚ್ ಎಸ್ಟಾಬ್ಲಿಷ್‌ಮೆಂಟ್ ಎಂಬ ಸಂಸ್ಥೆಗಳು ಸಂಯುಕ್ತವಾಗಿ ನಿರ್ಮಿಸಿ, ಇತ್ತೀಚೆಗೆ ಬ್ರಿಸ್ಟಲ್ ವಿಶ್ವವಿದ್ಯಾಲಯದಲ್ಲಿ ಜರಗಿದ ಪ್ರದರ್ಶನದಲ್ಲಿ ಇಟ್ಟಿದ್ದುವು. ಇವುಗಳಲ್ಲಿ ಪ್ರಕೃತಿಗೆ ಹಾನಿಕರವಾದ ಯಾವುದೇ ವಸ್ತುವನ್ನು ಉಪಯೋಗಿಸಿಲ್ಲ. ಬದಲಾಗಿ, ಪ್ರಕೃತಿಯಲ್ಲಿ ಯಥೇಚ್ಛವಾಗಿ ಲಭ್ಯವಿರುವ ಸಾಧಾರಣ ಗಾಳಿಯನ್ನು ಮುಖ್ಯವಸ್ತುವಾಗಿ ಉಪಯೋಗಿಸಿ, ಹವಾನಿಯಂತ್ರಣ ಕಾರ್ಯ ನಡೆಸಲ್ಪಡುತ್ತದೆ! ಹವಾನಿಯಂತ್ರಣ ಕಾರ್ಯಕ್ಕೆ ಗಾಳಿಯಷ್ಟು ಉಪಯುಕ್ತ ವಸ್ತು ಬೇರೊಂದಿಲ್ಲ. ಕಾರಣ ಇಷ್ಟೆ. ಗಾಳಿಯು ಪರಿಸರವನ್ನು ಪ್ರದೂಷಿತಗೊಳಿಸುವುದಿಲ್ಲ. ಮೇಲಾಗಿ ಅದಕ್ಕೆ ತಗಲುವ ಖರ್ಚು ಅತ್ಯಲ್ಪ. ಪ್ರಾಕೃತಿಕ ಹವಾನಿಯಂತ್ರಣ ಯಂತ್ರಗಳು ವಿಜ್ಞಾನದ ಸರಳ ತತ್ವಗಳನ್ನು ಅನುಸರಿಸಿ ಕೆಲಸ ಮಾಡುತ್ತವೆ. ಈ ತತ್ವಗಳ ಸಾರಾಂಶ ಏನೆಂದರೆ, ಯಾವುದೇ ಅನಿಲ ಹಿಗ್ಗಿದಾಗ ಅದು ತಣ್ಣಗಾಗುತ್ತದೆ ಮತ್ತು ಅನಿಲ ಕುಗ್ಗಿದಾಗ ಬಿಸಿಯಾಗುತ್ತದೆ. ಗಾಳಿಯನ್ನು ಕುಗ್ಗಿಸಲೂ ಬಹುದು ಮತ್ತು ಹಿಗ್ಗಿಸಲೂ ಬಹುದು. ಈ ರೀತಿಯಿಂದ ನಮಗೆ ಬಿಸಿ ಮತ್ತು ಶೀತಲ ವಾತಾವರಣ ಲಭ್ಯವಾಗುತ್ತದೆ. ವಿಜ್ಞಾನಿಗಳ ಪ್ರಕಾರ ಪ್ರಾಕೃತಿಕ ಹವಾನಿಯಂತ್ರಣ ಸಂಶೋಧನೆಯಿಂದ ೮೦ ಡಿಗ್ರಿ ಸೆಲ್ಸಿಯಸ್ ಬಿಸಿ ನೀರನ್ನೂ ಮತ್ತು ೬ ಡಿಗ್ರಿ ಸೆಲ್ಸಿಯಸ್ ಶೀತಲ ನೀರನ್ನೂ ಪಡೆಯಬಹುದು.

---



ದೋಷಗಳನ್ನು ಕಾಣುವದು ಸುಲಭವಾದರೂ, ಅದನ್ನು ಸಾಧಿಸುವದು ಕಷ್ಟ. ಗುಣಗಳನ್ನು ಕಾಣುವದು ಕಷ್ಟವಾದರೂ ಸಾಧಿಸುವದು ಸುಲಭ. ಆದುದರಿಂದ ಗುಣವನ್ನೇ ಅರಸಿ ಅದನ್ನು ಪ್ರಶಂಸಿಸುವದು ಉಪಯುಕ್ತವೂ ಸುಲಭವೂ ಆಗಿದೆ.

-ಪರಮಹಂಸ

# ವಯಸ್ಕರ ಶಿಕ್ಷಣ ಸಮಿತಿ ಮತ್ತು ದಿ||ಕೆ. ಆರ್. ಲಿಂಗಪ್ಪನವರು

**ಎ. ಡಿ. ನಂಜುಂಡಸ್ವಾಮಿ**
ಮನೆ ನಂ೧೧/ಸಿ,,೧ನೇ ತಿರುವು.
ಕೆ. ಎನ್. ಪುರ, ಉದಯಗಿರಿ,
ಮೈಸೂರು

ಮೂರು ವರ್ಷಗಳ ಹಿಂದಿನ ಮಾತು. ವೃತ್ತಿ ಸಂಬಂಧವಾದ ನನ್ನ ನಿತ್ಯ ರೈಲು ಯಾತ್ರೆಯ ಒಂದು ದಿನ. ಪಯಣದ ಬೇಸರ ಕಳೆಯಲು ಬೋಗಿಯಲ್ಲಿ ಕುಳಿತ ತರುಣರ ಗುಂಪೊಂದು ಲೋಕಾಭಿರಾಮವಾಗಿ ಹರಟುತ್ತಾ, ಟಿ.ವಿ.ಯಲ್ಲಿ ತಾವು ನೋಡಿದ 'ಜೀವನ ಚೈತ್ರ' ಸಿನಿಮಾದ ಈ ಹಾಡಿನ ಚೌಪದಿಯನ್ನೆತ್ತಿಕೊಂಡರು.

ಮಾನವನಾಗಿ ಹುಟ್ಟಿದ ಮ್ಯಾಲೆ ಏನೇನ ಕಂಡಿ।
ಸಾಯೋತನಕಾ ಸಂಸಾರದೊಳಗೆ ಗಂಡಾಗುಂಡಿ।
ಹೇರಿಕೊಂಡು ಹೋಗೋದಿಲ್ಲ ಸತ್ತಾಗ್ ಬಂಡಿ।
ಇರೋದರೊಳಗೆ ನೋಡು ಒಮ್ಮೆ ಜೋಗದ ಗುಂಡಿ।

ವರನಟ ಡಾ. ರಾಜಕುಮಾರ್‌ರವರ ಸಿರಿಕಂಠದಲ್ಲಿ ಲಯಬದ್ಧವಾಗಿ ಹೊರ ಹೊಮ್ಮಿದ ಈ ಕವಿತೆಯ ಕೃತಿಕಾರನ ಬಗ್ಗೆ, ಇದು ಚಿ|ಉದಯಶಂಕರ ಇಲ್ಲವೆ ಆರ್. ಎನ್. ಜಯಗೋಪಾಲರ ರಚನೆಯಾಗಿರಬೇಕೆಂದು ಗುಂಪಿನಲ್ಲಿ ಚರ್ಚೆಗೆ ಬಂತು. ಅವರ ಚರ್ಚೆಯ ನಡುವೆ ಮೂಗು ತೂರಿಸಿ, ಇದು ಸುಮಾರು ಐದು ದಶಕಗಳ ಹಿಂದೆ ರಚಿತವಾದ ಮೂಗೂರು ಮಲ್ಲಪ್ಪನವರ 'ಜೋಗದ ಜೋಕ್' ಕವಿತೆಯ ಸಾಲುಗಳೆಂದು ಸಂಗ್ರಹಿಸದವರು ಕೆ. ಆರ್. ಲಿಂಗಪ್ಪನವರೆಂದು ಅವರಿಗೆ ಮನವರಿಕೆ ಮಾಡಿಕೊಟ್ಟೆ. ನನ್ನ ಈ ಸಮರ್ಥನೆಗೆ 'ಪುಸ್ತಕ ಪ್ರಪಂಚ' ಮಾಸಿಕದ ಅಂದಿನ ಸಂಚಿಕೆಯು ಬೆಂಬಲದ ಖಾತ್ರಿಯಿತ್ತು.

ಹದಿನಾಲ್ಕು ಚೌಪದಿಯ ಜೋಗದ ಜೋಕಿನ ಸಾಲುಗಳು ನನ್ನ ಸ್ಮೃತಿ ಪಟಲದಲ್ಲಿ ಮರೆಯಾಗಿದ್ದಾಗ, ಅದನ್ನು ನೆನಪುಮಾಡಿಕೊಟ್ಟ ಆ ತರುಣರು ರೈಲಿನ ನಿತ್ಯಯಾತ್ರೆಯಲ್ಲಿ ಮಿತ್ರರಾದರು. ಹೀಗೆ ನನ್ನಂಥೆಯೇ, ಒಂದಲ್ಲ ಒಂದು ಸಾಂಸ್ಕೃತಿಕ ಸಂಬಂಧವನ್ನು ಬೆಸೆದುಕೊಳ್ಳುವಲ್ಲಿ ಪರೋಕ್ಷವಾಗಿ ದುಡಿದವರಲ್ಲಿ ದಿ|| ಕೆ. ಆರ್. ಲಿಂಗಪ್ಪನವರು ಮುಖ್ಯರು.

ಕೆ. ಆರ್. ಲಿಂಗಪ್ಪನವರ ಸೇವೆ ಸಾಹಿತ್ಯ, ಶಿಕ್ಷಣ, ಸಂಸ್ಕೃತಿ ಕ್ಷೇತ್ರಗಳಿಗೆ ಸಂದಿದೆ. ಅವರ ಬಗ್ಗೆ ಬರೆಯುವುದು ನನ್ನಂಥವರಿಗೆ ''ಗಂಜಿ ಕುಡಿದು ಪರಮಾನ್ನದ ತೇಗು'' ತರುವುದು ಕೃತಕವೆನಿಸಬಹುದು. ಆದರೆ ವಯಸ್ಕರ ಶಿಕ್ಷಣ ಸಮಿತಿಯ ದಾಖಲೆಗಳಿಂದ ಲಿಂಗಪ್ಪನವರ ಸೇವೆಯನ್ನು ಗುರುತಿಸುವುದು ಕಷ್ಟವೆಂದಾಗಲಿ, ತೋರಿಕೆಯೆಂದೆನಿಸುವುದಿಲ್ಲ. ಮೂಗೂರು ಮಲ್ಲಪ್ಪನವರ 'ಜೋಗದ ಜೋಕು' ಅಜ್ಞಾತವಾಗಿದ್ದಾಗ ಲಿಂಗಪ್ಪನವರು ಅದನ್ನು ಶ್ರಮವಹಿಸಿ ಸಂಗ್ರಹಿಸಿ 'ಪುಸ್ತಕ ಪ್ರಪಂಚ'ದಲ್ಲಿ ಪ್ರಕಟಿಸುತ್ತಾರೆ (ಜೂನ್ ೧೯೪೮).

ದಿ|| ಕೆ. ಆರ್. ಲಿಂಗಪ್ಪ ಹಾಗೂ ವಯಸ್ಕರ ಶಿಕ್ಷಣ ಸಮಿತಿಯ ಸಂಬಂಧ ಸುಮಾರು ೫೦ ವರ್ಷಗಳ ಹಿಂದಿನದು. ಅವರು ಸಮಿತಿಯ 'ಪುಸ್ತಕ ಪ್ರಪಂಚ' ಬಳಗದಲ್ಲಿದ್ದು, ಜನಪದ ಗೀತೆಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಅವರ ಪ್ರಸಿದ್ಧ 'ನಾರ್ಘೋಕ ಸಿಪಾಯಿ' ಇದೇ ಪತ್ರಿಕೆಯ ಜುಲೈ ೧೯೪೮ರ ಸಂಚಿಕೆಯಲ್ಲಿ ಪ್ರಕಟವಾಗಿದ್ದು, ಅದರ ಪೂರ್ಣಪಾಠವನ್ನು ಓದಿಯೇ ಆನಂದಿಸಬೇಕು.

ನಾರ್ಘೋಕ ಸಿಪಾಯಿ ಜಾನ
ಸುತ್ತಿದ ಮುಂಡಾಸನ ಶಮನ

ಬಳೆ ಕುಮರೆಗ್ಯಾಕಿವಾ ಜೀನ
[illegible] ನೋಡವಲ್ಲ ನನ್ನ॥೬॥

ಅಪರೂಪ ಹುಟ್ಟಿಸಿದನು ಬ್ರಹ್ಮ
ಶ್ರೀರಾಮ ಲಕ್ಷ್ಮಣರ ತಮ್ಮ
ಶ್ರೀಹರೀ ರಕ್ಷಿಸೋ ಧಾಮ
ಹೋಗಬಹುದೆ ಪಾಂಡವರ ಭೀಮ॥೭॥

ಬಿಲ್ಲು ಬಾಣದೊಳಗೆ ನಿಶ್ಯೇಮ
ಪಣೆ ಮೇಲೆ ತಿಳದಿಯೊ ನಾಮ।
ಸೊಲ್ಲಾರೆ ಮೋಳಯ ಕಾಮ
ನಿನ ಕಂಡು ಆಯ್ತು ಬಾಳ ಪ್ರೇಮ॥೮॥
ನಿನ ಕಂಡು ಆಯ್ತು ಬಾಳ ಹರುಷ।
ಆಗ ಬಾರದೇನೊ ಮೆಸಿ ಪುರುಷ।
ರಾತ್ರೀಲಿ ಬೀಳುತಾವೆ ಕನಸ।
ನೋಡಿದಂಗೆ ಆಯ್ತು ಉಲ್ಲಾಸ॥೯॥

ಮೃಗ ಬೆಚ್ಚುತೀನಿ ಅರಿಷೂಣ।
ಹಿಂಗ್ಯಾಗಿ ಹೋಗಲಿ ಲಗೂನ।
ನೀನು ಲಗ್ನವಾಗಲಿಕ್ಕೆ ಜಾಣೆ।
ನಾ ದೂರಲ್ ದೇಶದ ಪ್ರಾಣ॥೮॥

ನೀ ಲಗ್ನವಾಗಲಿಕೆ ಜಾಣೆ।
ನೀ ದೂರಲ್ ದೇಶದ ಪ್ರಾಣೆ।
ಸರಕಾರ ದೊಡ್ಡ ಕಾನೂನೆ।
ಹಿಂಗೆ ಕಾಡಬೇಡ ಮಾನೂನೆ॥೬॥

ತಪ್ಪಿಸ್ಗೆ ನಿನ್ನ ಸಲುವಾಗೆ।
ತರಿಸೇನ [illegible] ಬ್ಲೌಜಿಗೆ।
ಅಷ್ಟೇ ಪಣ್ಣೆ ಗಂಧ ಕೇಳಿಗೆ।
[illegible] ಸುವಾಸನೆ ನುಳಿಗೆ॥೭॥

ಪಾಶಾಣಗಂಡ ಸರಪಾಯ।
ಬಾರೆಂತ ಮುಗಿತಾಳ ಕೈಯ।
ಜುಲುಮಿಂದ ಹಾಕಿದಳು ಬಲಿಯ।
ಆ ಸಿಪಾಯಿ ನಕ್ಕ ಕಿಲಿ ಕಿಲಿಯ॥೮॥

ವೃತ್ತಿಯಿಂದ ವಕೀಲರಾಗಿ, ಕಕ್ಷಿದಾರರ ಪರವಾಗಿ ನ್ಯಾಯಾಲಯದಲ್ಲಿ ವಾದಿಸುವ ಸಂದರ್ಭದಲ್ಲೂ, ಜಾನಪದದ ಗುಂಗಿನಲ್ಲಿರುತ್ತಿದ್ದ ದಿ॥ಲಿಂಗಪ್ಪನವರನ್ನು ಕುವೆಂಪುರವರು ಮೆಚ್ಚಿಕೊಂಡಿದ್ದರಂತೆ. ಡಾ. ಹಾ. ಮಾ. ನಾಯಕರು ಲಿಂಗಪ್ಪನವರ ಜನಪದ ಸಾಹಿತ್ಯದ ಒಲುವನ್ನು ಹೀಗೆ ವಿವರಿಸುತ್ತಾರೆ. ''ಬದುಕಿಗೆ ಬೇಕಾದ ಶಾಂತಿ, ಸಮಾಧಾನ, ನೆಮ್ಮದಿಗಳನ್ನು ಅದರಲ್ಲಿಯೇ ಕಂಡರು. ಅದು ಅವರ ಪಾಲಿಗೆ ಜೀವಂತ ಜ್ಯೋತಿಯೇ ಆಗಿತ್ತು. ಜನಪದ ಸಾಹಿತ್ಯದ ಹಿರಿಮೆ ಗರಿಮೆಗಳನ್ನು ಸಾರುವುದೇ ಅವರ ಧ್ಯೇಯವಾಗಿತ್ತು (ಸುಧಾ ೧-೬-೨೦೦೦).

ಹೊಸದಾಗಿ ಓದು-ಬರಹ ಕಲಿತವರು, ಮತ್ತೆ ಅನಕ್ಷರತೆಗೆ ಜಾರದಂತೆ, ಕಲಿಕೆಯನ್ನು ಮುಂದುವರಿಸಿಕೊಂಡು ಹೋಗಲು ವಯಸ್ಕರ ಶಿಕ್ಷಣ ಸಮಿತಿ ನವಸಾಕ್ಷರರಿಗಾಗಿ ಸಾಹಿತ್ಯ ಒದಗಿಸುವ ಯೋಜನೆಯನ್ನೆತ್ತಿಕೊಂಡಾಗ, ಲಿಂಗಪ್ಪನವರು ಅದಕ್ಕಾಗಿ ತ್ರಿಕರಣ ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ. 'ಮಾನೌಮಿ ಪದಗಳು' ಎನ್ನುವುದು ಲಿಂಗಪ್ಪನವರು ವಯಸ್ಕರರಿಗಾಗಿ ಬರೆದ ಒಂದು ಕಿರುಕೃತಿ. ಈ ಹೊತ್ತಿಗೆಗೆ ಮುನ್ನುಡಿ ಬರೆಯುತ್ತಾ ಸ.ಭದ್ರಯ್ಯನವರು ಹೀಗೆ ಹೇಳಿದ್ದಾರೆ ''ಮಾನವಮಿ ಮೇಳದಲ್ಲಿ ಭಾಗವಹಿಸಿ ಹಾಡಿ, ಕುಣಿದು ಊರೂರು ಯಾತ್ರೆ ಮಾಡಿ, ಹೊಲಗದ್ದೆ ಹಳ್ಳಕೊಳ್ಳ, ತಿಟ್ಟು, ತೆವರು, ಬೆಟ್ಟಹೊಳೆಗಳನ್ನು ಹಾದು, ಜೊತೆಗೆ ನಮ್ಮೂರ ಸುತ್ತಲಿನ ಭೂಪ್ರದೇಶಗಳನ್ನು ಅರಿತು, ಬಂಧುಗಳ ದರ್ಶನ ಮಾಡಿ, ಅವರ ಸತ್ಕಾರ ಅನುಭವಿಸಿ, ಅವರಿಗೆ ಆನಂದ ತಂದು, ನಮ್ಮ ಗುರುಗಳಿಗೆ ಕೀರ್ತಿಯನ್ನು ಸಂಪಾದಿಸಿಕೊಟ್ಟ ಅದೃಷ್ಟಶಾಲಿಗಳಲ್ಲಿ ನಾನೊಬ್ಬನಾಗಿದ್ದೆ. ಈಗ ನಮ್ಮ [illegible] ಎಲ್ಲ [illegible] ಮತ್ತೆ ಆ ಭಾಗ್ಯ[illegible] ಅನುಭವಿಸುವಂತಾಗಲಿ ಎಂಬ [illegible] ನನಗಿದೆ. ಆ ಆಸೆಯಿಂದ ಮಾನವಮಿ ಪದಗಳನ್ನು ಸಂಪಾದಿಸಲು ಶ್ರೀ ಲಿಂಗಪ್ಪನವರಿಗೆ ಸೂಚಿಸಿದೆ. ಅವರು ದಯಮಾಡಿ ಆ ಕೆಲಸಮಾಡಿ ಪುಣ್ಯಶಾಲಿಗಳಾಗಿದ್ದಾರೆ'' ಎಂದು ಲಿಂಗಪ್ಪನವರ ಸೇವೆಯನ್ನು ದಿ॥ನಭ ಸ್ಮರಿಸಿದ್ದಾರೆ.

ಅಂದಿನ ದಿನಗಳಲ್ಲಿ ಕೂಲಿ ಮಠಗಳಲ್ಲಿ ಮಕ್ಕಳಿಗೆ ಓದು - ಬರಹ ಕಲಿಸುವವರಿಗೆ ''ಓದಯ್ಯ''ನವರೆಂಬ ಅಭಿದಾನ. ಈ ಓದಯ್ಯಗಳು, ತಮ್ಮ ವಿದ್ಯಾರ್ಥಿಗಳೊಡನೆ

ಊರಿನ ಎಲ್ಲ ಜನಾಂಗದವರ ಮನೆ ಮನೆಗೆ ಹೋಗಿ , ಶುಭ ಕೋರುವುದು ವಾಡಿಕೆ. ಇದನ್ನು ''ಊರಾಡುವುದು'' ಎನ್ನುತ್ತಾರೆ. ಹೀಗೆ ತಮ್ಮ ಗ್ರಾಮವಾದ ಮೇಲೆ ಅಕ್ಕಪಕ್ಕದ ಗ್ರಾಮಗಳಿಗೆ ಹೋಗಿ ಅಲ್ಲಿನ ಜನರಿಗೆ ಶುಭ ಕೋರುತ್ತಾರೆ. ನಿಷ್ಕಳಂಕ ಮಕ್ಕಳು ಶುಭ ಕೋರಿ ಬೇಡುವುದಾದರೂ ಏನನ್ನು ?

ಕಡಲೆ ಬೆಲ್ಲವು ಕೊಬರಿ ನಿಮಗಾಗಬೇಕು
ಉಡುಗೊರೆಯ ವೀಳ್ಯ ನಮ್ಮಯ್ಯಗಳಿಗೆ ಬೇಕು
ಮಳೆಬಂದು ಬೆಳೆ ಬೆಳೆದು ಇಳೆ ದಣಿಯಲೆಂದು
ತಿಳಿಗೊಳಗಳುಕ್ಕಿ ಗೋವ್ಗಳು ಕರೆಯಲೆಂದು
ನಳಿನ ಮುಖಿಯರು ಸುಪುತ್ರರ ಪಡೆಯಲೆಂದು
ಬಣ್ಣಬಂಗಾರದ ಪುಣ್ಯವು ಹೆಚ್ಚಲೆಂದು.

ಹೀಗೆ ಸಮೃದ್ಧಿಗಾಗಿ ಹರಸುವ ಮಕ್ಕಳು ಗಣೇಶ, ಶಾರದೆ, ಗಂಗೆ, ಮಹಂಕಾಳಿ, ಊರಗೌಡ, ಬಸವಣ್ಣ, ಬೀರಪ್ಪ, ಬ್ರಾಹ್ಮಣ, ಗೊಲ್ಲ, ಕುಂಬಾರ, ಎಲ್ಲರ ಮಹತ್ವವನ್ನು ಹಾಡಿ ಹೋಗಳುತ್ತಾರೆ. ಮಕ್ಕಳ ಬುದ್ಧಿಮತ್ತೆ ಪರೀಕ್ಷಿಸುವ 'ಸವಾಲ್ ಜವಾಬ್' ಗಳು ಒಗಟಿನ ರೂಪದಲ್ಲಿರುವುದನ್ನು ಲಿಂಗಪ್ಪನವರ 'ಮಾನೌಮಿಪದಗಳ' ಸಂಗ್ರಹದಲ್ಲಿ ಕಾಣಬಹುದು'ಶ್ರೀ ಸಕಲ ಸಾಮ್ರಾಜ್ಯ ಲಕ್ಷ್ಮೀ ನಿವಾಸ ವಿಜಯೀಭವ ದಿಗ್ವಿಜಯೀಭವ' ಎಂದು ಮಂಗಳದಲ್ಲಿ ಮುಕ್ತಾಯವಾಗುತ್ತದೆ.

ಸಾಹಿತ್ಯ, ಸಂಸ್ಕೃತಿ, ಶಿಕ್ಷಣ, ಸಮಾಜಸೇವಾ ಕ್ಷೇತ್ರಗಳಿಗೆ ಲಿಂಗಪ್ಪನವರ ಸೇವೆಯನ್ನು ಗಣಿಸಿ ಸಾಕಷ್ಟು ಪುರಸ್ಕಾರಗಳು ಸಂದಿವೆ. ಆದರೆ ನಮ್ಮ ನಾಡಿನ ಪ್ರತಿಷ್ಠಿತ 'ಪಂಪ ಪ್ರಶಸ್ತಿ' ದೊರಕದಿರುವ ಬಗ್ಗೆ ಗಣ್ಯರು ಆತಂಕ ವ್ಯಕ್ತಪಡಿಸಿರುವುದು ಲಿಂಗಪ್ಪನವರ ಹಿರಿತನಕ್ಕೆ ಸಾಕ್ಷಿ (ಕನ್ನಡಪ್ರಭ೨೮.೫.೨೦೦೦ರಲ್ಲಿ ಪಾಟೀಲ ಪುಟ್ಟಪ್ಪನವರ ಲೇಖನ).

ಜೂನ್ 'ಪುಸ್ತಕ ಪ್ರಪಂಚ' ಸಂಚಿಕೆಯಲ್ಲಿನ ರಕ್ಷಾಪುಟದಲ್ಲಿ 'ಜೋಗ ಜಲಪಾತ'ದ ಸುಂದರ ಚಿತ್ರ ಅಚ್ಚಾಗಿದೆ. ಜೋಗದ ಸಿರಿಯನ್ನು ನಮ್ಮ ಕವಿ, ಕಲಾವಿದರು ಮನ ತುಂಬಿ ಹಾಡಿದ್ದಾರೆ ಈ ಚಿತ್ರ ದಿ॥ಕೆ. ಆರ್. ಲಿಂಗಪ್ಪನವರು ಸಂಗ್ರಹಿಸಿದ ಮೂಗೂರು ಮಲ್ಲಪ್ಪನವರ 'ಜೋಗದ ಜೋಕ್' ಚೌಪದಿಯನ್ನು ನೆನಪಿಗೆ ತಂದುಕೊಡುತ್ತದೆ, ಲಿಂಗಪ್ಪನವರಿಗೆ ವಯಸ್ಕರ ಶಿಕ್ಷಣ ಸಮಿತಿ ಈ ಮೂಲಕವಾಗಿ ಅರ್ಥಪೂರ್ಣ ಶ್ರದ್ಧಾಂಜಲಿ ಅರ್ಪಿಸಿದೆ.

---

ನಮ್ಮ ಹೊರಗೆ ಇರುವಷ್ಟು ಜಗತ್ತು ನಮ್ಮ ಒಳಗಡೆಯೂ ಇದೆ. ಅದನ್ನು ನೋಡಲು, ಅರಿಯಲು , ನಮ್ಮ ಆತ್ಮದ ಕಣ್ಣು ತೆರೆಯಬೇಕು.

- ವಿನೋಬಾ

# ಕ್ಯಾನ್ಸರನ್ನು ತಡೆಗಟ್ಟುವ ತರಕಾರಿ ಮತ್ತು ಹಣ್ಣು

**ಡಾ|| ಸ. ಜ. ನಾಗಲೋಟಿಮಠ**
ವೈದ್ಯಕೀಯ ನಿರ್ದೇಶಕರು
ಬಿ.ವಿ.ವ. ಸಂಘ
ಬಾಗಲಕೋಟೆ-೫೮೭ ೧೦೧

ಕ್ಯಾನ್ಸರ್ ರೋಗದ ಹೆಸರು ಕೇಳಿ ಜನರು ಹೌಹಾರುವರು. ಒಂದು ಕುಟುಂಬದಲ್ಲಿ ಒಬ್ಬರಿಗೆ ಈ ರೋಗ ಬಂದರೆ ಇಡೀ ಕುಟುಂಬವೇ ಬಳಲುತ್ತದೆ. ಯಾರನ್ನೂ ಇದು ಬಿಟ್ಟಿಲ್ಲ. ಮಕ್ಕಳಿರಲಿ, ಮುದುಕರಿರಲಿ, ಸ್ತ್ರೀ ಇರಲಿ ಅಥವಾ ಪುರುಷ ಇರಲಿ ಕ್ಯಾನ್ಸರ್ ರೋಗ ಅವರನ್ನು ಹಿಡಿಯಬಹುದು. ಇದು ರೋಗಿಯನ್ನು ಹಿಂಡಿ ಹಿಪ್ಪೆ ಮಾಡಿ ನಿರ್ದಯವಾಗಿ ಕೊಂದು ಹಾಕುತ್ತದೆ. ಕ್ಯಾನ್ಸರ್ ರೋಗ ಒಮ್ಮೆ ಬೇರು ಬಿಟ್ಟರೆ ಅದನ್ನು ಕಿತ್ತು ತೆಗೆಯಲು ಸಾಧ್ಯವಿಲ್ಲ. ಶಸ್ತ್ರತಜ್ಞರು ಎಂಥದೇ ದೊಂಬರಾಟ ಮಾಡಿದರೂ ಹುಣ್ಣಿನ ಎಲ್ಲ ಬೇರುಗಳನ್ನು ತಗೆಯುವುದು ಅಸಾಧ್ಯ.

ಕ್ಯಾನ್ಸರ್ ಬರಲು ಕಾರಣಗಳು ಹಲವಾರು. ಒಂದೊಂದು ತರದ ಕ್ಯಾನ್ಸರಿಗೆ ಒಂದೊಂದು ಗುಂಪು ಕಾರಣಗಳನ್ನು ತೋರಿಸಬಹುದು. ಕೆಲವೊಂದು ಉದ್ಯೋಗಗಳು ಕೆಲವು ಕ್ಯಾನ್ಸರ್ ತರಬಹುದು. ಕೆಲವೊಂದು ಚಟಗಳು, ರೂಢಿಗಳು ಕ್ಯಾನ್ಸರ್ ತರಬಲ್ಲವು. ವಿಕಿರಣತೆ ಕ್ಯಾನ್ಸರಿಗೆ ಕಾರಣವಾಗಬಹುದು. ಹುಟ್ಟು ದೋಷಗಳು ಕಾರಣ ಇರಬಹುದು. ತಪ್ಪು ಆಹಾರ ಸೇವನೆ ಈ ರೋಗವನ್ನು ಹುಟ್ಟಿಸಬಹುದು.

ಇವೆಲ್ಲವುಗಳ ಬಗ್ಗೆ ತಜ್ಞರು ಸಾಕಷ್ಟು ಚರ್ಚಿಸಿದ್ದಾರೆ. ಬರೆದಿದ್ದಾರೆ. ಈಗ ಎಲ್ಲರ ಗಮನ ಸೆಳೆಯುವ ವಿಷಯವೆಂದರೆ ತರಕಾರಿ ಹಾಗೂ ಹಣ್ಣುಗಳು ಕ್ಯಾನ್ಸರ್ ರೋಗವನ್ನು ಪ್ರತಿಬಂಧಿಸಲು ಸಾಧ್ಯವೆ? ಇದರ ಉತ್ತರವೆಂದರೆ'' ಅಹುದು''. ಹಲವಾರು ತರಕಾರಿ ಹಾಗೂ ಹಣ್ಣುಗಳು ಕ್ಯಾನ್ಸರ್ ರೋಗವನ್ನು ಖಾತ್ರಿ ತಡೆಗಟ್ಟಬಹುದು.

ಸಸ್ಯಗಳಲ್ಲಿ ತಯಾರಾಗುವ ಈ ಶಕ್ತಿಯುತ ಘಟಕಗಳನ್ನು ''ಫೈಟೋಕೆಮಿಕಲ್ಸ್'' (ಸಸ್ಯ ರಾಸಾಯನಿಕಗಳು) ಎಂದು ಕರೆಯುತ್ತಾರೆ. ಇವುಗಳ ಮೇಲೆ ಅನೇಕ ಸಂಶೋಧನೆಗಳು ನಡೆದಿವೆ, ನಡೆಯುತ್ತಲಿವೆ. ಆದರೂ ಈ ಶತಮಾನದ ಕಡೆಯ ಹತ್ತು ವರ್ಷಗಳಲ್ಲಿ ಈ ದಿಶೆಯಲ್ಲಿ ಕಾರ್ಯ ಬಹುವಾಗಿ ಹೆಚ್ಚಾಗಿದೆ. ಸಂಶೋಧನೆಯ ಫಲಿತಾಂಶಗಳು ಬಹಳ ಸಮಾಧಾನಕರವಾಗಿವೆ.

ಇಂದಿನವರೆಗೆ ನಮಗೆ ತಿಳಿದ ಆಹಾರ ಘಟಕಗಳನ್ನು ಅವುಗಳ ಶಕ್ತಿಗೆ ಅನುಗುಣವಾಗಿ ಪಿರಾಮಿಡ್ ಆಕಾರದಲ್ಲಿ ಇಟ್ಟರೆ ಬೆಳ್ಳುಳ್ಳಿ ಶಿಖರ ಸ್ಥಾನಕ್ಕೆ ಬರುತ್ತದೆ. ಬೆಳ್ಳುಳ್ಳಿ ಕ್ಯಾನ್ಸರ್‌ನ್ನು ತಡೆಯುವಲ್ಲಿ ಬಹು ಶಕ್ತಿಯುತವಾದದ್ದು.

ಇದಕ್ಕಿಂತ ಸ್ವಲ್ಪ ಕಡಿಮೆ ಶಕ್ತಿಯುತವಾದ ತರಕಾರಿ ಎಂದರೆ ಕ್ಯಾಬೇಜ್. ಈ ತರಕಾರಿಯನ್ನು ಯಾವ ರೀತಿಯಿಂದ ಸೇವಿಸಿದರೂ ಸಾಕು. ಇದರಲ್ಲಿರುವ ಘಟಕಗಳು ಕ್ಯಾನ್ಸರ್ ತಡೆಯಬಲ್ಲವು. ಇವುಗಳಿಗಿಂತ ಕಡಿಮೆ ಶಕ್ತಿಯುತ ಪದಾರ್ಥಗಳೆಂದರೆ ಶುಂಠಿ ಹಾಗೂ ಸೊಯಾಬೀನ್. ಅನಂತರ ಗಜ್ಜರಿ ಬರುತ್ತದೆ. ಆಮೇಲೆ ಉಳ್ಳಾಗಡ್ಡಿ, ಚಹಾ, ಅರಿಶಿಣಪುಡಿ ಬರುತ್ತವೆ.

ಹಣ್ಣುಗಳು ನಡುವಿನ ಸ್ಥಳವನ್ನು ಪಡೆಯುತ್ತವೆ. ಇಂದಿನವರೆಗೆ ನಡೆದ ಸಂಶೋಧನೆಗಳು ಆಧಾರದ ಮೇಲೆ ಕಿತ್ತಳೆ ಹಣ್ಣು, ಲಿಂಬೆ ಹಣ್ಣು ಹಾಗೂ ಕೆಂಪು ಮೂಸಂಬಿಹಣ್ಣು (ಗ್ರೇಪ್ ಫ್ರೂಟ್) ಪ್ರಸಿದ್ಧವಾಗಿವೆ. ಒಟ್ಟಾರೆ ಹಣ್ಣುಗಳು ಹಲವಾರು ರೀತಿಯಿಂದ ಆರೋಗ್ಯಕ್ಕೆ ಒಳ್ಳೆಯದನ್ನು ಮಾಡುತ್ತವೆ. ಅದಲ್ಲದೆ ಲಿಂಬೆ ಜಾತಿಯ ಹಣ್ಣುಗಳು ಪ್ರೊಸ್ಟೇಟ್ ಕ್ಯಾನ್ಸರ್, ಸ್ತನ

ಕ್ಯಾನ್ಸರ್, ಗಂಟಲು, ನಾಲಿಗೆ, ತುಟಿ ಕ್ಯಾನ್ಸರ್‌ಗಳನ್ನು ಪ್ರತಿಬಂಧಿಸುತ್ತವೆ.

ಒಂದೊಂದೆ ಘಟಕಗಳನ್ನು ವಿಂಗಡಿಸಿ ನೋಡುವಾಗ ಉಳಿದ ಘಟಕಗಳು ವಿರೂಪಗೊಳ್ಳುವ ಸಾಧ್ಯತೆ ಇದೆ. ವಿಕಾರಗೊಳ್ಳುವ ಸಂಭವವಿದೆ. ಕಾರಣ ಘಟಕಗಳನ್ನು ಬಹಳ ಕಾಳಜಿ ಸಹಿತ ಪತ್ತೆ ಹಚ್ಚಬೇಕು.

ಈ ವಿವರಗಳನ್ನು ಓದಿ ಜನರು ಉಳಿದ ಹಣ್ಣುಗಳನ್ನು ತ್ಯಜಿಸಿ ಕೇವಲ ಈ ಹಣ್ಣುಗಳನ್ನು ಮಾತ್ರ ಬಳಸುವಂತಾಗಬಾರದು. ಉಳಿದ ಹಣ್ಣುಗಳ ಅಧ್ಯಯನ ಅಷ್ಟೊಂದು ಆಗಿಲ್ಲ. ಎರಡನೆಯದಾಗಿ ಆ ಹಣ್ಣುಗಳಲ್ಲಿ ಬೇರೆ ಒಳ್ಳೆಯ ಘಟಕಗಳಿರಲು ಸಾಧ್ಯ. ಇದೇ ಸಂಗತಿಯನ್ನು ತರಕಾರಿಗಳಿಗೂ ಹೇಳಬಹುದು.

**ಭಾರತದಲ್ಲಿ ಕ್ಯಾನ್ಸರ್ ಹೆಚ್ಚುತ್ತಿದೆಯೇ?**

ಹೌದು, ಭಾರತದಲ್ಲಿ ಕ್ಯಾನ್ಸರ್ ರೋಗ ಹೆಚ್ಚಾಗುತ್ತಿದೆ. ಇದಕ್ಕೆ ಎರಡು ಕಾರಣಗಳು. ಮೊದಲನೆಯದು ಜನರಲ್ಲಿ ಬೆಳೆಯುತ್ತಿರುವ ಈ ರೋಗದ ಅರಿವು. ಮೊದಲು ಎಂಥದೋ ರೋಗ ಎಂದು ನಿರ್ಲಕ್ಷಿಸಲಾಗುತ್ತಿತ್ತು. ಆದರೆ ಈಗ ಪ್ರತಿ ರಾಜ್ಯದಲ್ಲಿ ಪ್ರತಿ ಜಿಲ್ಲೆಯಲ್ಲಿ ಕ್ಯಾನ್ಸರ್ ಗುರುತಿಸುವ ಕೇಂದ್ರಗಳು ಹುಟ್ಟಿವೆ. ತಜ್ಞರು ಲಭ್ಯವಿದ್ದಾರೆ. ಇದರಿಂದ ಮರೆಯಾಗಿ ಹೋಗುತ್ತಿದ್ದ ರೋಗವನ್ನು ಜನ ಗುರುತಿಸತೊಡಗಿದ್ದಾರೆ.

ಎರಡನೆಯ ಕಾರಣವೆಂದರೆ ಭಾರತದಲ್ಲಿ ಹೆಚ್ಚುತ್ತಿರುವ ಪರಿಸರ ಕಶ್ಮಲ. ಔದ್ಯಮೀಕರಣದ ಹೆಸರಿನಲ್ಲಿ ತಲೆಯೆತ್ತುತ್ತಿರುವ ಫ್ಯಾಕ್ಟರಿಗಳು, ರಸ್ತೆಯಲ್ಲಿ ಓಡಾಡುತ್ತಿರುವ ದ್ವಿಚಕ್ರ ವಾಹನಗಳು, ಡಿಸೆಲ್ ವಾಹನಗಳು. ಪರಿಸರ ಕಶ್ಮಲಕ್ಕೆ ಕಾರಣವಾಗುತ್ತಿವೆ. ಪೇಟೆಯಲ್ಲಿ ದಾಳಿ ಇಟ್ಟಿರುವ ತಂಬಾಕು. ಬೀಡಿ ಸಿಗರೇಟುಗಳ ಹೆಚ್ಚಳ, ಅಲ್ಲದೆ ಕೀಟನಾಶಕಗಳು ಆಹಾರ ಪದಾರ್ಥಗಳಲ್ಲಿ ಸೇರುವುದು, ಮಹತ್ವದ ಕಾರಣವಾಗಿದೆ. ಪ್ಲಾಸ್ಟಿಕ್ ಪದಾರ್ಥಗಳ ಅತಿ ಬಳಕೆ ಇವೆಲ್ಲ ಕೂಡಿ ಕ್ಯಾನ್ಸರ್ ರೋಗವನ್ನು ಅಧಿಕಗೊಳಿಸಿವೆ.

ಕ್ಯಾನ್ಸರ್ ಹೆಚ್ಚುವಿಕೆ ಕೇವಲ ಭಾರತದಲ್ಲಿ ಮಾತ್ರವಲ್ಲ, ಅದು ಜಗತ್ತನ್ನೇ ಹಿಡಿದಿದೆ. ಜಾಗತಿಕ ಆರೋಗ್ಯ ಸಂಸ್ಥೆಯವರ ವರದಿಯಂತೆ ಪ್ರತಿ ವರ್ಷ ೬ ಲಕ್ಷ ಹೆಚ್ಚು ಜನರಿಗೆ ಕ್ಯಾನ್ಸರ್ ತಗಲುತ್ತಿದೆ. ಇವರಲ್ಲಿ ಪ್ರತಿ ಶತ ೬೦ರಷ್ಟು ಜನ ಹಿಂದುಳಿದ ದೇಶದವರೇ. ಸೊಂಕು ರೋಗಗಳಿಂದ ಜನ ಸಾಯುವುದನ್ನು ತಡೆಗಟ್ಟಿ ಆಯುಷ್ಯ ರೇಖೆ ಹೆಚ್ಚಿಸಿದ್ದಾರೆ. ಕಾರಣ ಬದುಕಿ ಉಳಿದವರಲ್ಲಿ ಕ್ಯಾನ್ಸರ್ ಕಾಣುತ್ತಲಿದೆ.

ಕಳೆದ ೫೦ ವರ್ಷದ ಅವಧಿಯಲ್ಲಿ ಭಾರತದಲ್ಲಿ ಕ್ಯಾನ್ಸರ್ ರೋಗ ದುಪ್ಪಟ್ಟಾಗಿದೆ. ೧೯೬೦ರಲ್ಲಿ ಪ್ರತಿ ವರ್ಷ ಸುಮಾರು ೮ ರಿಂದ ೧೦ ಸಾವಿರ ಕ್ಯಾನ್ಸರ್ ರೋಗಿಗಳು ಪತ್ತೆಯಾಗುತ್ತಿದ್ದರು. ಈಗ ಆ ಸಂಖ್ಯೆ ಸುಮಾರು ೧೬೦೦೦ದಷ್ಟಾಗಿದೆ. ಪುರುಷರಲ್ಲಿ ಬಾಯಿ ಹಾಗೂ ಪುಪ್ಪುಸ ಕ್ಯಾನ್ಸರ್‌ಗಳು ಹೆಚ್ಚಾಗಿವೆ. ಸ್ತ್ರೀಯರಲ್ಲಿ ಗರ್ಭಾಶಯ ದ್ವಾರ ಹಾಗೂ ಸ್ತನ ಕ್ಯಾನ್ಸರ್‌ಗಳು ಜಾಸ್ತಿ.

ಸ್ತನ ಕ್ಯಾನ್ಸರ್ ಹೆಚ್ಚುವುದಕ್ಕೆ ಆಹಾರದಲ್ಲಿ ಹಾಗೂ ಹಾಲಿನಲ್ಲಿ ಹೆಚ್ಚುತ್ತಿರುವ ರಾಸಾಯನಿಕಗಳೇ ಮುಖ್ಯ ಎಂಬ ಸಂಶಯವನ್ನು ಕೆಲವರು ವ್ಯಕ್ತಪಡಿಸಿದ್ದಾರೆ. ಈ ರಾಸಾಯನಿಕಗಳು ಪ್ಲಾಸ್ಟಿಕ್ ವಸ್ತುಗಳಿಂದ ಹಾಗೂ ಕೀಟನಾಶಕಗಳಿಂದ ಬರುವವೆಂದು ಗೊತ್ತಾಗಿದೆ.


ಇಂದು ನಾವು ಸೇವಿಸುವ ಹವೆಯು ವಿಷಕಾರಕ ವಸ್ತುಗಳಿಂದ ತುಂಬಿದೆ. ಈ ವಿಷಗಳಲ್ಲಿ ಪುಪ್ಪುಸದ ಕ್ಯಾನ್ಸರ್ ತರುವ ಘಟಕಗಳು ಉಗುಳುವ ಹೊಗೆ, ದ್ವಿಚಕ್ರ

ವಾಹನಗಳಿಂದ ಬಿಡಲ್ಪಡುವ ಹೊಗೆ ಡೀಸಲ್ ಯಂತ್ರಗಳಿಂದ ಬರುವ ಹೊಗೆ ಮುಖ್ಯವಾಗಿವೆ.

ಸೇವಿಸುವ ಹವೆಯನ್ನು ವಿಷ ವಸ್ತುಗಳಿಂದ ತುಂಬುವ ಅತಿ ಕೆಟ್ಟ ವಸ್ತುವೆಂದರೆ ತಂಬಾಕು ಸೇದುವುದು. ತಂಬಾಕು ನೇರವಾಗಿ ಸೇದುವವರನ್ನು ಹಾಳು ಮಾಡುವುದು ಎಲ್ಲರಿಗೂ ಗೊತ್ತಿದ್ದ ವಿಷಯವೇ. ಅಪರೋಕ್ಷವಾಗಿ ತಂಬಾಕು ಹೊಗೆ ಸೇದುವವರಿಗೆ ಕಡಿಮೆ ಅಪಾಯ ಎಂದೇನೂ ಇಲ್ಲ. ಅವರಿಗೂ ಅಪಾಯ ಹೆಚ್ಚಾಗಿದೆ.

ಹಾಗಾದರೆ ಕ್ಯಾನ್ಸರ ಪ್ರತಿಬಂಧಿಸುವುದು ಅಸಾಧ್ಯವೇ ? ಇಲ್ಲ ಹಾಗೇನಿಲ್ಲ. ನಮ್ಮ ಸರ್ಕಾರಗಳು ಕಟ್ಟುನಿಟ್ಟಾದ ಕಾಯ್ದೆ ಕಾನೂನು ಮಾಡಿ ಅವನ್ನು ಸರಿಯಾಗಿ ಪಾಲಿಸಿದರೆ ಕ್ಯಾನ್ಸರ್ ಕಡಿಮೆ ಮಾಡಲು ಸಾಧ್ಯ. ಈ ವ್ಯವಸ್ಥೆ ಮುಂದುವರಿದ ದೇಶಗಳಲ್ಲಿ ಇದೆ. ಹೀಗಾಗಿ ಇಂದು ಮುಂದುವರಿದ ದೇಶಗಳಲ್ಲಿ ಕ್ಯಾನ್ಸರ್ ರೋಗ ಕಡಿಮೆ. ಹಿಂದುಳಿದ ದೇಶಗಳಲ್ಲಿ ಕ್ಯಾನ್ಸರ್ ಪ್ರಮಾಣ ಪ್ರತಿಶತ ೬೦ರಷ್ಟಿದ್ದರೆ ಮುಂದುವರೆದ ದೇಶಗಳಲ್ಲಿ ಅದು ಪ್ರತಿಶತ ೪೦ಕ್ಕೆ ಇಳಿದಿದೆ.

ಸರ್ಕಾರಗಳು ಈ ದಿಶೆಯಲ್ಲಿ ಕಾರ್ಯ ಮಾಡಲು ಸಾಧ್ಯವೇ ?



ಅಜ್ಞಾನ, ಅಶಿಸ್ತು, ಮನುಷ್ಯನ ತೊಂದರೆಗಳಿಗೆ ಮುಖ್ಯ ಕಾರಣ.

-ಕೌಟಿಲ್ಯ

# ಅವ್ವ

ಡಾ॥ ಸ. ಜ. ನಾಗಲೋಟಿಮಠ
ವೈದ್ಯಕೀಯ ನಿರ್ದೇಶಕರು
ಬಿ.ವಿ.ವ. ಸಂಘ
ಬಾಗಲಕೋಟೆ-೫೮೭ ೧೦೧

ನಾನು ಆಗ ಒಂದೂರಿನಲ್ಲಿ ಸೇವೆ ಸಲ್ಲಿಸುತ್ತಿದ್ದೆ. ನಮ್ಮ ಕಾಲೇಜಿನ ದಾರಿಯಲ್ಲಿ ಒಂದು ಚಿಕ್ಕ ಮನೆ ಇತ್ತು. ಮನೆಯಲ್ಲಿ ಓರ್ವ ಯಜಮಾನರಿದ್ದರು. ಅವರಿಗೆ ಆಗ ೮೨ ವರ್ಷದ ಮೇಲಾಗಿತ್ತು. ಒಳ್ಳೆಯ ಆರೋಗ್ಯ ಕಾಪಾಡಿಕೊಂಡಿದ್ದರು. ಮನೆಯ ಮುಂದಿನ ಹೂದೋಟದಲ್ಲಿ ನಿಧಾನವಾಗಿ ಅಡ್ಡಾಡುತ್ತಿರುವುದನ್ನು ನಿತ್ಯವೂ ನೋಡುತ್ತಿದ್ದೆ. ಅವರಿ ವರಿಂದ ಯಜಮಾನರ ಬಗ್ಗೆ ತಿಳಿದುಕೊಂಡಿದ್ದೆ. ಅವರು ಹಲವು ವರ್ಷಗಳ ಹಿಂದೆ ಅಲ್ಲಿಯ ಪ್ರಸಿದ್ದ ಕಾಲೇಜಿನ ಪ್ರಿನ್ಸಿಪಾಲ ರಾಗಿ ಕಾರ್ಯ ಮಾಡುತ್ತಿದ್ದರು. ಒಳ್ಳೆಯ ಶಿಕ್ಷಕರೂ ಆಡಳಿತಗಾರರೂ ಎಂದು ಪ್ರಸಿದ್ಧ ರಾಗಿದ್ದರು. ಆಂಗ್ಲ ಭಾಷೆಯ ಪಂಡಿತರೆಂದು ಹೆಸರು ಮಾಡಿದ್ದರು. ಅವರ ಮಗ ಹೈಕೋರ್ಟ್ ವಕೀಲರೆಂದು ಬೆಂಗಳೂರಿನಲ್ಲಿ ವಾಸಿಸುತ್ತಿದ್ದರು. ಸೊಸೆ ಬೆಂಗಳೂರಿನ ಕಾಲೇಜಿನಲ್ಲಿ ಪ್ರಾಧ್ಯಾಪಕಿ. ಹೆಣ್ಣುಮಕ್ಕಳೆಲ್ಲ ಮದುವೆಯಾಗಿ ತಮ್ಮ ತಮ್ಮ ಸಂಸಾರದೊಂದಿಗೆ ನೆಮ್ಮದಿಯಾಗಿದ್ದರು. ಯಜಮಾನರಿಗೆ ಯಾವ ಚಿಂತೆ ತಾಪತ್ರಯಗಳು ಇದ್ದಿಲ್ಲ. ಅವರನ್ನು ಕಂಡಾಗಲೆಲ್ಲ ನಾನೂ ಒಂದು ದಿನ ಇವರಂತೆ ನಿವೃತ್ತಿ ಜೀವನ ನಡೆಸಬೇಕು ಎಂಬ ವಿಚಾರ ಸುಳಿದಾಡುತ್ತಿತ್ತು. ಯಜಮಾನರಿಂದ ಈಗಲೇ ಅಲ್ಪಸ್ವಲ್ಪ ಕಲಿಯಬೇಕೆಂಬ ಆಶೆ ಆಗುತ್ತಿತ್ತು. ಅಂತೂ ಇಂತೂ ಒಂದು ದಿನ ನಾನು ಧೈರ್ಯ ಮಾಡಿ ಅವರ ಮನೆಯ ಕಾಂಪೌಂಡಿನಲ್ಲಿ ಕಾಲಿಟ್ಟೆ. ಅವರು ಹೊರ ಬಂದರು. ನಮಸ್ಕರಿಸಿದೆ. ಅವರೂ ಪ್ರತಿ ವಂದನೆ ಸಲ್ಲಿಸಿದರು. ನನ್ನ ಪರಿಚಯ ಮಾಡಿಕೊಂಡೆ. ಅವರು ಖುಶಿಪಟ್ಟು ಹತ್ತಿರ ಬಂದು ಕೈ ಕುಲುಕಿದರು. ಬೆನ್ನ ಮೇಲೆ ಕೈಯಾಡಿಸಿ ಹರಿಸಿದರು. ''ಏನು ಡಾಕ್ಟರ ಸಾಹೇಬರೆ, ನಿಮ್ಮ ಬಗ್ಗೆ ಬಹಳ ಕೇಳಿದ್ದೇನೆ. ಇಂದು ಕಂಡು ಬಹಳ ಸಂತೋಷವಾಯಿತು. ನಿಜವಾಗಿ ನಾನೇ ನಿಮ್ಮನ್ನು ಕಾಣಲು ಬರಬೇಕೆಂದಿದ್ದೆ. ತಮ್ಮದು ಹಿರಿಯ ಗುಣ. ಈ ಮುದಿಯನನ್ನು ಕಾಣಲು ಸನ್ಮಾನಿಸಿದಿರಿ.''

ನಾನು ಹೇಳಿದೆ ''ಯಜಮಾನರೇ, ನಿಮ್ಮನ್ನು ಕಾಣುವುದೇ ಒಂದು ಸೌಭಾಗ್ಯ. ನಿಮ್ಮಂಥ ಹಿರಿಯರು, ಅನುಭವಿಗಳೂ ವಿದ್ವಾನರೂ ಎಲ್ಲಿ ಸಿಗುತ್ತಾರೆ? ತಮ್ಮ ಆಶೀರ್ವಾದ ಪಡೆಯಲೇ ಇಲ್ಲಿಗೆ ಬಂದೆ''.

ಯಜಮಾನರು ''ಸಾಹೇಬರೆ ನಾನು ಒಣಗುತ್ತಿರುವ ಹಳೆಯ ಮರ, ನನ್ನದೆಲ್ಲವೂ ಮುಗಿಯಿತು. ಈಗ ನಾನು ಮುರಿದುಕೊಂಡು ಬೀಳುವುದಷ್ಟೆ ಉಳಿದಿದೆ'' ನಾನು ''ಹಾಗೆ ಅನ್ನಬೇಡಿರಿ. ನಮ್ಮಂಥ ಯುವಕರಿಗೆ ನೀವು ದಾರಿ ತೋರಿಸಬೇಕು. ತಪ್ಪಿದಾಗ ತಿದ್ದಬೇಕು.''. ನಗುನಗುತ್ತ ಮಾತಾಡುತ್ತ ಮನೆಯನ್ನು ಸೇರಿದೆವು. ಅವರು ''ಏ ಬಾಯಿ, ಇಲ್ಲಿ ಬರ್ರಿ. ಯಾರು ಬಂದಿರುವರು ನೋಡ್ರಿ'' ಎಂದು ಕರೆದರು. ಅಷ್ಟರಲ್ಲಿ ಅವರ ಪತ್ನಿ ಹೊರ ಬಂದರು. ಮುತ್ತೈದೆ ಹಣೆ ತುಂಬ ದೊಡ್ಡ ಕುಂಕುಮ. ಇದ್ದ ಕೂದಲಗಳನ್ನು ಸರಿಯಾಗಿ ಬಾಚಿಕೊಂಡಿದ್ದರು. ಚಿಕ್ಕ ತುರುಬು ಕಟ್ಟಿದ್ದರು. ಸೆರಗು ತಲೆಯ ಮೇಲಿತ್ತು. ಯಜಮಾನತಿ ಆ ವಯಸ್ಸಿನಲ್ಲಿ ಮಲ್ಲಿಗೆಯ ಮಾಲೆಯನ್ನು ತುರುಬಿಗೆ ಸಿಲುಕಿಸಿದ್ದಳು. ಮೈಕೈಯಿಂದ ಗಟ್ಟಿ ಎಂದು ಹೇಳುವಂತಿದ್ದಳು. ಆಕೆಗೆ ಸುಮಾರು ೭೫

ವರ್ಷವಾದರೂ ಇರಬೇಕು. ಯಜಮಾನರು ಶುಭ್ರ ಧೋತರ ಉಟ್ಟು ಒಂದು ರೇಷ್ಮೆಯ ನೆಹ್ರು ಅಂಗಿ ಹಾಕಿದ್ದರು. ಅವರೂ ತಮ್ಮ ತಲೆಕೂದಲುಗಳನ್ನು ಸರಿಯಾಗಿ ಬಾಚಿಕೊಂಡಿದ್ದರು. ಅವರಿಬ್ಬರನ್ನೂ ನೋಡಿ ನನಗೆ ಅನಿಸಿತು''ಇದು ನಿಜವಾದ ನಿವೃತ್ತಿ ಜೀವನ. ತುಂಬು ಜೀವನ.'' ನಾನು ಹೀಗೆಯೇ ನಿವೃತ್ತಿ ಜೀವನ ನಡೆಸಲು ಪ್ರಯತ್ನಿಸಬೇಕೆಂದು ಅಂದುಕೊಂಡೆ. ನಾನು ಯಜಮಾನತಿಯನ್ನು ''ಅಜ್ಜಿ'' ಎಂದು ಕರೆದೆ. ಆಕೆಗೆ ಸಂತೋಷವಾಯಿತು. ಮಾತಾಡುತ್ತ ಕುಳಿತೆವು. ನಾನು ಯಜಮಾನರಿಗಿಂತ ಅಜ್ಜಿಗೆ ಸಮೀಪದವನಾದೆ. ಅಜ್ಜಿ ನನಗೆ ಹೇಳಿದಳು:''ತಮ್ಮಾ ಅವರೇ, ಮನೆಯಲ್ಲಿ ನಾವಿಬ್ಬರೇ ಇರೋರು. ನೀವೂ ಒಬ್ಬರೇ ಇರುವಿರೆಂದು ಹೇಳಿದಿರಿ. ನೋಡ್ರಿ, ದಿನಾಲು ನೀವು ನಮ್ಮ ಮನೆಯಲ್ಲಿಯೇ ಪ್ರಸಾದ ಸೇವಿಸಬೇಕು. ನಾನು ಅಡುಗೆ ಬಹಳ ಚೆನ್ನಾಗಿ ಮಾಡುತ್ತೇನೆ.''

ಯಜಮಾನರು ನಗುತ್ತ ಹೇಳಿದರು. ''ಸಾಹೇಬ್ರ, ಈ ಮುದುಕಿ ಬಹಳ ಬೆರಕಿ ಅದಾಳ್ರಿ. ರುಚಿ ರುಚಿಯಾದ ಊಟ ಉಣಿಸಿ ನಿಮ್ಮನ್ನು ತನ್ನ ಕಡೆನ ಮಾಡಿಕೊಳ್ಳುತ್ತಾಳೆ. ನನಗಿಂತ ತಾನು ನಿಮಗೆ ಒಳ್ಳೆಯವಳಾಗುತ್ತಾಳೆ.''

ಅಜ್ಜಿ ಹೇಳಿದಳು. ''ನೋಡ್ರಿ, ಸಾಹೇಬ್ರು ದೂರಿಂದ ನನಗೆ ತಮ್ಮ ಆಗುತ್ತಾರೆ.''ನಾನು ಅಜ್ಜಿಯ ವಾತ್ಸಲ್ಯದಲ್ಲಿ ಸಿಕ್ಕಿಕೊಂಡು ನಗುತ್ತ. ''ಹೌದು''ಎಂದೆ. ಮೂವರು ನಗಹತ್ತಿದೆವು. ಮುದುಕರಿಬ್ಬರೂ ಹೇಳಿದರು. ''ನಾವಿಬ್ರ ಇದ್ರ ಮನೆಯೊಳಗೆ ನಗು ಇರುದಿಲ್ಲರಿ. ನೀವು ಭಾಳ ನಗಸ್ತಿರಿ . ಏನೂ ತಿಳಿದುಕೊಳ್ಳದೇ ಊಟಕ್ಕೆ ಇಲ್ಲಿಗೆ ಬಂದ್ರ, ನಿಮಗೆ ಒಳ್ಳೆಯ ಊಟದಿಂದ ಹೊಟ್ಟೆ ತುಂಬುತ್ತದೆ. ನಾವಿಬ್ಬರೂ ನಕ್ಕು ನಕ್ಕು ನಮ್ಮ ಹೊಟ್ಟೆ ತುಂಬುತ್ತದೆ''.ಒಪ್ಪಿಕೊಂಡೆ.

ಅಂದಿನಿಂದ ವಾರದಲ್ಲಿ ಒಂದೆರಡು ಬಾರಿ ಅವರನ್ನು ನೋಡಲು ಹೋಗುತ್ತಿದ್ದೆ. ಒಳ್ಳೆಯ ರುಚಿಕಟ್ಟಾದ ತಿನಿಸು ತಿಂದು ಹರಟೆ ಹೊಡೆದು ಬರುತ್ತಿದ್ದೆ. ಪ್ರತಿ ಅಮಾವಾಸ್ಯೆಯ ದಿನ ಭರ್ಜರಿ ಹೋಳಿಗೆ ತುಪ್ಪದ ಊಟ. ಹೊಟ್ಟೆ ಕೆಡುವಂತೆ ಒತ್ತಾಯ ಮಾಡಿ ಅಜ್ಜಿ ಉಣಿಸುತ್ತಿದ್ದಳು. ನಿಜವಾಗಿ ಚಿಕ್ಕವರಾಗಿದ್ದಾಗಲೇ ತಂದೆ-ತಾಯಂದಿರನ್ನು ಕಳೆದು ಕೊಂಡಿದ್ದ ನನಗಂತೂ ಅವರನ್ನು ನನ್ನ ಸ್ವತಃ ತಂದೆ-ತಾಯಿಂದಿರಂದೇ ಭಾವಿಸಿದೆ.

ನನಗೋ ಹಬ್ಬವಿದೆ ಎಂದು ತಿಳಿದರೆ ಸಾಕಾಗುತ್ತಿತ್ತು. ಅವರು ಹೇಳಲೀ ಬಿಡಲಿ, ದುಡು ದುಡು ಓಡುತ್ತ ಅಡುಗೆ ಮನೆ ಸೇರಿ ಅಜ್ಜಿಯ ಮುಂದೆ ಚಾಪಿ ಹಾಸಿಕೊಂಡು ಚಕ್ಕಳಮುಕ್ಕಳಿ ಹಾಕಿಕೊಂಡು ಕೂಡ್ರುತ್ತಿದ್ದೆ. ನಮ್ಮಿಬ್ಬರ ಮಾತು ಜೋರಾಗಿ ನಗುವ ಸಪ್ಪಳ ಕೇಳಿ ತಮ್ಮ ಕೋಣೆ ಬಿಟ್ಟು ಜಯಮಾನರು ಅಡುಗೆ ಮನೆಗೆ ಬರುತ್ತಿದ್ದರು. ಅಜ್ಜಿಯನ್ನು ನನ್ನನ್ನು ಪ್ರೀತಿಯಿಂದ ಬಯ್ಯುತ್ತಿದ್ದರು. ''ಏನು ನಿಮ್ಮಿಬ್ಬರ ನಗು ರಸ್ತೆಯವರೆಗೂ ತಲಪುತ್ತದೆ. ಸ್ವಲ್ಪ ಸೂಕ್ಷ್ಮವಾಗಿ ಇರಬೇಕು. ಇದೇನೂ ಸುಶಿಕ್ಷಿತರ ಲಕ್ಷಣವೇ ?'' ಎನ್ನುತ್ತ ತಾವೂ ನಮಗಿಂತ ಜೋರಾಗಿ ನಗುತ್ತಿದ್ದರು. ಆಗ ನಾನು ಹೇಳುತ್ತಿದ್ದೆ.''ಸಾಹೇಬ್ರ , ನಮ್ಮ ಪ್ರಿನ್ಸಿಪಾಲರು ಹೆಂಗ ಅದಾರು, ಹಾಗೇಯೇ ನಾವೂ'' ಎನ್ನುತ್ತ ನಗುತ್ತಿದ್ದೆವು. ಒಂದು ದಿನ ಅಜ್ಜಿಯಿಂದ ಕರೆ ಬಂದಿತು. ''ನಾಳೆ ಹಬ್ಬವಿದೆ. ಊಟಕ್ಕೆ ಮನೆಗೆ ಬರಬೇಕು.''ಹೇಳಿ ಕಳುಹಿಸಿದ್ದ ಕಾರಣ ಮರುದಿನ ವೇಳೆಗೆ ಸರಿಯಾಗಿ ಅವರ ಮನೆ ತಲುಪಿದೆ. ಬಿಸಿ ಹೋಳಿಗೆಯ ಸುವಾಸನೆ,

ಬಿಸಿ ತುಪ್ಪದ ಘಮ ಘಮ ವಾಸನೆ ಸ್ವಾಗತಿಸಿದುವು. ಕರಿದ ಸಂಡಿಗೆ, ಮಸಾಲೆ ಮೆಣಸಿನ ಕಾಯಿಗಳ ವಾಸನೆಯೂ ಇತ್ತು. ಅಜ್ಜಿ ಒಳಗಿನಿಂದಲೇ ಕೂಗಿ ಹೇಳಿದಳು. ''ತಮ್ಮಾ ಇವತ್ತು ಊಟ ಸ್ವಲ್ಪ ತಡಾ ಐತಿ ಅವರ ಸಂಗಡ ಮಾತಾಡುತ್ತ ಇರ್ರಿ.''

ನಾನೂ ಜೋರಿನಿಂದ ''ಓಕೆ'' ಎಂದು ಕೂಗಿ ನನ್ನ ಚಲನೆಯ ದಿಕ್ಕನ್ನು ಅಡುಗೆಯ ಮನೆಯ ಕಡೆಗಿಂದ ಸಾಹೇಬರ ಕೊಠಡಿಯ ಕಡೆಗೆ ಹೊರಳಿಸಿದೆ.

ಸ್ವಲ್ಪ ಸಮಯದವರೆಗೆ ಅಲ್ಲಿ ಅವರೊಡನೆ ಮಾತನಾಡುತ್ತ ಕುಳಿತ್ತಿದ್ದೆ. ಮತ್ತೆ ದೇವರ ಮನೆಯಿಂದ ಅಜ್ಜಿ ಕೂಗಿದಳು. ''ಸಾಹೇಬ್ರ, ಇಬ್ಬರೂ ಬರ್ರಿ. ಕಾಶಿಬಾಯಿ ಊಟ ಮುಗಿತು. ಅಕಿ ಹೋಗುತ್ತೇನೆಂದು ಅನ್ನುತ್ತಿರುವಳು''.

ನನಗೆ ಕಾಶಿಬಾಯಿ ಎಂಬ ಹೆಸರೇ ಹೊಸದು. ಅಷ್ಟು ದಿನ ಅವರಲ್ಲಿಗೆ ಹೋದರೂ ಒಂದು ದಿನವೂ ಆಕೆ ನನಗೆ ಕಂಡಿದ್ದಿಲ್ಲ. ಅವಳ ಬಗೆಗೆ ಇಬ್ಬರೂ ಹೇಳಿದ್ದಿಲ್ಲ. ಯಾರೋ ಆಪ್ತರು ಇರಬೇಕೆಂದು ಅವರೊಡನೆ ಹೊರಟೆ. ದೇವರ ಮನೆಯಲ್ಲಿ ಒಬ್ಬ ಮುದುಕಿ ಕುಳಿತಿದ್ದಳು. ಆಕೆಯ ಸೀರೆ ಹಲವಾರು ಕಡೆಗೆ ಹರಿದಿತ್ತು. ಅಲ್ಲಲ್ಲಿ ತೇಪೆ ಹಚ್ಚಿದ್ದಳು. ಆಕೆ ತೊಟ್ಟ ಕುಬುಸದ ಗತಿ ಸೀರೆಯೊಡನೆ ಜೂಜು ಆಡುವಂತಿತ್ತು. ಮೈ ಕೈ ನೋಡಿದವರಿಗೆ ಕಡುಬಡತನದಲ್ಲಿ ಬದುಕುತ್ತಿರಬೇಕು ಎನಿಸುತ್ತಿತ್ತು. ತಲೆಯಲ್ಲಿಯ ಕೂದಲು ಎಣ್ಣೆ ಕಾಣದೇ ಎಷ್ಟು ದಿನಗಳಾಗಿತ್ತೋ ಆಕೆಯ ಕಾಲು ಒರಟಾಗಿದ್ದುವು. ಬೆರಳುಗಳ ಉಗುರು ಸ್ವತಂತ್ರವಾಗಿ ಬೆಳೆದು ತಿರುಚಿಕೊಂಡಿದ್ದುವು. ಹಣೆಯ ಮೇಲೆ, ಮುಖದ ಮೇಲೆ ನೆರಿಗೆಗಳ ಸಾಮ್ರಾಜ್ಯವೇ ಇತ್ತು. ಕುಂಕುಮ ಇರಲಿಲ್ಲ. ಕೊರಳಲ್ಲಿ ಕರಿಮಣಿಯೂ ಇರಲಿಲ್ಲ.

ನಾವು ದೇವರ ಮನೆಯೊಳಗೆ ಕಾಲಿಡುತ್ತಲೇ ಆಕೆ ತನ್ನ ಮುಖ ಕೆಳಗೆ ಮಾಡಿದಳು. ಮೈಯನ್ನೆಲ್ಲ ಮುದ್ದೆ ಮಾಡಿ ಕುಳಿತಳು. ಅವಳ ಮುಂದೆ ದೊಡ್ಡ ತಾಟು ಇತ್ತು. ಅಜ್ಜಿ ಮಾಡಿದ್ದ ಪಕ್ವಾನ್ನಗಳು ವಿವಿಧ ಪಾತ್ರೆಗಳಲ್ಲಿದ್ದುವು. ಪ್ರಿನ್ಸಿಪಾಲರು ಕೇಳಿದರು ''ತಾಯಿ, ಅಡುಗೆ ರುಚಿಕಟ್ಟಾಗಿತ್ತೋ ? ಮುದುಕಿ ಹೇಳಿದಳು'' ದೂಂನ್ರಿ ಯಪ್ಪಾ'' ''ಹೊಟ್ಟೆತುಂಬಾ ಉಂಡೆನಪಾ''

''ಹೂಂನ್ರಿ ಯಪ್ಪಾ''

ಪ್ರಿನ್ಸಿಪಾಲರು ಮಾತನಾಡುತ್ತಿರುವಾಗ ಅಜ್ಜಿ ಒಂದು ತಾಟು ತಂದಳು. ಅದರಲ್ಲಿ ಎರಡು ಹೊಸ ಸೀರೆ ಇದ್ದುವು ಎರಡು ಹೊಸ ಖಣ ಇದ್ದುವು. ಎಲೆ ಅಡಿಕೆ ಇಟ್ಟಿದ್ದರು. ಹಣ್ಣುಗಳಿದ್ದುವು. ತಾಟನ್ನು ಪ್ರಿನ್ಸಿಪಾಲರು ಇಸಿದುಕೊಂಡು ಎದುರಿಗಿದ್ದ ಮುದುಕಿಗೆ ಅವನ್ನೆಲ್ಲ ಸಲ್ಲಿಸಿದರು.

ಮುದುಕಿ ಉಡಿ ತುಂಬಿತು.

ಪ್ರಿನ್ಸಿಪಾಲರು ತಮ್ಮ ಕಿಸೆಯಿಂದ ಒಂದು ನೂರು ರೂಪಾಯಿಯ ನೋಟು ಆಕೆಯ ಉಡಿಯಲ್ಲಿ ಹಾಕಿ ಆಕೆಯ ಕಾಲಿಗೆ ಸಾಷ್ಟಾಂಗ ನಮಸ್ಕಾರ ಮಾಡಿದರು. ಮುದುಕಿ ''ಬ್ಯಾಡ್ರಿ ಯಪ್ಪಾ, ಬ್ಯಾಡ್ರಿ ಯಪ್ಪಾ'' ತಾವು ದೊಡ್ಡವರು. ನಮ್ಮಂಥಾ ಪರದೇಶಿಗಳಿಗೆ ಯಾಕ್ರಪಾ ನಮಸ್ಕಾರ. ನನ್ನ ಕರೆದಿರಿ, ಮನೆಯೊಳಗೆ ಕೂಡ್ರಿಸಿದಿರಿ. ದೇವರ ಮುಂದೆ ಊಟಕ್ಕೆ ಪಕ್ವಾನ್ನ ನೀಡಿದಿರಿ. ಸೀರಿ-ಕುಬುಸಾ ಕೊಟ್ರಿ. ನನ್ನ ಜೀವನದೊಳಗ ನಿಮ್ಮನ್ನ ಮರಿಯುವದಿಲ್ರಿ. ಹೊಟ್ಟೆ ತುಂಬಾ ಊಟಮಾಡಿ ಎಷ್ಟೋ ದಿನ ಆಗಿತ್ರಿ. ನಿಮಗೆ ಪುಣ್ಯ ಬರಲಿ'' ಅನ್ನುತ್ತಿರುವಾಗ ಅಜ್ಜಿಯೂ ಸಾಷ್ಟಾಂಗ ನಮಸ್ಕಾರ ಮಾಡಿ ಹಣ್ಣುಗಳನ್ನು ಉಡಿಯಲ್ಲಿ ತುಂಬಿದಳು. ಮುದುಕಿ ಎಲ್ಲವನ್ನೂ ಸ್ವೀಕರಿಸಿ ಎದ್ದು ಮನೆ ಬಿಟ್ಟು ಸಂತೋಷದ ಕಣ್ಣೀರು ಸುರಿಸುತ್ತ

ಹರಿಸುತ್ತ ಹೊರ ನಡೆದಳು. ಹೊರಬಾಗಿಲ ವರೆಗೂ ಪ್ರಿನ್ಸಿಪಾಲರು ಹಾಗೂ ಅಜ್ಜಿ ನಡೆದು ಆ ಮುದುಕಿಯನ್ನು ಬೀಳ್ಕೊಟ್ಟು ಬಂದರು.

ನಾಲ್ಕು ದಿಕ್ಕು ತೋಚದವನಂತೆ, ಮೂಕ ವಿಸ್ಮಿತನಾಗಿ ನಿಂತಿದ್ದೆ. ಅಜ್ಜಿ ಹೇಳಿದಳು. "ಇಂದು ನೀವಿಬ್ಬರೂ ದೇವರ ಮುಂದೆಯೇ ಕುಳಿತು ಉಣಬೇಕು." ಅಲ್ಲಿಯೇ ಚಾಪಿ ಹಾಸಿ ಇಬ್ಬರಿಗೂ ತಾಟು ಹಚ್ಚಿದಳು. ಅವರಿಬ್ಬರೂ ಯಾವುದೋ ತೃಪ್ತಿಯಿಂದ ಗದ್ಗದಿತರಾಗಿದ್ದರು. ನನಗೂ ಮಾತೇ ಹೊರಡಲಿಲ್ಲ. ಊಟ ಮಾಡಿದೆ. ಪ್ರತಿಯೊಂದು ಪದಾರ್ಥವೂ ರುಚಿಕಟ್ಟಾಗಿತ್ತು. ಊಟ ಮಾಡಿದ ಮೇಲೆ ಪ್ರಿನ್ಸಿಪಾಲರ ರೂಮಿಗೆ ಹೋಗಿ ಎಲೆ-ಅಡಿಕೆ ತಿನ್ನಲು ಪ್ರಾರಂಭಿಸಿದಾಗ ತಡೆಯಲಾರದೆ ಕೇಳಿದೆ "ಅಜ್ಜ, ನಾನು ಈ ಮುದುಕಮ್ಮನನ್ನು ನೋಡಿಯೇ ಇಲ್ಲ".

ಅಜ್ಜ: "ಹೌದು ನಾನರ ಎಲ್ಲಿ ನೋಡಿದ್ದೆ. ನಾನೂ ನೋಡಿದ್ದಿಲ್ಲ".

ನಾನು: ಹಾಗಾದರೆ ಈಕೆ ಯಾರ ಸಮಂಧಿಕಳು ?

ಅಜ್ಜ: "ದೇವರ ಸಮಂಧಿಕಳು".

ನಾನು : "ಇಂದು ನಡೆದದ್ದೆಲ್ಲಾ ನನಗ ವಿಚಿತ್ರ ಅನಿಸಿತು. ಒಂದ ಸ್ವಲ್ಪ ಒಡದ ಹೇಳಬೇಕು" ಎಂದೆ.

ಅಜ್ಜಿ ಹೇಳಿದಳು : "ತಮ್ಮಾ, ಇಲ್ಲಿ ಕೇಳು ಆ ಕಥಿ. ನಿನ್ನೆ ಇವರು ಮನೆಯ ಅಂಗಳದಲ್ಲಿ ನಡೆದಾಡುತ್ತಿದ್ದರು ಮಧ್ಯಾಹ್ನದಾಗ ಈ ಮುದುಕಿ ಆ ಗಿಡದ ಬುಡಕ ಸೆಗಣಿ ಆರಿಸುತ್ತಿದ್ದರು. ಆಕಿನ್ನ ಇವರು ನೋಡಿದರು. ಕರೆದರು. ನಾಳೆ ಮಧ್ಯಾಹ್ನ ಅಲ್ಲಿಗೆ ಬರಬೇಕು ಸ್ವಲ್ಪ ಕೆಲಸವಿದೆ ಎಂದು ಹೇಳಿದರು. ಆ ಮುದುಕಿ ಯಾವದೇ ಕೂಲಿ ಇರಬೇಕೆಂದು "ಬರತೀವ್ರಿ ಯಪ್ಪಾ" ಎಂದಳು. ತಪ್ಪಿಸಬಾರದೆಂದರು. ಆಕೆ ಒಪ್ಪಿದಳು. ಆಕೆ ಆ ಕಡೆ ಹೋದೊಡನೆ ಇವರು ನನ್ನತ್ತ ನೋಡಿ "ನೋಡು ಈ ಮುದುಕೀ ಮುಖ ನಮ್ಮ ಅವ್ವನ ಮುಖದಂಗ ಐತಿ. ಈ ನನ್ನ ತಾಯಿ ಕಂಡಂತೆ ಕಾಣುತ್ತಿರುವಳು. ನನ್ನ ತಾಯಿ ಇಲ್ಲಿಗೆ ಬಂದರೆ ನಾವು ಏನೆಲ್ಲ ಮಾಡುತ್ತಿದ್ದೆವೋ ಅದನ್ನೆಲ್ಲ ಮಾಡು. ಆಕೆಗೆ ಎರಡು ಹೊಸ ಸೀರೆ, ಎರಡು ಖಣ ತರಿಸು. ಆಕೆಗೆ ಮೃಷ್ಟಾನ್ನ ಭೋಜನ ಹಾಕಿದ ಮೇಲೆ ಉಡಿ ತುಂಬಿ ಅವಳ ಪಾದಗಳಿಗೆ ಸಾಷ್ಟಾಂಗ ಹಾಕಿ ಆಶೀರ್ವಾದ ಪಡೆಯೋಣ" ಎಂದರು. ಅದೇ ಕಾರಣದಿಂದ ನಸುಕಿನಲ್ಲಿ ಎದ್ದು ಈ ಎಲ್ಲ ತಿನಿಸುಗಳನ್ನು ತಯಾರಿಸಿ ಆಕೆಗೆ ಪೂಜೆ ಮಾಡಿ ದೇವರ ಮನೆಯಲ್ಲಿ ಆಕೆಗೆ ಪ್ರಸಾದ ನೀಡಿದೆವು. ಮೊದಲೇ ವಿಚಾರಿಸಿದಂತೆ ಸೀರೆ, ಖಣಗಳನ್ನು ಆಕೆಗೆ ಸಲ್ಲಿಸಿದೆವು. ಖಣಗಳಿಂದ ಕುಬುಸ ಹೊಲಿಸಿಕೊಳ್ಳಲು ಹಣವೆಂದು ಒಂದು ನೂರು ರೂಪಾಯಿಯನ್ನು ಕೊಟ್ಟೆವು. ಆಕೆಯ ಮನೆ, ಮಂದಿ ಉಳಿದುದೆಲ್ಲ ನಮಗೆ ಗೊತ್ತಿಲ್ಲ".

ನನಗೆ ಗೊತ್ತಿಲ್ಲದಂತೆ ಆ ಮುದುಕಿ ಹೋದ ದಿಕ್ಕಿಗೆ ನನ್ನ ತಲೆ ಬಾಗಿತು. ಕೈಗಳು ನಮಸ್ಕರಿಸಿದುವು. ಮರುಕ್ಷಣವೇ ನನಗೆ ಎಚ್ಚರವಾಯಿತು. ಮುಂದೆ ಕುಳಿತಿದ್ದ ಪ್ರಿನ್ಸಿಪಾಲ ಹಾಗೂ ಅವರ ಮಡದಿಯವರ ಕಡೆಗೆ ನೋಡಿ ದೀರ್ಘದಂಡ ನಮಸ್ಕಾರ ಸಲ್ಲಿಸಿದೆ. ನನ್ನ ತಂದೆ-ತಾಯಿ ಅವರಲ್ಲಿಯೇ ನನಗೆ ಕಂಡಂತೆ ಆಯಿತು. ಜೀವನದಲ್ಲಿ ಸಂತೋಷದಿಂದ ಬಾಳುವ ಕಲೆಯನ್ನು ಕಂಡಂತಾಯಿತು. ಕೈಲಾಸವಾಸಿಯಾದ ತಾಯಿಯನ್ನು ಹುಡುಕುವ ಬಗೆ ತಿಳಿಯಿತು.

ಕಾಣು ಜನರಲಿ ಗುಣವ ಮರೆಯುವರ ದುರ್ಗುಣವ
ಬಾನಿನಲಿ ದಿಟ್ಟ ನೆಟ್ಟರಲಿ ನೆಲದಲಿ ನಡಿಗೆ
ಘನವಿರಲಿ ಲೋಕೋಪಯೋಗಿಯಾಗಿರು ನಾಕ
ನೀನಿರ್ಪೆಡೆಗವ ತರಿಸುವುದು ದಿಟ ಅತ್ರಿಸೂನು

# ಐವತ್ತರವರೆಗೆ ನಿಮಗಿದು ತಿಳಿಯದು

**ಡಿ.ಎ.ಶಾಮಣ್ಣ**
ನಂ.೧೯೯೧, 'ಆರಭಿ', ೧ನೇ ಮೇನ್,
೩ನೇ ಕ್ರಾಸ್, ಶ್ರೀರಾಂಪುರ ೨ನೇ ಹಂತ
ಮೈಸೂರು-೫೭೦ ೦೨೩

ಅಲಾರಮ್ ಹೊಡೆಯುತ್ತದೆ. ಇವತ್ತೇಕೆ ಅಲಾರಮ್ ಇಟ್ಟೆ, ಭಾನುವಾರವಲ್ಲವೆ? -ಎಂದು ಅರ್ಧ ನಿದ್ರೆಯಲ್ಲಿ ಪ್ರಶ್ನಿಸಿಕೊಳ್ಳುತ್ತೇನೆ. ಆಗ ನನಗೆ ತಟಕ್ಕನೆ ಹೊಳೆಯುತ್ತದೆ -ಇಂದು ನನ್ನ ಐವತ್ತನೆಯ ಹುಟ್ಟುಹಬ್ಬ. ಮನೆಯಲ್ಲೊಂದು ಭೋಜನಕೂಟ, ಮನೆ ತುಂಬ ಅತಿಥಿಗಳು. ''ಏಳು, ನಿನಗೆ ಇಂದು ಐವತ್ತು''-ಎಂದು ಹಲವು ಬಾರಿ ನನಗೆ ನಾನೇ ಮೆಲ್ಲಗೆ ಹೇಳಿಕೊಳ್ಳುತ್ತೇನೆ: 'ಐವತ್ತು' ಎನ್ನುವ ಶಬ್ದಕ್ಕೆ ಅಭ್ಯಾಸವಾಗಲೀ ಎಂಬಂತೆ. ಎದ್ದವಳೇ ನೇರ ಸ್ನಾನದ ಮನೆಗೆ ನಡೆದು ಕನ್ನಡಿಯ ಮುಂದೆ ನಿಲ್ಲುತ್ತೇನೆ. ಚಿರಪರಿಚಿತ ಮುಖವೊಂದು ಕನ್ನಡಿಯಲ್ಲಿ ನಗುತ್ತದೆ. ನನ್ನ ಕೂದಲೇನೂ ಇದ್ದಕ್ಕಿದಂತೆ ಬೆಳ್ಳಗಾಗಿಲ್ಲ, ಮುಖದಲ್ಲಿ ಹೊಸ ಸುಕ್ಕುಗಳೇನೂ ಬಂದಿಲ್ಲ.

ಸ್ನಾನದ ಮನೆಯ ಬಾಗಿಲು ತೆರೆಯುತ್ತದೆ. ತೋಳುಗಳೆರಡು ಮೆಲ್ಲಗೆ ನನ್ನನ್ನು ಬಳಸುತ್ತವೆ. ''ಹ್ಯಾಪಿ ಬರ್ತಡೇ, ಮಮ್ಮಿ'' ೨೨ ವಯಸ್ಸಿನ ನನ್ನ ಚಿಕ್ಕ ಮಗಳು ಹೇಳುತ್ತಾಳೆ. ಮತ್ತೆರಡು ತೋಳುಗಳು ನನ್ನನ್ನು ಬಳಸುತ್ತವೆ. ೨೪ ವಯಸ್ಸಿನ ನನ್ನ ದೊಡ್ಡ ಮಗಳದ್ದು. ''ನನಗೂ ಅವಕಾಶ ಕೊಡುತ್ತೀರಿ ತಾನೆ ? '' ನನ್ನ ಪತಿ ಕೇಳುತ್ತಾರೆ. ಒಂದು ಕ್ಷಣ ನನ್ನನ್ನು ನೋಡಿದವರೆ ಮೆಲ್ಲಗೆ ನನ್ನ ಕೆನ್ನೆಯನ್ನು ಮುಟ್ಟಿ, ''ನಿನ್ನ ಚರ್ಮ ಇನ್ನೂ ಎಷ್ಟು ಮೃದುವಾಗಿದೆ'' ಎನ್ನುತ್ತಾರೆ.

''ಏಳಿ ಹೊರಡೋಣ''-ಎಂದಷ್ಟೇ ಹೇಳುತ್ತೇನೆ. ಹನ್ನೊಂದಕ್ಕೆ ಭೋಜನಕೂಟ ಶುರುವಾಗಲಿದೆ. ಮಾಡಬೇಕಾದ ಕೆಲಸವಿನ್ನೂ ಎಷ್ಟೋ ಇದೆ.

ಐವತ್ತನೆಯ ಹುಟ್ಟುಹಬ್ಬವನ್ನು ಆಚರಿಸಿಕೊಳ್ಳಲು ನನ್ನನ್ನು ಒಪ್ಪಿಸುವುದು ನನ್ನ ಪತಿಗೆ ಅಷ್ಟೇನೂ ಸುಲಭದ ಕೆಲಸವಾಗಿರಲಿಲ್ಲ. ಒಂದೊಂದು ವರ್ಷ ವಯಸ್ಸಾಗುವುದನ್ನೂ ನಾನು ದ್ವೇಷಿಸುತ್ತಿದ್ದೆ. ನನಗೆ ಹನ್ನೊಂದು ತುಂಬಿದಾಗ ಬಹಳ ಬೇಸರವಾಗಿತ್ತು. ೧೬ರ ಪ್ರಾಯದಲ್ಲಿಯೇ ಮೂರು ವರ್ಷಗಳೂ, ೩೦ರಲ್ಲಿಯೇ ಐದು ವರ್ಷಗಳೂ ಮತ್ತು ೪೫ರಲ್ಲಿಯೇ ಕನಿಷ್ಠ ಹತ್ತು ವರ್ಷಗಳಾದರೂ ಉಳಿಯಬೇಕೆಂದು ಹಂಬಲಿಸಿದ್ದು ನನಗೀಗಲೂ ನೆನಪಿದೆ.

ನನ್ನ ೩೫ನೆ ವಯಸ್ಸಿನಲ್ಲಿ ಮೊದಲ ಬಿಳಿಯ ಕೂದಲುಗಳನ್ನು ಗಮನಿಸಿದೆ. ಸ್ವಲ್ಪ ಗಾಬರಿಯಾಗಿ, ಕನ್ನಡಿ ಮುಂದೆ ನನ್ನ ಕೆನ್ನೆಗಳನ್ನು ದೃಷ್ಟಿಸಿ ನೋಡುತ್ತಾ ನಿಂತೆ. ಇದೇ ಸಮಯಕ್ಕೆ ನನ್ನ ದೊಡ್ಡ ಮಗಳು ಶಾಲೆಯಿಂದ ಬಂದಳು. ನನ್ನ ಮನಸ್ಸಿನ ಕಳವಳವನ್ನು ಗಮನಿಸಿ, ''ಏನಾಯಿತು?'' ಎಂದಳು.

''ತಲೆಯಲ್ಲಿ ಬಿಳಿಯ ಕೂದಲು'', ಎಂದು ಕೌತುಕದ ದನಿಯಲ್ಲಿ ಉತ್ತರಿಸಿದೆ. ''ನಿನ್ನ ಮೊದಲ ಬಿಳಿ ಕೂದಲುಗಳನ್ನು ಜೋಪಾನವಾಗಿ ತೆಗೆದಿಡು, ನೆನಪಿನ ಕುರುಹಾಗಿ ಉಳಿಯುತ್ತವೆ'', ಎಂದಳು ನಿಜ, ನನ್ನ ಮಗಳ ಜೀವನದ ಎಲ್ಲ 'ಮೊದಲು'ಗಳನ್ನೂ, ಅವಳ ಬೆಳವಣಿಗೆ ಎಲ್ಲ ಸಣ್ಣ ಘಟನೆಗಳನ್ನೂ ನಾನು ಜೋಪಾನವಾಗಿ ದಾಖಲು ಮಾಡಿಟ್ಟಿದ್ದೆ.

ಈ ಸಣ್ಣ ಅಡಚಣೆಯ ಅನಂತರ ನಲವತ್ತರವರೆಗೆ ನನ್ನ ಜೀವನ ಯಥಾಸ್ಥಿತಿಯಲ್ಲಿ ನಡೆದುಕೊಂಡು ಹೋಯಿತು. ಆನಂದದಿಂದಿದ್ದೆ. ಕಳೆದ ಹತ್ತು ವರ್ಷಗಳಿಂದ ನನ್ನನ್ನು

ರೀಡರ್ಸ್ ಡೈಜೆಸ್ಟ್ ಫೆಬ್ರವರಿ ೨೦೦೦ನೇ ಸಂಚಿಕೆ?ಲ್ಲಿ ಪ್ರಕಟವಾದ ಹೆಲೀನ್ ರವರ ಲೇಖನದ ಕನ್ನಡಾನುವಾದ.

ವೇಗವಾಗಿ ಕರೆದೊಯ್ದಿದ್ದ ಜೀವನವೆಂಬ ಎಕ್ಸ್‌ಪ್ರೆಸ್ ರೈಲಿನಿಂದ ಆಗತಾನೇ ಇಳಿದಿದ್ದೆ. ಆ ಹತ್ತು ವರ್ಷಗಳಲ್ಲಿ ಜೀವನದ ರೈಲಿನ ಕಿಟಕಿಯಿಂದ ಆಚೆಗೆ ಇಣುಕುವಷ್ಟು ವೇಳೆಯೂ ನನಗಿರಲಿಲ್ಲ. ಮೂವತ್ತರಿಂದ ನಲವತ್ತರವರೆಗೆ ಎಲ್ಲವೂ ಒಂದೇ ವೇಗದಲ್ಲಿ ಸಾಗುತ್ತಿತ್ತು: ನನ್ನ ಪತಿಯ ಜೊತೆ ಹೊಂದಿಕೊಂಡಿರುವುದಕ್ಕೆ ಕಲಿಯುವುದು, ಮನೆಯನ್ನು ಕಟ್ಟಿಸುವುದು, ನನಗೊಂದು ತಕ್ಕ ಕೆಲಸವನ್ನು ಹುಡುಕಿಕೊಳ್ಳುವುದು, ಮಕ್ಕಳನ್ನು ಬೆಳೆಸುವುದು. ಈ ಜವಾಬ್ದಾರಿಗಳಲ್ಲಿ ನಾನು ಮೂಗಿನವರೆಗೂ ಮುಳುಗಿದ್ದೆ- ಈ ಪ್ರವಾಹವು ನನ್ನನೆಲ್ಲಿಗೆ ಒಯ್ಯುತ್ತದೆಂಬ ಸೂಚನೆಯೂ ನನಗಿರಲಿಲ್ಲ.

ನಲವತ್ತು ತುಂಬಿದಾಗ ನನಗಿಷ್ಟವಾದದ್ದು ಇದು: ಜೀವನದ ಜಂಜಾಟದ ಪ್ರತಿಫಲಗಳನ್ನು ಹಿಂದಿರುಗಿ ನೋಡಬಹುದಿತ್ತು. ನನ್ನ ಇಬ್ಬರು ಹೆಣ್ಣು ಮಕ್ಕಳೂ ಬಾಲ್ಯದ ಎಲ್ಲ ಹಂತಗಳನ್ನೂ ದಾಟಿ ದೊಡ್ಡವರಾಗಿದ್ದರು, ನಮ್ಮ ನಿರಂತರ ಗಮನ ಅವರಿಗೀಗ ಬೇಕಿರಲಿಲ್ಲ. ಇಷ್ಟೇ ಅಲ್ಲ, ವಯಸ್ಸಾಗುವುದರಿಂದಾಗುವ ಪ್ರಯೋಜನಗಳ ಅರಿವೂ ಮೂಡಲಾರಂಭಿಸಿತು : ನನ್ನದೇ ಜೀವನ ಶೈಲಿಯನ್ನು ರೂಪಿಸಿಕೊಂಡೆ, ನನ್ನ ಆತ್ಮ ವಿಶ್ವಾಸವೂ ಹೆಚ್ಚಿತು.

ಆದರೆ ಐವತ್ತನೆಯ ವಯಸ್ಸು ಸಮೀಪಿಸುತ್ತಿದ್ದಂತೆ, ನನ್ನನ್ನು ಆವರಿಸಿದ್ದ ರಕ್ಷಾಕವಚದಿಂದ ನಿಷ್ಕರುಣೆಯಿಂದ ಹೊರದಬ್ಬಿದಂತಾಗಿತ್ತು. ಮುದುಕಿಯಾಗುತ್ತಿದ್ದೇನೆ ಎಂಬುದರ ಕಹಿ ಅರಿವಾಗತೊಡಗಿತು. ''ನಿಮ್ಮ ವಯಸ್ಸಿಗೆ ನೀವು ಚಿಕ್ಕವರಾಗಿಯೇ ಕಾಣುತ್ತೀರಿ'' ಎಂಬ ಸ್ನೇಹಿತರ ಮೆಚ್ಚುಗೆಯ ನುಡಿಗಳು ನಾನು ಮುದುಕಿಯಾಗುತ್ತಿದ್ದೇನೆಂಬುದನ್ನು ಇನ್ನೂ ಸ್ಪಷ್ಟಪಡಿಸಿದವು.

ನನ್ನ ಮಗಳ ಜೊತೆ ಮೂರು ದಿನಗಳ ಲಂಡನ್ ಪ್ರವಾಸವನ್ನು ಮಾಡಿದ್ದು ನನಗೀಗಲೂ ನೆನಪಿದೆ. ಇದು ಅವಳ ಮೊದಲ ಲಂಡನ್ ಭೇಟಿಯಾಗಿದ್ದರಿಂದ ಬಹಳ ಶ್ರಮವಹಿಸಿ ದೊಡ್ಡ ಕಾರ್ಯಕ್ರಮವನ್ನೇ ರೂಪಿಸಿದ್ದೆ. ಲಂಡನ್ನಿನ ಬೀದಿಗಳಲ್ಲಿ ಪ್ರಯಾಸದ ಹೆಜ್ಜೆ ಹಾಕಿ, ಪೇಟೆಯಲ್ಲಿ ಖರೀದಿಸಿದ ವಸ್ತುಗಳ ಭಾರವಾದ ಚೀಲಗಳನ್ನು ಹೊತ್ತು ಸಂಜೆ ನಾವಿಳಿದುಕೊಂಡಿದ್ದ ವಸತಿಗೃಹಕ್ಕೆ ಹಿಂದಿರುಗಿದಾಗ ನನ್ನ ಕಣ್ಣುಗಳು ಹಾಸಿಗೆಯತ್ತ ಹೊರಳಿದುವು. ದಣಿವಿನಿಂದ ಕೈಕಾಲು ಭಾರವಾಗಿದ್ದವು. ಈ ದಣಿವಿಗೆ ವಯಸ್ಸೇ ಕಾರಣವಿರಬಹುದು ಎಂದುಕೊಂಡೆ.

ನನ್ನ ಮಗಳು ಆಗಲೇ ಹಾಸಿಗೆಯಲ್ಲಿ ಮಲಗಿದ್ದಳು. ''ಮತ್ತೆ ನಾವು ಆಚೆ ಹೋಗಬೇಕೆ, ಆರಾಮವಾಗಿ ಟಿ.ವಿ. ನೋಡುತ್ತಾ ಇದ್ದರಾಗದೆ ?'' ಎಂದು ಕೇಳಿದಳು. ತನಗೂ ಬಹಳ ದಣಿವಾಗಿದೆಯೆಂದಳು. ದಣಿವಿಗೆ ವಯಸ್ಸೇ ಕಾರಣವೆಂಬ ನಿರ್ಧಾರಕ್ಕೆ ಥಟ್ಟನೆ ಬರಬೇಕಾಗಿಲ್ಲ. ಒಮ್ಮೊಮ್ಮೆ ಹೆಸರುಗಳು ಮರೆತು ಹೋಗುತ್ತವೆ, ಹೆಚ್ಚು ನಡೆಯುವಾಗ ಒಮ್ಮೆ ನಿಂತು ಉಸಿರೆಳೆದುಕೊಳ್ಳಬೇಕಾಗುತ್ತದೆ, ಮದುವೆ ಮುಂಜಿಗೆ ಹೋದಾಗ ಬೇಗ ಹಿಂದಿರುಗಬೇಕೆನಿಸುತ್ತದೆ, ಗಣಕದಲ್ಲಿ ಕೆಲಸಮಾಡುವಾಗ ಅಥವಾ ಅಂತಹುದೇ ಇತರ ಕೆಲಸಗಳನ್ನು ಮಾಡುವಾಗ ಸ್ವಲ್ಪ ನಿಧಾನವಾಗುತ್ತದೆ-ನಿಜ. ಆದರೆ ಸ್ವಲ್ಪ ಕುಂದಿದ ಜ್ಞಾಪಕಶಕ್ತಿ ನನಗೂ ಮನೆಯವರಿಗೂ ಒಳ್ಳೆಯದೆಂದೇ ನನ್ನ ಪತಿ ತಮಾಷೆಯಾಗಿ ಹೇಳುವುದುಂಟು. ಅದಲ್ಲದೆ ಗಣಕದಲ್ಲಿ ವೇಗವಾಗಿ ಕೆಲಸಮಾಡುವುದು ಮೂವತ್ತರ ಪ್ರಾಯದವರಿಗೂ ಅಷ್ಟೇನು ಸುಲಭವಲ್ಲವೆಂದು ಹೇಳುವುದುಂಟು.

ನನಗೆ ವಯಸ್ಸು ಇಪ್ಪತ್ತಾಗಿದ್ದಾಗ ಪತ್ರಿಕೋದ್ಯಮದ ಮೊದಲ ಕೆಲಸವನ್ನು ಒದಗಿಸಿಕೊಟ್ಟ, ಈಗ ೮೦ರ ಹರೆಯಲ್ಲಿರುವ ನನ್ನ ಹಿರಿಯ ಸಂಪಾದಕ ಮಿತ್ರರೊಂದಿಗೆ ಮಾತನಾಡುವಾಗ, 'ವಯಸ್ಸು ' ಎಂಬುದು

ಎಷ್ಟು ತುಲನಾತ್ಮಕ ಎಂಬುದರ ಅರಿವು ನನಗಾಯಿತು. ''ನನಗಿನ್ನೇನು ಐವತ್ತಾಗಲಿದೆ'' ಎಂದು ಜುಗುಪ್ಸೆಯಿಂದಲೇ ಹೇಳಿದೆ.

ಪುನಃಪೂರ್ವಕವಾಗಿ ನಕ್ಕ ಅವರು, ಒಂದು ಗುಟುಕು ಮದ್ಯವನ್ನು ಹೀರಿ, ಸಿಗಾರನ್ನು ಬಾಯಿಂದ ತೆಗೆದು, ಹೊಗೆ ಬಿಟ್ಟು ನುಡಿದರು: ''ಐವತ್ತು! ಜೀವನ ಆರಂಭವಾಗುವುದೇ ಐವತ್ತರಲ್ಲಿ ನೀನೀಗ ಜೀವನದ ಅತ್ಯುತ್ತಮ ಭಾಗದಲ್ಲಿದ್ದೀಯ''. ಇಪ್ಪತ್ತು ಮೂವತ್ತರ ಹರೆಯದವರಲ್ಲಿರಲಾಗದ ಒಂದು 'ಅಂತರ್‌ದಿಕ್ಸೂಚಿ' ಐವತ್ತರಲ್ಲಿರುವವರಲ್ಲಿರುತ್ತದೆ. ಜೀವನದ ವಿವಿಧ ಘಟನೆ, ಅವಕಾಶ, ಅನುಭವಗಳನ್ನು ಚೆನ್ನಾಗಿ ಅರಿತುಕೊಳ್ಳಲು ಹಾಗೂ ತಮ್ಮ ಚೈತನ್ಯವನು ಸರಿಯಾದ ಮಾರ್ಗದಲ್ಲಿ ಹರಿಸಿ, ಜೀವನದ ಧ್ಯೇಯಗಳನ್ನು ಹೆಚ್ಚು ಅರ್ಥಪೂರ್ಣವಾಗಿಸಿಕೊಳ್ಳಲು ಈ 'ಅಂತರ್‌ದಿಕ್ಸೂಚಿ' ಸಹಾಯ ಮಾಡುತ್ತದೆ.

ಕಳೆದ ಹತ್ತು ವರ್ಷಗಳಲ್ಲಿ ಏನಾಗಿದೆ ಎಂಬುದನ್ನು ಐವತ್ತು ದಾಟಿರುವ ನಾನು ಅರ್ಥಮಾಡಿಕೊಳ್ಳಬಲ್ಲೆ. ನಾನು ಮತ್ತು ನನ್ನ ಪತಿ ವೃತ್ತಿ ಜೀವನದ ವಿವಿಧ ಹಂತಗಳನ್ನು ಯಶಸ್ವಿಯಾಗಿ ಏರಿದ್ದೇವೆ. ನಮ್ಮ ಮಕ್ಕಳು ದೊಡ್ಡವರಾಗಿ ಈಗ ಕಾಲೇಜಿನಲ್ಲಿದ್ದಾರೆ. ಬಾಲ್ಯಾವಸ್ಥೆಯಿಂದ ಹೊರ ಬಂದಿರುವ ಅವರು ಜೀವನ ರಥವನ್ನೇರಲು ಅನುವಾಗುತ್ತಿದ್ದಾರೆ. ಮಕ್ಕಳ ಮಲಗುವ ಕೋಣೆಗಳೀಗ ಅವರ ಯೌವ್ವನವನ್ನು ಜ್ಞಾಪಿಸುವ ವಸ್ತು ಸಂಗ್ರಹಾಲಯಗಳಂತಿವೆ. ಈಗವರ ಕೋಣೆಗಳಿಂದ ಬೆಳಗಿನ ಹೊತ್ತು ಜೋರಾದ ಪಾಪ್ ಸಂಗೀತದ ಶಬ್ದವಿಲ್ಲ. ಸಂಜೆಗಳಂತೂ ಸಂಪೂರ್ಣವಾಗಿ ನಮ್ಮದೇ ಆಗಿವೆ.

ಐವತ್ತು: ನಡುಜೀವನದ ಈ ತಿರುವಿನಲ್ಲಿ ಸಹಜವಾಗಿ ಕಾಣಿಸಿಕೊಳ್ಳುವ ಮುಗ್ಗಟ್ಟಿನ ಪರಿಣಾಮ ಈಗಿನವರಿಗೆ ಹಿಂದಿನ ತಲೆಮಾರಿನವರಿಗಿಂತ ಕಡಿಮೆ ನಕಾರಾತ್ಮಕವಾಗಿರುತ್ತದೆ. ಜೀವನದಲ್ಲಿಯ ಅವಕಾಶಗಳು, ಜೀವನದ ಬಗ್ಗೆ ನಮಗಿರುವ ಪ್ರಜ್ಞೆ ಮತ್ತು ದೃಷ್ಟಿಕೋನ ಹಿಂದಿನ ತಲೆಮಾರಿನವರಿಗಿಂತ ಭಿನ್ನವಾಗಿವೆ. ನಮ್ಮ ತಾಯಿಯೊಂದಿಗೆ ನನ್ನ ಚೊಚ್ಚಲ ಹೆರಿಗೆ ಬಗ್ಗೆ ಇತ್ತೀಚೆಗಷ್ಟೆ ಮಾತನಾಡುತ್ತಿದ್ದೆ. ಆಗವರ ವಯಸ್ಸು ೪೮. ಆ ಸಮಯದ ಭಾವಚಿತ್ರಗಳನ್ನು ನೋಡುತ್ತಿದ್ದ ನಮ್ಮ ತಾಯಿಗೆ, ಈಗ ನನಗಾಗುವಷ್ಟೇ ವಯಸ್ಸು ಆಗವರಿಗಾಗಿತ್ತೆಂದು ನಂಬಲೇ ಆಗಲಿಲ್ಲ. ''ನಾನಾಗ ಇನ್ನೂ ವಯಸ್ಸಾದವಳಂತೆ ಕಾಣುತ್ತೀನಿ'', ಎಂದರು. ಹಿಂದಿನ ತಲೆಮಾರಿನವರಿಗೆ ಹೋಲಿಸಿದಾಗ, ಈಗಿನವರು ತಮ್ಮ ನಿಜವಾದ ವಯಸ್ಸಿಗಿಂದ ಕನಿಷ್ಠ ಹತ್ತು ವರ್ಷವಾದರೂ ಚಿಕ್ಕವರಂತೆ ಕಾಣುತ್ತಾರೆ. ಅಷ್ಟೇ ಅಲ್ಲ ಈಗಿನವರ ದೈಹಿಕ ಹಾಗೂ ಮಾನಸಿಕ ಬೆಳೆವಣಿಗೆ ಹೆಚ್ಚು ವ್ಯವಸ್ಥಿತವಾಗಿದೆ. ತೀವ್ರ ಆರ್ಥಿಕ ಬಿಕ್ಕಟ್ಟಿದ್ದ ಮೊದಲನೆಯ ಮಹಾಯುದ್ಧದ ಸಮಯದಲ್ಲಿ ಬೆಳೆದ ನಮ್ಮ ತಾಯಿಗೆ ಸರಿಯಾದ ದೈಹಿಕ ವ್ಯಾಯಾಮವಾಗಲೀ, ಪುಷ್ಟಿಕರ ಆಹಾರವಾಗಲಿ ದೊರೆಯುತ್ತಿರಲಿಲ್ಲ. ಮಕ್ಕಳಿಗೆ ರೋಗ ನಿರೋಧಕ ಚುಚ್ಚುಮದ್ದುಗಳನ್ನು ಹಾಕುವ ಏರ್ಪಾಡು ಇನ್ನೂ ಜಾರಿಗೆ ಬಂದಿರಲಿಲ್ಲ. ವೈದ್ಯಕೀಯ ದೃಷ್ಟಿಯಲ್ಲಿ ಆರೋಗ್ಯಕರ ಜೀವನ ಶೈಲಿ ಏನೆಂಬುದನ್ನು ಗ್ರಹಿಸಿರಲಿಲ್ಲವೆಂದೇ ಹೇಳಬಹುದು.

ಈ ವಿಷಯಗಳಲ್ಲಿ ನಾವು ಅವರಿಗಿಂತ ಎಷ್ಟೋ ಅದೃಷ್ಟವಂತರು. ಅಷ್ಟೇ ಅಲ್ಲ, ನಮ್ಮ ಭವಿಷ್ಯವನ್ನು ಸರಿಯಾಗಿ ರೂಪಿಸಿಕೊಳ್ಳಲು ಯೋಜನೆಗಳನ್ನು ಮಾಡಬಲ್ಲೆವು. ಐವತ್ತರ ಮೆಟ್ಟಿಲು ನಾವು ನಮ್ಮ ಬದುಕನ್ನು ಹೇಗೆ ಜೀವಿಸುತ್ತಿದ್ದೇವೆ ಎಂಬುದನ್ನು ಅವಲೋಕಿಸಲು ತಕ್ಕ ವಯಸ್ಸು.

ಮದುವೆ, ತಾಯ್ತನ ಮತ್ತು ವೃತ್ತಿವರ್ಧನೆಗೆ ನನ್ನ ಚೈತನ್ಯ, ಸಮಯ ಮತ್ತು ಜಾಣತನ

ವೆಲ್ಲವೂ ಸಂಪೂರ್ಣವಾಗಿ ವ್ಯಯವಾಗುವುದನ್ನು ನಾನು ಈಚಿನ ವರ್ಷಗಳಲ್ಲಿ ಗ್ರಹಿಸಿದ್ದೇನೆ. ಜೀವನದ ಒಂದು ಮಜಲಿನಲ್ಲಿ ಇದು ಹೀಗೆಯೇ. ಈ ಸಂದರ್ಭದಲ್ಲಿ ನನಗೊಂದು ಗಾದೆ ನೆನಪಾಗುತ್ತದೆ: "ನಿಮ್ಮ ಜೀವನದ ಮೊದಲ ನಾಲ್ಕು ದಶಕಗಳು ಹೊರಗಿನ ಮನೆಯನ್ನು ನಿರ್ಮಿಸಲು ವ್ಯಯವಾದರೆ, ಎರಡನೆಯ ನಾಲ್ಕು ದಶಕಗಳು ಹೃದಯಾಂತರಾಳದ ನೆಲೆಯನ್ನು ನಿರ್ಮಿಸಲು ವ್ಯಯವಾಗುತ್ತವೆ". ಹೊಸ ಹೊಸ ಅವಕಾಶಗಳನ್ನು ಸೃಷ್ಟಿಸುವ ಸವಾಲನ್ನು ಸ್ವೀಕರಿಸುವವರಿಗೆ ನಿಜವಾದ ಜೀವನವು ಐವತ್ತರಲ್ಲಿಯೇ ಆರಂಭವಾಗುವುದೆಂಬುದರ ಅರಿವು ಇರುತ್ತದೆ.

ಜೀವನದ ಜೊತೆ ಮಧುರ ಬಾಂಧವ್ಯವನ್ನು ಬೆಳೆಸಿಕೊಳ್ಳಲು ಇದು ಸರಿಯಾದ ಸಮಯ. ಬಹುಕಾಲದಿಂದ ಪೋಷಿಸಿದ ಕನಸುಗಳನ್ನು ನನಸಾಗಿಸುವ ಸಮಯ. ಇಷ್ಟವಾದ ವಸ್ತುಗಳನ್ನು ಕೊಳ್ಳುವುದಕ್ಕಾಗಲಿ, ಇಷ್ಟ ಪಡುವ ಹವ್ಯಾಸಗಳನ್ನು ನನ್ನ ಪಕ್ಷದಲ್ಲಿ ಬರೆಯುವುದು -ಬೆಳೆಸಿಕೊಳ್ಳುವುದಕ್ಕಾಗಲಿ ಯುಕ್ತವಾದ ಸಮಯ.

ಹುಟ್ಟುಹಬ್ಬಕ್ಕೆ ನನಗೆ ತೀರಾ ಸಮೀಪವಾದವರನ್ನು ಮಾತ್ರ ಆಹ್ವಾನಿಸಿದ್ದೆ. ಇವರಲ್ಲಿ ಹಲವರನ್ನು ನೋಡಿ ವರ್ಷಗಳೇ ಕಳೆದಿದ್ದುವು. ಒಮ್ಮೆ ಸ್ಥಿರವಾಗಿ ನೆಲಸಿದ ಸ್ನೇಹ ವಿಶ್ವಾಸಗಳು ಸುಲಭವಾಗಿ ಮಾಸುವುದಿಲ್ಲ, ಇಂದು ನನಗೆ ಇದರ ಅರಿವಾಗಿದೆ. "ನಿಮ್ಮ ಮಕ್ಕಳು ಚೆನ್ನಾಗಿ ಬೆಳೆದಿದ್ದಾರೆ, ಬಹಳ ಇಷ್ಟವಾಗುತ್ತಾರೆ. ಕಳೆದಬಾರಿ ನಾನವರನ್ನು ನೋಡಿದಾಗ ಇದರಲ್ಲರ್ಧವೂ ಇರಲಿಲ್ಲ"-ದೊಡ್ಡದಾಗುತ್ತಿರುವ ಅತಿಥಿಗಳ ಗುಂಪಿನಲ್ಲಿಯಾರೋ ಕೂಗಿ ಹೇಳುತ್ತಾರೆ. ಆ ದನಿಯಲ್ಲಿದ್ದ ಪ್ರೀತಿ ಉತ್ಸಾಹಗಳನ್ನು ನಾನು ಸವಿಯುತ್ತೇನೆ. ಬಹುಕಾಲದಿಂದ ಮರೆತು ಹೋಗಿದ್ದ ದೃಶ್ಯಗಳು ಜೀವತಾಳಿ ನೆನಪಿನ ಅಂಗಳದಲ್ಲಿ ಕಾಣತೊಡಗುತ್ತವೆ.

ಈ ಹುಟ್ಟುಹಬ್ಬದ ಅತ್ಯಂತ ಸುಂದರ ಉಡುಗೊರೆಯನ್ನು ನನ್ನಿಬ್ಬರು ಹೆಣ್ಣುಮಕ್ಕಳು ಕೊಟ್ಟಿದ್ದಾರೆ: ತಾಯಿ-ಮಕ್ಕಳ ಸಂಬಂಧದ ವಿವಿಧ ಹಂತಗಳನ್ನು ಜ್ಞಾಪಕಕ್ಕೆ ತರುವ ಭಾವಚಿತ್ರಗಳನ್ನು ಸಂಗ್ರಹಿಸಿ ತಯಾರಿಸಿದ ಒಂದು 'ಫೋಟೋ ಆಲ್ಬಂ' ಪ್ರತಿ ಭಾವಚಿತ್ರದ ಮೇಲೂ ಆ ಚಿತ್ರವು ಅವರಿಗೆ ತರುವ ನೆನಪುಗಳ ಒಂದು ತಲೆಬರಹವಿದೆ. ಇದನ್ನು ನೋಡಿ ನನ್ನ ಮನ ದ್ರವಿಸಿದೆ.

ಸಂಜೆ , ಹೂವು ಉಡುಗೊರೆಗಳ ರಾಶಿಯಲ್ಲಿ ಮುಳುಗಿರುವ ನನಗೆ ಈ ದಿನವು ಏಕೆ ಇಷ್ಟು ವಿಶೇಷವೆಂಬುದರ ಅರಿವಾಗಿದೆ. ಆ 'ಫೋಟೋಆಲ್ಬಂ' ಅನ್ನು ನಾನು ೩೦ರಲ್ಲಾಗಲಿ, ೪೦ರಲ್ಲಾಗಲಿ ಉಡುಗೊರೆ ಯಾಗಿ ಪಡೆಯಲಾಗುತ್ತಿರಲಿಲ್ಲ, ಕನಿಷ್ಠ ೫೦ ವರ್ಷವಾದರೂ ಆಗಿರಲೇಬೇಕು. ಎಂದೇ ಐವತ್ತನ್ನು ಮುಟ್ಟುವುದು ಜೀವನದ 'ಸುಗ್ಗಿ', ಜೀವನಕ್ಕೆ ಕೃತಜ್ಞತೆ ಯನ್ನು ಸಲ್ಲಿಸಲೊಂದು ವಿಶೇಷ ಘಳಿಗೆ ನಮ್ಮೆಲ್ಲ ಪರಿಶ್ರಮದ ಪ್ರತಿಫಲವನ್ನು, ಜೀವ ನವು ನಮಗೇನು ಕೊಟ್ಟಿದೆ ಎಂಬುದನ್ನು- ಹೋರಾಟ, ದ್ವಂದ್ವ, ಸಂತೋಷ, ದುಃಖ- ಎಲ್ಲವನ್ನೂ ಸಂಪೂರ್ಣವಾಗಿ, ಹತ್ತಿರದಿಂದ ನೋಡಬಹುದಾದ ಘಳಿಗೆ.

ಜೀವನದಲ್ಲಿ ಮೊದಲಬಾರಿ ನನಗೆ ಒಂದುವರ್ಷ ದೊಡ್ಡವಳಾಗುವುದಕ್ಕೆ ಬೇಜಾರಾಗಲಿಲ್ಲ. ಐವತ್ತು! ಉಂಟೆ ಇದಕ್ಕೆ ಕಿಮ್ಮತ್ತು? ಇಷ್ಟು ವರ್ಷ ಬದುಕಿ ಬಾಳಿರುವುದೇ ಗಮ್ಮತ್ತು.

# ನಿಮ್ಮ ಮಗುವಿಗೆ ಯಾವಾಗಲೂ ಹೊಗಳಿಕೆ ಬೇಕೆ?

**ಗಂಗಾ ಬಿ. ರಾಜಪುರೋಹಿತ**
೧೨ನೇ ಮುಖ್ಯ ರಸ್ತೆ, ಸರಸ್ವತೀಪುರ,
ಮೈಸೂರು-೫೭೦ ೦೦೯

ತಮ್ಮ ಬಗ್ಗೆ ತನಗೇ ಆತ್ಮವಿಶ್ವಾಸ ಇಲ್ಲದಿರುವುದು ಇಂದಿನ ಮಕ್ಕಳಲ್ಲಿ ಸರ್ವೇಸಾಮಾನ್ಯವಾಗಿದೆ. ಇದನ್ನು 'ಭಾವನೆಗಳಿಗೆ ಬಡಿದ ಜೀವಸತ್ವ ಕೊರತೆ' ಅನ್ನಬಹುದು. ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳುವ ವಿಧಾನವನ್ನು ಕುರಿತು ಅನೇಕ ಲೇಖನಗಳು, ಪುಸ್ತಕಗಳು ಪ್ರಕಟವಾಗಿವೆ. ನಮ್ಮ ದೇಶದ ಮಕ್ಕಳಂತೂ ಭಾವನೆಗಳ ಬಲಹೀನತೆಯಿಂದಾಗಿ ಬಳಲುತ್ತಿದ್ದಾರೆ. ಇದರಿಂದಾಗಿ ಅವರು ತಂದೆ ತಾಯಿಗಳಿಂದ ಯಾವಾಗಲೂ ಹೊಗಳಿಕೆಯನ್ನು ಬಯಸುತ್ತಾರೆ. ತಮ್ಮಲ್ಲೇ ತಮಗೆ ಆತ್ಮವಿಶ್ವಾಸ ಇಲ್ಲದಿರುವದರಿಂದ ತಮ್ಮ ಸಾಧನೆಯನ್ನು ಇನ್ನೊಬ್ಬರು ಗುರುತಿಸಬೇಕೆಂದು ನಿರೀಕ್ಷಿಸುತ್ತಾರೆ. ತಂದೆ ತಾಯಿಗಳು 'ನೀನಿನ್ನೂ ಸುಧಾರಿಸಬೇಕು, ನಿನ್ನ ಪ್ರಗತಿ ನಿರೀಕ್ಷಿತ ಮಟ್ಟದಲ್ಲಿ ಇಲ್ಲ' ಎಂದು ಯಾವಾಗಲೂ ಅನ್ನುತ್ತಿದ್ದರೆ ಮಗುವಿನ ಮನಸ್ಸಿನ ಮೇಲೆ ಒಂದು ರೀತಿಯ ಒತ್ತಡ ಉಂಟಾಗುತ್ತದೆ. ಅದರಿಂದಾಗಿ ಮಗುವಿಗೆ ನರಗಳ ದೌರ್ಬಲ್ಯ ಉಂಟಾಗಬಹುದು. ಇದಕ್ಕೆ ಪುಷ್ಟಿ ಕೊಡುವಂತೆ ಶಾಲೆಯಲ್ಲಿ ಕಡಿಮೆ ಅಂಕಗಳು ಬಂದರಂತೂ ನರಗಳ ಆ ದೌರ್ಬಲ್ಯ ಖಂಡಿತವಾಗಿಯೂ ದುಷ್ಪರಿಣಾಮ ಉಂಟುಮಾಡುತ್ತದೆ. ಇದರಿಂದ ಮಗು ಸಿಡುಕನಾಗಬಹುದು ಅಥವಾ ಮಾತಾಡುವಾಗ ಉಗ್ಗು ಉಂಟಾಗಬಹುದು. ಮಗು ಒಂದು ಚಿತ್ರ ಬರೆಯಿತು ಎಂದು ಇಟ್ಟುಕೊಳ್ಳಿ, ಅದನ್ನು ಅತಿಯಾಗಿ ಹೊಗಳಿ ಹೊಗಳಿ ಇಡುವುದರಿಂದ ಆ ಮಗು 'ಈ ಜಗತ್ತಿನಲ್ಲಿ ತನ್ನಂಥವರೇ ಇಲ್ಲ' ಎಂದು ತಿಳಿದುಕೊಂಡುಬಿಡುತ್ತದೆ. ತನ್ನನ್ನು ಎಲ್ಲರೂ ಯಾವಾಗಲೂ ಹೊಗಳುತ್ತಲೇ ಇರಬೇಕೆಂದು ನಿರೀಕ್ಷೆ ಮಾಡುತ್ತದೆ. ಅದು ಸಿಗದೇ ಇದ್ದಾಗ ಅದಕ್ಕೆ ಖೇದವಾಗುತ್ತದೆ. ಇಂಥ ಸಮಸ್ಯೆಗಳು ಬಂದಾಗ ಪಾಶ್ಚಾತ್ಯ ದೇಶಗಳಲ್ಲಿ 'ಕೌಟುಂಬಿಕ ಸಲಹಾ ಕೇಂದ್ರ'ಗಳಿವೆ. ಅಲ್ಲಿ ಮನಶ್ಶಾಸ್ತ್ರಜ್ಞರು ತಪ್ಪು ತಂದೆ ತಾಯಿಗಳಿಂದ ಆಗುತ್ತಿದೆಯೋ, ಮಕ್ಕಳಿಂದ ಆಗುತ್ತಿದೆಯೋ ಎಂದು ಪರೀಕ್ಷಿಸಿ ಯುಕ್ತ ಸಲಹೆ ನೀಡುತ್ತಾರೆ. ನಮ್ಮ ದೇಶದಲ್ಲಿ ಅಂಥ ಸಲಹಾ ಕೇಂದ್ರಗಳು ಇಲ್ಲದೆ ಇರುವುದರಿಂದ ತಂದೆ ತಾಯಿಗಳ ಮೇಲೆ ಮಕ್ಕಳನ್ನು ಬೆಳೆಸುವ ಹೆಚ್ಚಿನ ಜವಾಬ್ದಾರಿ ಇದೆ.

ಮಕ್ಕಳನ್ನು ಸದಾ ಬಯ್ಯುವುದಕ್ಕಿಂತ ಅವರು ಮಾಡಿದ ಒಂದು ಒಳ್ಳೆಯ ಕೆಲಸದ ಬಗ್ಗೆ ಮೆಚ್ಚಿಗೆ ವ್ಯಕ್ತಪಡಿಸಿ, ಅವರ ತಪ್ಪನ್ನು ತಿಳಿಸಿಕೊಟ್ಟಾಗ ಮಕ್ಕಳ ಮನಸ್ಸಿನ ಮೇಲೆ ಆಗುವ ದುಷ್ಪರಿಣಾಮ ತಪ್ಪುತ್ತದೆ ಇಂಥ ಒಂದು ಸಲಹಾ ಕೇಂದ್ರದಲ್ಲಿ ಮೈಕ್ ಎನ್ನುವ ಹುಡುಗನ ಕೇಸನ್ನು ಅಧ್ಯಯನ ಮಾಡಿ ಅವನನ್ನು ಹೊಗಳುವುದರಿಂದ 'ಸಿ' ಗ್ರೇಡಿನಿಂದ 'ಬಿ' ಗ್ರೇಡಿಗೆ ಅವನ ಪ್ರಗತಿ ಆಯಿತಂತೆ. ಆದರೆ ಬರೀ ಹೊಗಳಿಕೆಗಳನ್ನೇ ಪೇರಿಸಿಟ್ಟರೂ ಪ್ರಯೋಜನವಾಗಲಿಲ್ಲ ಎಂದೂ ಗೊತ್ತಾಯಿತಂತೆ.

'ನೀನು ಒಳ್ಳೆಯ ಕಾಲೇಜಿಗೆ ಸೇರಿಕೊಳ್ಳಬೇಕು ಎಂದಿದ್ದರೆ ಚೆನ್ನಾಗಿ ಅಭ್ಯಾಸ ಮಾಡಬೇಕು' ಎಂದು ಹೇಳುವುದರಿಂದ ಯಾವ ಮಗುವಿನ ಮನಸ್ಸಿನ ಮೇಲೂ ಕೆಟ್ಟ ಪರಿಣಾಮ ಆಗಲಾರದು. ಆದರೆ 'ನಿನ್ನ ಯೋಗ್ಯತೆಗೆ ಅಂಥ ಒಳ್ಳೆಯ ಕಾಲೇಜಿನಲ್ಲಿ ಸೀಟು ಹೇಗೆ ಸಿಕ್ಕೀತು ?' ಎಂದು ಬಯ್ಯುವು

ಈ ಲೇಖನ ಏಪ್ರಿಲ್ ೨೦೦೧ರ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಪಾಲ್ ಕ್ರೋಪ್ ರವರ 'ಈಸ್ ಯುವರ್ ಚೈಲ್ಡ್ ಅಡಿಕ್ಟೆಡ್ ಟು ಪ್ರೈಸ್?' ಎಂಬುದರ ಭಾವಾನುವಾದ

ದರಿಂದ ಮಗು ಮಾಡುವಷ್ಟು ಪ್ರಯತ್ನವನ್ನು ಕೂಡ ಮಾಡದೇ ಹೋಗುತ್ತದೆ. ಹಾಗಂತ 'ನಿನಗೇನು ಯಾವ ಕಾಲೇಜಿನಲ್ಲಿ ಬೇಕಾದರೂ ಸೀಟು ಸಿಗುತ್ತದೆ. ನಿನಗೇನು ಕಡಿಮೆ? ಎಂದು ಅತೀವ ಹೊಗಳುವುದರಿಂದ ಅವನಿಗೆ ತನ್ನ ಯೋಗ್ಯತೆಗೆ ಮೀರಿದ ನಿರೀಕ್ಷಣೆಗಳು ಉಂಟಾಗುತ್ತವೆ. ಜೀವನದಲ್ಲಿ ನಿರಾಶೆ ಉಂಟಾದಾಗ ಅದನ್ನು ಎದುರಿಸುವ ಮಾನಸಿಕ ಸ್ಥಿರತೆ ಹೋಗಿಬಿಡುತ್ತದೆ. ಮಗು ತನ್ನನ್ನು ಹೊಗಳಿದಾಗ ಹಿಗ್ಗದೇ ತೆಗಳಿದಾಗ ಕುಗ್ಗದೇ ತನ್ನತನವನ್ನು ಉಳಿಸಿಕೊಳ್ಳುವ ಯೋಗ್ಯತೆಯನ್ನು ಬೆಳೆಸಿಕೊಳ್ಳಬೇಕು. ಇಂಥ ಒಂದು ವ್ಯಕ್ತಿತ್ವ ಬೆಳೆದು ಬರಲು ಅಜ್ಜಿ ಹೇಳುವ ಕಥೆಗಳಲ್ಲಿ ಮತ್ತು ಪುರಾಣ ಪುಣ್ಯ ಕಥೆಗಳಲ್ಲಿ ಬರುವ ಆದರ್ಶ ವ್ಯಕ್ತಿಗಳ ನಡವಳಿಕೆಗಳು ಸಹಾಯ ಮಾಡುತ್ತಿದ್ದುವು. ಆದರೆ ಈಗ ಅಜ್ಜಿ ಕಥೆಗಳೂ ಇಲ್ಲ; ಪುರಾಣ ಪುರುಷರ ಚರಿತ್ರೆಯನ್ನು ಓದುವ ಪ್ರವೃತ್ತಿಯೂ ಇಲ್ಲ. ಇದರ ಪರಿಣಾಮವಾಗಿ ಇಂದಿನ ಮಕ್ಕಳನ್ನು ಯೋಗ್ಯ ವ್ಯಕ್ತಿಗಳನ್ನಾಗಿ ಮಾಡುವುದು ಕಷ್ಟದ ಕೆಲಸವಾಗಿದೆ.

ಇಂದಿನ ಸಮಾಜದಲ್ಲಿ ಮಕ್ಕಳಿಗೆ ಹೊರಜಗತ್ತಿನ ಸಂಪರ್ಕ ಬರುವುದೇ ಸ್ಕೂಲಿನಲ್ಲಿ. ಮಕ್ಕಳನ್ನು ಬೆಳೆಸುವಲ್ಲಿ ತಂದೆ ತಾಯಿಯರ ಜವಾಬ್ದಾರಿ ಎಷ್ಟು ಇರುತ್ತದೆಯೋ ಅಷ್ಟೇ ಅಥವಾ ಅದಕ್ಕಿಂತ ಹೆಚ್ಚು ಜವಾಬ್ದಾರಿ ಶಿಕ್ಷಕರ ಮೇಲಿದೆ. ಒಂದು ಮಗು ಪರೀಕ್ಷೆಯಲ್ಲಿ ಪಾಸಾಗದಿದ್ದರೂ ಅವನನ್ನು ಕಡೆಗಣಿಸದೇ ನೀನಿನ್ನೂ ಪ್ರಯತ್ನವನ್ನೂ ಮಾಡಬಹುದು. ಮಕ್ಕಳು ತಮ್ಮ ಕೆಲಸವನ್ನು ತಾವೇ ಮಾಡಬಲ್ಲೆವು ಎಂಬ ಧೈರ್ಯ, ಮಾಡಿಯೇ ತೀರುತ್ತೇನೆ ಎಂಬ ಛಲ, ನಾನು ಮಾಡಿದ್ದರ ಮೌಲ್ಯ ಎಷ್ಟು ಎನ್ನುವ ತಿಳುವಳಿಕೆ ಇವನ್ನು ಸಾಧಿಸುವುದು ಸಾಮಾನ್ಯವಾದ ಮಾತಲ್ಲ. ಈ ದಿಶೆಯಲ್ಲಿ ಮೂರು ಸಲಹೆಗಳನ್ನು ಕೊಡಬಹುದು:

*ಮಕ್ಕಳು ಏನು ಮಾಡುತ್ತಾರೆ ಎಂಬುದನ್ನು ಗಮನಿಸಿ. ಅವರು ಏನು ಮಾತಾಡುತ್ತಾರೆ ಎಂಬುದನ್ನು ಕೇಳಿ. ಅವರು ಮಾಡಿದಕ್ಕೆಲ್ಲ ಮಾತಾಡಿದ್ದಕ್ಕೆಲ್ಲ ನೀವು ಒಪ್ಪಲೇಬೇಕು ಎಂದೇನಿಲ್ಲ.

*ಮಗುವಿನ ಯೋಗ್ಯತೆಗೆ ಅನುಸಾರವಾಗಿ ಅವನಿಗೆ ಕೆಲಸ ಕೊಡಿ. ಅವನು ಅದನ್ನು ಮಾಡಿ ಮುಗಿಸಿದಾಗ ಅವನಿಗೆ ಧೈರ್ಯ ಬರುತ್ತದೆ.

*ಮಗು ತಾನು ಯಾವುದೇ ಕೆಲಸ ಮಾಡಿ ಮುಗಿಸಿದಾಗ ಬರುವ ಧೈರ್ಯ ಮತ್ತು ಆತ್ಮತೃಪ್ತಿ ಬರೀ ಹೊಗಳಿಕೆಯಿಂದ ಸಿಗಲಾರದು.

ತಂದೆ ತಾಯಿ, ಶಿಕ್ಷಕರು ಮತ್ತು ಸುತ್ತಲಿನವರು ಮಗುವನ್ನು ಬರೀ ಹೊಗಳುವುದರಿಂದ ಅವನ ಬೆಳವಣಿಗೆ ಆಗುವುದಿಲ್ಲ. ಯಾವ ಮಗು ಆತ್ಮವಿಶ್ವಾಸದಿಂದ ಮುನ್ನಡೆಯುತ್ತದೆಯೋ ಅಂಥ ಮಗು ಒಂದೆರಡು ತೆಗಳಿಕೆಯ ಮಾತುಗಳಿಂದ ಕುಗ್ಗಿ ಹೋಗುವುದಿಲ್ಲ

ಮಗುವಿನ ಆತ್ಮವಿಶ್ವಾಸವನ್ನು ಬೆಳೆಸುವ ಪಂಚ ಸೂತ್ರಗಳು:

೧. ನೀವು ಮಾಡುವ ಪ್ರತಿಯೊಂದು ಕೆಲಸದಲ್ಲೂ ನಿಮ್ಮ ಮಗುವನ್ನು ಸಕ್ರಿಯವಾಗಿ ತೊಡಗಿಸಿ.

೨. ಮಗುವಿನ ಅಡೆತಡೆಗಳನ್ನು ಎದುರಿಸುವ ಕಲೆಯನ್ನು ಕಲಿಸಿ. ಹೊರೆಯಾಗಲಾರದಂತಹ ಕಲೆಯನ್ನು ಕಲಿಸಿ.

೩. ಮಗುವಿಗೆ ಕೊಟ್ಟ ಕೆಲಸ ಕೈಮೀರಿ ಹೋಗುತ್ತಿದೆ ಎಂದಾಗ ಮಾತ್ರ ನೀವು ಸಹಾಯ ಮಾಡಿ.

೪. ಮಗುವಿಗೆ ಶಾಲೆಯಲ್ಲಿ ಅಥವಾ ಮನೆಯಲ್ಲಿ ಅಷ್ಟೇ ಅಲ್ಲದೇ ಇನ್ನೂ ಬೇಕಾದಷ್ಟು ಕಡೆ ಸಮಸ್ಯೆಗಳನ್ನು ಎದುರಿಸುವ ಪ್ರಸಂಗಗಳು ಬರುತ್ತವೆ ಎಂಬುದನ್ನು ಕಲಿಸಿ.

೫. ಮಗುವಿನ ಸಾಧನೆಯನ್ನು ನೋಡಿ ಅದರ ಬಗ್ಗೆ ಯುಕ್ತ ಪ್ರಮಾಣದಲ್ಲಿ ಮೆಚ್ಚುಗೆ ವ್ಯಕ್ತಪಡಿಸಿ.

# ಕಪ್ಪು ಕಾಫಿ

**ಮಾಲಾ**
ಮನೆಸಂಖ್ಯೆ ೮ 'ಅತ್ರಿ' ಕಾಮಾಕ್ಷಿ-
ಆಸ್ಪತ್ರೆ ರಸ್ತೆ, ಸರಸ್ವತೀಪುರ
ಮೈಸೂರು-೫೭೦ ೦೦೯

ರಾತ್ರಿ ಕಪ್ಪು ಕಾಫಿ ಹೀರಿದರೆ ನಿದ್ದೆ ಬರುವುದಿಲ್ಲ ಎಂಬ ಕುಖ್ಯಾತಿ ಇದೆ. ಆದರೆ ರಾತ್ರಿ ಕಪ್ಪು ಕಾಫಿ ಹೀರುವುದರಿಂದಲೂ ಲಾಭ ಇದೆ ಎಂದರೆ ನೀವು ನಂಬುತ್ತೀರ? ನಾನಂತು ಒಪ್ಪಿಕೊಂಡಿದ್ದೇನೆ. ಗಣಿತ ಧೀಮಂತ ಪ್ಯಾಸ್ಕಾಲ್ ಅವರಿಗೆ ರಾತ್ರಿ ಕಪ್ಪು ಕಾಫಿ ಕುಡಿದಿದ್ದರಿಂದ ರಾತ್ರಿ ಇಡೀ ನಿದ್ದೆ ಬರದೆ ಅದರಿಂದ ತುಂಬ ಪ್ರಯೋಜನ ಆಗಿದೆಯಂತೆ. ಏನು ಪ್ರಯೋಜನ ಆಗಿದೆಯೆಂದು ಮುಂದೆ ತಿಳಿಸುತ್ತೇನೆ.

''ನಿಮ್ಮಲ್ಲಿ ಕಾಫಿ ಮೇಕರ್ ಡೆಮೋನ್ಸ್ಟ್ರೇಷನ್ ಮಾಡಿ ತೋರಿಸಲು ಎಷ್ಟು ಹೊತ್ತಿಗೆ ಬಂದರೆ ಎಲ್ಲರೂ ಇರುತ್ತಾರೆ?'' ಎಂದು ಒಂದು ಸಂಜೆ ಕಾಫಿ ಮೇಕರ್ ಮಾರಾಟಗಾರರ ಪ್ರತಿನಿಧಿ ದೂರವಾಣಿ ಮೂಲಕ ಕೇಳಿದರು.

''ಬೆಳಿಗ್ಗೆ ಎಂಟುಗಂಟೆಗೆ ಬಂದರೆ ಎಲ್ಲರೂ ಮನೆಯಲ್ಲಿರುತ್ತಾರೆ'' ಎಂದು ಉತ್ತರ ಕೊಟ್ಟೆ.

ಅದೇ ದಿನ ರಾತ್ರಿ ೮ ಗಂಟೆಗೆ ನಮ್ಮ ಮನೆಯ ಕರೆಗಂಟೆ ಶಬ್ದ ಮಾಡಿತು. ಅತ್ತೆ ಬಾಗಿಲು ತೆರೆದರು. ''ಹಲೋ ಮೇಡಂ'' ಎಂದು ನುಡಿದು ಹಸನ್ಮುಖ ಬೀರಿ ಒಬ್ಬ ಆಗಂತುಕರು ಒಳ ಬಂದರು. (ಯಾರು ಬಂದರೆಂದು ನೋಡಲು ನಾನೂ ಅತ್ತೆಯನ್ನು ಹಿಂಬಾಲಿಸಿದೆ.)

''ನಾನು ಸಂಜೆ ದೂರವಾಣಿಸಿದ್ದೆ. ಕಾಫಿ ಮೇಕರ್ ಡೆಮೊನ್ಸ್ಟ್ರೇಷನ್ ಮಾಡಲು ಬಂದೆ'' ಎಂದ ಆಗಂತುಕ.

ಮಾತು ಆಂಗ್ಲದಲ್ಲೇ. ಆಗ ನಮ್ಮ ಅತ್ತೆ ''ನಿಮಗೆ ಕನ್ನಡ ಬರುವುದಿಲ್ಲವೇ? ಎಂದು ವಿನಯವಾಗಿ ಕೇಳಿಯೇ ಬಿಟ್ಟರು. (ನಾನೂ ಕೇಳೋಣವೆಂದು ಬಾಯಿ ತೆರೆದಿದ್ದೆ.) ಪ್ರತಿನಿಧಿ ಕನ್ನಡ ಮಾತಾಡಲು ಬರುತ್ತದೆ ಎಂದು ಹೇಳಿದ್ದು ಕೇಳಿ ನಾವು ಇನ್ನೂ ಕರ್ನಾಟಕದಲ್ಲೇ ಇದ್ದೇವೆ ಎಂದು ಖಾತ್ರಿಯಾಯಿತು. ಮುಂದೆ ಅವರು ಆಂಗ್ಲದಲ್ಲಿ ಮಾತಾಡುವ ಸಾಹಸ ಮಾಡಲಿಲ್ಲ.

''ಇಷ್ಟು ಹೊತ್ತಿಗೆ ಬಂದಿದ್ದೀರಲ್ಲ? ಬೆಳಗ್ಗೆ ಎಂಟು ಗಂಟೆಗೆ ಬರಲು ಹೇಳಿದ್ದಲ್ಲವೇ ನಾನು'' ಎಂದು ಕೇಳಿದೆ.

''ಅಲ್ಲ ಮೇಡಂ, ನಾನು ಅಂದಿದ್ದು ರಾತ್ರಿ ಎಂಟು ಗಂಟೆಗೆ''.

ಸರಿ ಎಂದು ಕಾಫಿಮೇಕರ್ ಡೆಮೋನ್ಸ್ಟ್ರೇಷನ್ ಮಾಡಲು ಅನುವು ಮಾಡಿಕೊಟ್ಟೆವು. ಆಗ ಮನೆಯಲ್ಲಿ ಅತ್ತೆ, ನಾನು ಮತ್ತು ಮಗಳು ಮಾತ್ರ ಇದ್ದೆವು. ಕಾಫಿ ಮೇಕರ್‌ನಲ್ಲಿ ಎಲ್ಲಿ ಕಾಫಿಪುಡಿ ಹಾಕಬೇಕು, ಯಾವ ಕಡೆ ನೀರು ಹಾಕಬೇಕು ಇತ್ಯಾದಿ ತೋರಿಸಿದರು. ಕೇವಲ ಒಂದು ಚಮಚ ಪುಡಿ ಹಾಕಿದರು. ಕಾಫಿ ಡಿಕಾಕ್ಷನ್ ಐದು ನಿಮಿಷದಲ್ಲಿ ಬಂತು. ಆ ಯಂತ್ರ ವಿದ್ಯುತ್‌ನಿಂದ ನಡೆಯುವಂಥದ್ದು. ಆಗ ಎಲ್ಲಿಯಾದರೂ ವಿದ್ಯುತ್ ಕೈಕೊಟ್ಟರೆ ಮಾತ್ರ ವಿದ್ಯುತ್ ಬರುವವರೆಗೆ ಅದನ್ನು ನೋಡುತ್ತ ಜಪಮಾಡುತ್ತ ಕುಳಿತಿರಬೇಕಷ್ಟೇ!

''ಮೇಡೆಂ ಸ್ವಲ್ಪ ಹಾಲು ಬಿಸಿ ಮಾಡಿ ತನ್ನಿ'' ಎಂದರು ಪ್ರತಿನಿಧಿ.

ಅತ್ತೆ ಉತ್ಸಾಹದಿಂದ ಹಾಲು ಬಿಸಿಮಾಡಿ ತಂದುಕೊಟ್ಟರು. ಎಲ್ಲ ಡಿಕಾಕ್ಷನನ್ನೂ ಬಿಸಿ ಹಾಲಿಗೆ ಬೆರೆಸಿದರು. ಕಪ್ಪು ಕಾಫಿ ತಯಾರಾಯಿತು. (ಡಿಕಾಕ್ಷನ್ ಜಾಸ್ತಿ ಇದ್ದದ್ದರಿಂದ ಹಾಲು ಸಾಕಾಗಿರಲಿಲ್ಲ.) ಅತ್ತೆ ಸ್ವಲ್ಪ ಕಾಫಿ ಕುಡಿದು 'ಅದ್ಭುತ' ಎಂದರು. ಪ್ರತಿನಿಧಿಯೂ ಕುಡಿದರು. ಹೀಗೆ ಎಷ್ಟು ಮನೆಯಲ್ಲಿ ಎಷ್ಟು ಸಲ ಕುಡಿದಿದ್ದಾರೋ? ಪಾಪ ಅವರ ಹೊಟ್ಟೆಯಲ್ಲಿ ಬರೀ ಕಪ್ಪು ಕಾಫಿಯೇ ತುಂಬಿರಬಹುದು. ಆಗ ಆ ಹೊತ್ತಿನಲ್ಲಿ ಗಂಡ ಮತ್ತು ಮಾವನ ಆಗಮನವಾಯಿತು.

ಕಾಫಿ ತಯಾರಿಕಾ ಕೋಣೆಗೆ ಮಾವನನ್ನು ಬರಮಾಡಿ ''ಯಾರಿದ್ದಾರೆ ನೋಡಿ'' ಎಂದರು ಅತ್ತೆ.

ಯಾರೋ ನೆಂಟರಾಗಿರಬಹುದೆಂದು ಮಾವ ಗ್ರಹಿಸಿರಬೇಕು. ''ನಮಸ್ಕಾರ, ಯಾವಾಗ ಬಂದದ್ದು?'' ಎಂದು ಮೊದಲು ಅವರ ಕುಶಲ ವಿಚಾರಿಸಿ ''ನೀವು ಯಾರು ಎಂದು ಗೊತ್ತಾಗಲಿಲ್ಲ. ವಯಸ್ಸಾಯಿತು ನೋಡಿ, ಈಗ ನೆನಪಿಗೆ ಬರುವುದಿಲ್ಲ'' ಎಂದರು.

''ಇವರು ಕಾಫಿ ಮೇಕರ್, ಡೆಮೋನ್ಸ್ಟ್ರೇಷನ್ ಮಾಡಿ ತೋರಿಸಲು ಬಂದ ಪ್ರತಿನಿಧಿ'' ಎಂದು ಅತ್ತೆ ವಿವರಿಸಿದರು.

ಮಾವನಿಗೆ ಕಪ್ಪು ಕಾಫಿ ನೀಡಿದರು. 'ರಾತ್ರಿ ನಿದ್ದೆ ಬರುವುದಿಲ್ಲ' ಎಂದು ಕಾಫಿ ಕುಡಿಯಲು ನಿರಾಕರಿಸಿದರು.

''ಸ್ವಲ್ಪ ಕುಡಿದು ನೋಡಿ ರುಚಿ ಹೇಗಿದೆ ಹೇಳಿ''

ಎಂದು ಅತ್ತೆ ಒತ್ತಾಯಿಸಿದರು.

ಮಾವ ಕಪ್ಪು ಕಾಫಿ ಧೈರ್ಯ ಮಾಡಿ ಕುಡಿದೇ ಬಿಟ್ಟರು. ಹಾಗೆಯೇ ಒತ್ತಾಯ ಜಾಸ್ತಿ ಆದಾಗ ನನ್ನ ಗಂಡನೂ ಇನ್ನು ಕುಡಿಯದೆ ಗತ್ಯಂತರವಿಲ್ಲ ಎಂದು ಹರಳೆಣ್ಣೆ ಕುಡಿಯುವಾಗ ಮುಖ ಮಾಡಿದಂತೆ ಮಾಡಿ ಕುಡಿದರು.

ಕಾಫಿ ಡೆಮೋನ್ಸ್ಟ್ರೇಷನ್ ಮಾಡುವ ಮೊದಲೇ ನಾವು ಅದರ ಬೆಲೆ ಎಷ್ಟೆಂದು ವಿಚಾರಿಸಿದಾಗ "ಬೆಲೆ ಏನೂ ಜಾಸ್ತಿ ಇಲ್ಲ. ನೀವು ಮೊದಲು ನೋಡಿ" ಎಂದು ಪ್ರತಿನಿಧಿ ನಯವಾಗಿ ನುಡಿದರು. ಕಾಫಿ ತಯಾರಿಸಿದ ಮೇಲೆ ಅದರ ಬೆಲೆ ಎಷ್ಟು ಎಂದು ಕೇಳಿದೆ.

"ರೂಪಾಯಿ ಒಂದು ಸಾವಿರ ಅಷ್ಟೆ. ಹೆಚ್ಚೇನೂ ಇಲ್ಲ" ಎಂದರು ಮುಗುಳು ನಗೆಯಿಂದ.

"ಓ ! ಅಷ್ಟಿದೆಯಾ, ಒಂದು ಐನೂರು ಇರಬಹುದು ಎಂದು ನಾನು ಆಲೋಚಿಸಿದ್ದೆ" ಎಂದೆ ಉದರಿಸಿ.

"ಓಹ್ ! ಅಷ್ಟೊಂದಾ ? ನಾನು ಇನ್ನೂರು ಇರಬಹುದು ಎಂದು ಲೆಕ್ಕ ಹಾಕಿದ್ದೆ" ಎಂದು ಅತ್ತೆಯ ಉವಾಚ.

"ಏನು ಮೇಡಂ, ಇನ್ನೂರು ರೂಪಾಯಿಯಾ? ಈಗ ಒಂದು ಹೋಟೇಲಿಗೆ ಹೋದರೆ ಊಟಕ್ಕೆ ಅದರಿಂದ ಹೆಚ್ಚು ಕೊಡಬೇಕು" ಎಂದು ಪ್ರತಿನಿಧಿಯ ಅಂಬೋಣ.

ಅಂತು ಇಂತು ನಮ್ಮೊಳಗೆ ವಾದವಿವಾದ ನಡೆದು ಕಾಫಿ ಮೇಕರ್ ಈಗ ತೆಗೆಯುವುದು ಬೇಡ ಎಂಬ ತೀರ್ಮಾನಕ್ಕೆ ಬಂದು, ಮುಂದೆ ಬೇಕಾದರೆ ಇರಲಿ ಎಂದು ಪ್ರತಿನಿಧಿಯಿಂದ ಅಂಗಡಿ ವಿಳಾಸ ಪಡೆದು ಅವರನ್ನು ಬರಿಗೈಯಿಂದ ಕಳುಹಿಸಿಕೊಟ್ಟೆವು.

ಈಗ ಪ್ವಾನ್ ಕ್ಯಾರೇ ಅವರಿಗೆ ರಾತ್ರಿ ಕಪ್ಪು ಕಾಫಿ ಹೀರಿದ್ದರಿಂದ ನಿದ್ದೆ ನಾಶವಾಗಿ ಏನು ಲಾಭವಾಯಿತು ಎಂದು ತಿಳಿಯೋಣ. ಸಂಕೀರ್ಣ ಜಾಲದಲ್ಲಿ ಹುದುಗಿರುವ ಪ್ರರೂಪ ಶೋಧನೆ ಬಗ್ಗೆ ಗಣಿತ ಧೀಮಂತ ಪ್ವಾನ್‌ಕ್ಯಾರೇ ತಮ್ಮ ಸ್ವಂತಾನುಭವವನ್ನು ಹೀಗೆ ವರ್ಣಿಸಿದ್ದಾರೆ: "ಈಚೆಗೆ ನಾನು ಅವುಗಳಿಗೆ ಫ್ಯೂಕಿಯನ್ ಫಲನಗಳು ಎಂಬ ಹೆಸರು ಕೊಟ್ಟಿದ್ದೇನೆ. ಹೀಗೆ ಹೆಸರಿಸುವ ಮೊದಲು ಸುಮಾರು ಹದಿನೈದು ದಿನ ಪರ್ಯಂತ, ಇವುಗಳಿಗೆ ಸದೃಶವಾಗುವ ಯಾವ ಫಲನವೂ ಇರಲಾರದೆಂದು ಸಾಧಿಸುವುದರಲ್ಲಿ ಉದ್ಯುಕ್ತನಾಗಿದ್ದೆ. ಆಗ ಈ ವಿಷಯ ಕುರಿತಂತೆ ನಾನು ಪೂರ್ಣ ಅಜ್ಞಾನಿ. ಪ್ರತಿದಿನವೂ ಮೇಜಿನ ಮುಂದೆ ಕುಳಿತು ಹಲವಾರು ನಮೂನೆ ಸಂಯೋಜನೆಗಳನ್ನು ಪ್ರಯತ್ನಿಸುತ್ತ ಒಂದೆರಡು ಗಂಟೆಗಳನ್ನು ವ್ಯಯಿಸುತ್ತಿದ್ದೆ. ಪರಿಣಾಮ: ನಿಷ್ಫಲ. ಒಂದು ರಾತ್ರಿ ನನ್ನ ರೀತಿಗೆ ವಿರುದ್ಧವಾಗಿ ಕಪ್ಪು ಕಾಫಿ ಹೀರಿದೆ. ಫಲಿತಾಂಶ : ನಿದ್ರಾನಾಶ. ಆಗ ತಲೆಯೊಳಗೆ ಭಾವನೆಗಳು ಮೊಗೆದು ಪುಂಖಾನು ಪುಂಖವಾಗಿ ಮುನ್ನುಗ್ಗಲು ತೊಡಗಿದುವು. ಒಂದು ಇನ್ನೊಂದನ್ನು ತಾಕುವುದು, ತಳ್ಳುವುದು ಕೊನೆಗೆ ಎರಡೂ ಒಂದಾಗುವುದು- ಇಂಥ ದೃಶ್ಯ ಕಾಣುತ್ತಿರುವೆನೋ ಎನ್ನಿಸಿತು. ಬೆಳಕು ಹರಿದಾಗ ನಾನು ಫ್ಯೂಕಿಯನ್ ಫಲನದಲ್ಲಿ ಒಂದು ವರ್ಗದ ಅಸ್ತಿತ್ವ ಸ್ಥಾಪಿಸಿದ್ದೆ".

ಮಾವ, ಅತ್ತೆ ಮತ್ತು ಗಂಡನಿಗೆ ಆ ರಾತ್ರಿ ಕಪ್ಪು ಕಾಫಿ ಕುಡಿದಿದ್ದರಿಂದ ನಿದ್ರೆ ನಾಶವಾಗಿ ಏನಾದರೂ ಅದ್ಭುತ ಆಲೋಚನೆಗಳು ಬಂದುವೇ ಎಂದು ನಾನು ಕೇಳಲಿಲ್ಲ. ಆದರೆ ನನ್ನ ಮಟ್ಟಿಗಂತೂ ಕಪ್ಪುಕಾಫಿ ಹೀರದೆ ಬರೀ ನೋಡಿದ್ದರಿಂದ ಮಾತ್ರವೇ ಈ ಲಘು ಹರಟೆ ಲೇಖನ ಬರೆಯಲು ಇಮ್ಮಡಿ ಉತ್ಸಾಹ ಮೂಡಿಸಿತು. ನೀವೂ ರಾತ್ರಿ ಕಪ್ಪುಕಾಫಿ ಕುಡಿದು ನಿದ್ದೆ ನಾಶವಾದಾಗ ಏನು ಅಭಿಪ್ರಾಯಗಳು ಹೊಳೆಯುತ್ತವೆ ಎಂದು ಪರೀಕ್ಷೆ ಮಾಡಿ ನೋಡಿ!

೧೯೩೦ರ ದಶಕದಲ್ಲಿ ನವೋದಯ ಕಾವ್ಯಪ್ರಕಾರ ಆರಂಭವಾದಾಗ ಆ ಕವಿಗಳು ಆಯುತ್ತಿದ್ದ, ಸನಾತನಿಗಳ ದೃಷ್ಟಿಯಲ್ಲಿ "ಕ್ಷುದ್ರ", ವಸ್ತುಗಳನ್ನು ಕುರಿತು ಒಬ್ಬ ಕು-ಕವಿ ಬರೆದ ಮೊದಲ ಮೂರು ಸಾಲುಗಳು ಕಾಫಿಯನ್ನು ಕುರಿತೇ ಇವೆ (ಭಾಮಿನೀ ಷಟ್ಪದಿ ಛಂದಸ್ಸು: "ಕಾಫಿಯನು ಕುಡಿದಾರ್ಭಟಿಸು ತಲಿ। ಚಾಪೆಯನು ತರಹೇಳಿ ಮಲಗುತ। ಕೋಪದಿಂ ಕೈಕಾಲು ಬಡಿದನು ಭೂಪ ಕೇಳೆಂದಾ।"

ಹೆನ್ರೀ ಪ್ವಾನ್‌ಕ್ಯಾರೇ (೧೮೫೪- ೧೯೧೨) ಎಂಬ ಗಣಿತ ಪ್ರಭೃತಿ ಬಗ್ಗೆ ಉಲ್ಲೇಖನ ಮೇಲಿನ ಲೇಖನದಲ್ಲದೆ. ಪಾಲ್ ಎರ್ಡಿಶ್ (೧೯೧೩-೯೬) ಎಂಬ ಇನ್ನೊಬ್ಬ ಪವಾಡ ಪುರುಷನ ಕತೆ ಓದಿ. ಈತ ಪ್ರತಿದಿನವೂ ಸರಾಸರಿಯಲ್ಲಿ ೧೯ ತಾಸುಗಳಷ್ಟು ಹೊತ್ತು ಗಣಿತ ಕ್ರಿಯೆಗಳಲ್ಲಿಯೇ ಮಗ್ನನಾಗಿರುತ್ತಿದ್ದ. ಈ ಗಣಿತ ಗಗನ ನೌಕಾವಿಹಾರಿಯ ಒಡಲಿಗೆ ಇಂಧನ, ಪ್ರಧಾನವಾಗಿ, ಕಾಫಿ- ಕೆಫೀನ್- ಎಂಫೆಟಮಿನ್ ಎಂಬ ಮಾದಕ ಮದ್ದು ಸಮುಚ್ಚಯ; ಕಾಫಿ, ಉಲ್ಲಾಸದಾಯಕ; ಕೆಫೀನ್: ವೇದನೆಹಾರಕ, ಎಂಫೆಟಮಿನ್: ಆಯಾಸನಿವಾರಕ. ಎಂದೇ ಇವರ ಅನುಭವವಾಣಿ: "ಗಣಿತಜ್ಞ ಎಂದರೆ ಕಾಫಿಯನ್ನು ಪ್ರಮೇಯಗಳಾಗಿ ಪರಿವರ್ತಿಸುವ ಯಂತ್ರ!"

# ಚುಚ್ಚುಮಾತುಗಳ ಸುಳಿಯಲ್ಲಿ

**ಜಯಂತಿ ಅಮೃತೇಶ್**
೪೦, ಕೃತ್ತಿಕಾ, ೬ ನೇ ಮೇನ್
೨ ನೇ ಕ್ರಾಸ್ ಸರಸ್ವತಿಪುರ
ಮೈಸೂರು—೫೭೦ ೦೦೯

"ನೀನು ಅಪ್ರಯೋಜಕ"

"ದೇವರೇ ಅದೆಷ್ಟು ಒಳ್ಳೆಯ ಉಡುಪು ಇದು! ಆದರೆ ಇದು ನಿನ್ನ ಅಳತೆಯದಲ್ಲ"

"ನಿನ್ನ ಮಗಳಿಗೆ ಕೆಲಸ ಸಿಕ್ಕಿತೆಂದು ತಿಳಿಯಿತು; ನಿನ್ನ ಯಜಮಾನರೇ ಏರ್ಪಾಡು ಮಾಡಿರಬಹುದು?"

"ವೃಥಾ ಏತಕ್ಕೆ ಪಿಯಾನೋ ಅಭ್ಯಾಸ ಮಾಡುತ್ತೀಯ? ನಿನಗೆ ನಿನ್ನ ತಾಯಿಯಂತೆ ಖಂಡಿತಾ ನುಡಿಸಲು ಆಗಲಾರದು"

"ಓಹೋ ಬಹಳ ಸುಂದರವಾಗಿ ಕಾಣಿಸುತ್ತಿದ್ದೀಯ. ಪ್ಲಾಸ್ಟಿಕ್ ಸರ್ಜರಿ ಮಾಡಿಸಿಕೊಂಡಿರುವೆ ಏನು ?"

ಈ ರೀತಿಯ ಮಾತುಗಳೆಂಬ ಶೂಲವು ನಮ್ಮನ್ನು ಪ್ರತಿದಿನವೂ ಚುಚ್ಚುತ್ತಿರುತ್ತದೆ............ಅದೂ ಅನಿರೀಕ್ಷಿತವಾಗಿ. ಈ ಚುಚ್ಚುಮಾತುಗಳು ಸರ್ವಾಂತರ್ಯಾಮಿಗಳು ಅಂದರೆ ಕಛೇರಿಯ ಕೆಲಸ ಮುಗಿದು ಜನರು ಬೇಸತ್ತು ಹೊರಗಡೆ ಬಂದಾಗ; ಸಾಲಿನಲ್ಲಿ ಕ್ಯೂ ನಿಂತು ಎಲ್ಲರ ಸಹನೆಯ ಕಟ್ಟೆ ಒಡೆದಾಗ; ಕಛೇರಿಯೊಳಗಡೆ ಮತ್ತು ಔತಣಕೂಟದ ಸಮಾರಂಭಗಳಲ್ಲಿ ಜನರು ನಯವಾಗಿ ಮಾತನಾಡಬಹುದು ಎಂದು ಅಂದುಕೊಂಡಾಗ.

ಪಟ್ಟಿ ಮಾಡಲು ಸಾಧ್ಯವಾಗದಂತಹ ಅನೇಕ ಬಗೆಯ ಆಕ್ಷೇಪಣೆಗಳಿವೆ. ಅತಿ ಸಾಮಾನ್ಯವಾದದ್ದೆಂದರೆ—"ಅಭಿನಂದನೆಗಳು; ಕೊನೆಗೂ ಸಾಧಿಸಿಯೇ ಬಿಟ್ಟೆಯಲ್ಲ?" ಕೆಲವು ಮಾತುಗಳು ತಲೆಸುತ್ತು ಬರಿಸಿ ಬೇಜಾರು ತರಿಸುವಷ್ಟು ನೋವುಂಟು ಮಾಡುತ್ತವೆ—ಒರಟಾಗಿರುತ್ತವೆ. ಅವು ದಪ್ಪ ಮೈಯವಳಿಗೆ: "ನೀನು ಇಷ್ಟು ಕೃಶಳಾಗಿರಲು ಮಾಡುತ್ತಿರುವುದೇನು? ಅತ್ಯುತ್ತಮವಾದದ್ದನ್ನೇ ಮಾಡುತ್ತಿದ್ದೀಯ, ಊಟ!"

ಕೆಲವು ವ್ಯಾಖ್ಯಾನಗಳು ನಾವು ನಂಬಲಾರದಷ್ಟು ಮನಸ್ಸಿಗೆ ನೋವುಂಟು ಮಾಡುತ್ತವೆ. ಒಬ್ಬ ವ್ಯಕ್ತಿ ತನ್ನ ಪತ್ನಿ ತನ್ನನ್ನು ಬಿಟ್ಟು ಹೊರಟುಹೋದ ದುಃಖದ ವಿಷಯವನ್ನು ಸಕಲ ಧೈರ್ಯವನ್ನೂ ಒಟ್ಟುಗೂಡಿಸಿಕೊಂಡು ತನ್ನ ತಾಯಿಗೆ ಹೇಳ ಹೊರಟಾಗ ಆಕೆ ತತ್‌ಕ್ಷಣ "ಅವಳು ಇಷ್ಟು ದಿನ ಏನು ಮಾಡುತ್ತಿದ್ದಳು?" ಎನ್ನುವುದೇ?

ಕುಟುಂಬಗಳು ಎಂದರೆ ಪ್ರಪಂಚದಲ್ಲಿ ವಿಶ್ರಾಂತಿ ಕೊಡುವ ಆಶ್ರಯ ತಾಣಗಳು. ಆದರೆ ನಮ್ಮ ನೆಂಟರು ಯಾವಾಗಲೂ ಹೊರಗಡೆಯವರಿಗೆ ಹೇಳಲಿಕ್ಕಾಗದಂತಹ ಮಾತುಗಳನ್ನು ನಮಗೆ ಹೇಳಿ ನೋಯಿಸುತ್ತಾರೆ. "ನಿನ್ನನ್ನು ನಾನು ತುಂಬ ಪ್ರೀತಿಸುವುದರಿಂದಲೇ ನಿನಗೆ ಈ ಮಾತನ್ನು ಹೇಳು

೧೯೯೧ ನೇ ಜನವರಿ ತಿಂಗಳ 'ರೀಡರ್ಸ್ ಡೈಜೆಸ್ಟ್'ನಲ್ಲಿ ಪ್ರಕಟವಾದ **ಜೆನ್ನಿಫರ್ ಜೇಮ್ಸ್‌ರ "ವೆನ್ ವರ್ಡ್ಸ್ ಹರ್ಟ್"** ಲೇಖನದ ಅನುವಾದ.

ತ್ತಿದ್ದೇನೆ" ಎನ್ನುವ ಕಣ್ಣೊರೆಸುವ ಮಾತು ಬೇರೆ.

ಒಬ್ಬಾಕೆಯ ಅನುಭವ ಇದು; ಆಕೆ ತಾನು ಹನ್ನೆರಡು ವರ್ಷ ವಯಸ್ಸಿನವಳಾಗಿದ್ದಾಗ ಸ್ನಾನದ ಕೋಣೆಯ ಕನ್ನಡಿಯಲ್ಲಿ ತನ್ನನ್ನು ತಾನು ನೋಡಿಕೊಳ್ಳುತ್ತಿದ್ದಳಂತೆ. ಆಗ ಆಕೆಯ ತಾಯಿ "ಮಗಳೇ ಯೋಚಿಸಬೇಡ. ನಿನ್ನ ಮೂಗು ಹಾಗೆಯೇ ಉದ್ದವಾಗುತ್ತಿದ್ದರೆ ಅದನ್ನು ಸರಿಪಡಿಸೋಣವಂತೆ"-ಎಂದಳು. ಆವರೆವಿಗೂ ಈಕೆಗೆ ತನ್ನ ಮೂಗು ಸರಿಯಾದ ರೂಪುರೇಷೆಗಳಿಂದ ಕೂಡಿಲ್ಲ ಎನ್ನುವ ವಿಷಯವೇ ಆಕೆಗೆ ತಿಳಿದಿರಲಿಲ್ಲವಂತೆ.

ಕೆಲವರು ತಾವು ಅತ್ಯುತ್ತಮವಾದ ವ್ಯಾಖ್ಯಾನ ಅಥವಾ ವಿಮರ್ಶೆಯನ್ನೂ ಮಾಡುತ್ತಿದ್ದೇವೆಂದು ಉಬ್ಬಿ ಹೋಗುತ್ತಾರೆ. ಬಲೂನಿನ ಗಾಳಿ ತೆಗೆಯುವಂತೆ ತಮ್ಮ ಮಾತುಗಳಿಂದ ಮುಖಭಂಗ ಮಾಡುತ್ತಾರೆ. "ನಾನು ಪ್ರಾಮಾಣಿಕ ಎಂದರೆ ನಿನಗೇನೂ ಅಭ್ಯಂತರವಿಲ್ಲವಷ್ಟೆ....? ಎಂದೋ-ಅಥವಾ "ನಿನ್ನ ಒಳಿತಿಗೇ ನಾನು ಇದನ್ನು ಹೇಳುತ್ತಿದ್ದೇನೆ" ಎಂದೋ ಹೇಳುತ್ತಾರೆ. ನಮಗೆ ಬೇಕೋ ಬೇಡವೋ ನಾವು ಅವರ ನಿಷ್ಪಕ್ಷಪಾತವಾದ ವಿಮರ್ಶೆಯನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಹಾಗೆಯೇ ಅವರ ಚುಚ್ಚುಮಾತಿನ ಹೊಡೆತವನ್ನು ತಾಳಿಕೊಳ್ಳಬೇಕಾಗುತ್ತದೆ.

ಈ ಚುಚ್ಚು ವ್ಯಾಖ್ಯಾನಗಳ ವಿಷಪೂರಿತ ವರ್ತುಲದಿಂದ ತಪ್ಪಿಸಿಕೊಳ್ಳಲು ಯತ್ನಿಸಿದಾಗ ನಾವು ಸಿಕ್ಕಿ ಹಾಕಿಕೊಳ್ಳುವುದುಂಟು.

ಅದೃಷ್ಟವಶಾತ್ ಈ ವಿಮರ್ಶೆಯ ಮುಳ್ಳುಗಳಿಂದ ತಪ್ಪಿಸಿಕೊಳ್ಳಲು ಮತ್ತು ನಮ್ಮ ಆತ್ಮಾಭಿಮಾನವನ್ನು ಹೆಚ್ಚಿಸಿಕೊಳ್ಳಲು ಅನೇಕ ದಾರಿಗಳಿವೆ. ಮುಂದೆ ನೀವು ಕಟು ವಿಮರ್ಶೆಗೆ ಗುರಿಯಾದಾಗ ಮುಂದಿನ ಯುಕ್ತಿಗಳನ್ನು ಉಪಯೋಗಿಸಿ ನೋಡಿ.

*ಮುಖಭಂಗದ ಕಾರಣ ನೋಡಿ. ಬೇರೆಯವರನ್ನು ವಿನಾಕಾರಣ ಟೀಕಿಸುವವರಿಗೆ ತಮ್ಮದೇ ಆದ ನೋವಿನ ಪರಂಪರೆಯೇ ಇರುತ್ತದೆ. ಅದನ್ನು ಅವರು ಮತ್ತೊಬ್ಬರ ಮೇಲೆ ಹೇರುತ್ತಾರೆ. ನಿಮ್ಮ ವಿಮರ್ಶಕನನ್ನು ಯಾವ ನೋವು ಕೊರೆಯುತ್ತಿದೆ ಎಂದು ಆತನನ್ನೇ ಕೇಳಿ ನೋಡಿ. ಆದರೆ ಒಂದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಪ್ರತಿಯೊಂದು ವಿಮರ್ಶೆಯೂ ನಿಮ್ಮನ್ನೇ ಕುರಿತದ್ದೇನೂ ಆಗಿರಬೇಕಾಗಿಲ್ಲ. ಆದ್ದರಿಂದ ವಿಮರ್ಶೆಯ ಮೂಲವನ್ನು ತಿಳಿಯಬೇಕು.

*ಸೂಕ್ಷ್ಮದೃಷ್ಟಿಯಿಂದ ಸೂಚನೆಗಳನ್ನು ಗಮನಿಸಿ. ಇದರ ರಹಸ್ಯ ಏನೆಂದರೆ ಅವರು ಏನೆಂದು ಆಪಾದಿಸುತ್ತಿದ್ದಾರೆ, ಅಥವಾ ಯಾವ ಅಂಶವನ್ನು ಬಿಟ್ಟಿರುತ್ತಾರೆ ಎನ್ನುವುದನ್ನು ಗಮನಿಸುತ್ತಿರಬೇಕು. ನಿಮ್ಮನ್ನು ಆಕರ್ಷಿಸುವುದಕ್ಕಾಗಿ ಅವರು ಒಡ್ಡುವ ಆಮಿಷಗಳಿಂದ ತಪ್ಪಿಸಿಕೊಳ್ಳಬೇಕು. ಉದಾಹರಣೆಗಾಗಿ, ಯಾರಾದರೂ "ನೀನು ನನ್ನನ್ನು ಪ್ರೀತಿಸಿದ್ದಿದ್ದರೆ ಮತ್ತೂ ಸಣ್ಣಗಾಗುತ್ತಿದ್ದೆ" ಎಂದಾಗ "ನಾನು ನಿನ್ನನ್ನು ಎಷ್ಟೋ ದಿನಗಳಿಂದ ಪ್ರೀತಿಸುತ್ತಿರುವುದು ನಿನಗೆ ತಿಳಿದೇ ಇಲ್ಲವೇನು?" ಎಂದು ಕೇಳಿಬಿಡಬೇಕು.

*ವಿಮರ್ಶಕನನ್ನು ಎದುರಿಸಿ. ಮುಖ

ಭಂಗವನ್ನು ಎದುರಿಸುವುದು ಸುಲಭದ ಮಾತೇನಲ್ಲ. ನೇರ ಉತ್ತರಿಸುವುದು ಒಂದೇ ದಾರಿ. ನಿರಾಕರಣಾರ್ಥಕ ಟೀಕೆಗಳ ತಂತುಗಳನ್ನು ಮುರಿದು ಮಾತಿಗೆ ಮಾತನ್ನು ಮರಳಿಸಬೇಕು. "ನನ್ನ ಭಾವನೆಗಳಿಗೆ ನೋವುಂಟುಮಾಡುವ ಕಾರಣ ಏನೆಂದು ತಿಳಿಯಬಹುದೇನು?" ಎಂದು ಕೇಳಬಹುದು ಅಥವಾ "ನಿನ್ನ ಟೀಕೆ ಮತ್ತೊಬ್ಬರನ್ನು ಎಷ್ಟು ಬಾಧಿಸಬಹುದೆಂದು ನಿನಗೆ ತಿಳಿದಿದೆಯೇನು?" ಎಂದೂ ಕೇಳಬಹುದು.

ಮತ್ತೊಂದು ದಾರಿ ಎಂದರೆ ಅವರನ್ನು ತಮ್ಮ ಟೀಕೆಯ ಸ್ಪಷ್ಟೀಕರಣವನ್ನು ಕೇಳಬಹುದು: ನೀನು ಆ ತೆರನಾಗಿ ಹೇಗೆ ಹೇಳುವೆ?" ಅಥವಾ "ನೀನು ಹೇಳಿದ್ದು ನನಗೆ ಸಂಪೂರ್ಣ ಅರ್ಥವಾಗಿದೆ ಎಂದು ತಿಳಿಸಬಯಸುತ್ತೇನೆ" ಎಂದೂ ಹೇಳಬಹುದು. ನೀವು ತಮ್ಮ ಆಟವನ್ನೇ ಆಡುತ್ತಿದ್ದೀರೆಂದು ವಿಮರ್ಶಕರಿಗೆ ತಿಳಿದ ಕ್ಷಣ ಅವರು ನಿಮ್ಮನ್ನು ಬಿಟ್ಟುಬಿಡುತ್ತಾರೆ. ಹೀಗೆ ಸಿಕ್ಕಿಹಾಕಿಕೊಳ್ಳುವುದು ಅವರಿಗೆ ಒಂದು ನಾಚಿಕೆಗೇಡಿನ ವಿಷಯವಲ್ಲವೆ?

*ಹಾಸ್ಯ ರಸವನ್ನು ಉಪಯೋಗಿಸಿ. ಒಂದು ಸಲ ನನ್ನ ಸ್ನೇಹಿತೆ ಒಬ್ಬಳು ಹೇಳಿದಳು. "ಹೊಸ ಸೀರೆಯೆ? ಇದು ಸೋಫಾಗಳಿಗೆ ಹಾಕುವ ದಿಂಬಿನ ಬಟ್ಟೆಯಂತೆ ಇದೆಯಲ್ಲ?" ಎಂದಳಂತೆ. ಅದಕ್ಕೆ ಉತ್ತರಿಸುತ್ತಾ ಅವಳ ಸ್ನೇಹಿತೆಯೆ "ಸರಿ, ಹಾಗಾದರೆ ಬಾ ನನ್ನ ತೊಡೆಯ ಮೇಲೆ ಕುಳಿತುಕೊ !!" ಎಂದಳಂತೆ.

ಒಬ್ಬಳು ತನ್ನ ಜೀವವನ್ನೇ ಒತ್ತೆಯಿಟ್ಟು ಮನೆಯನ್ನು ಅಷ್ಟು ಪರಿಶುದ್ಧವಾಗಿ ಇಡುತ್ತಿದ್ದಳಂತೆ. ಆಕೆ ಒಂದು ಸಲ ತನ್ನ ಮಗಳ ಅಡುಗೆ ಕೋಣೆಯಲ್ಲಿ ಒಂದು ಮೂಲೆಯಲ್ಲಿದ್ದ ಜೇಡರಬಲೆಯನ್ನು ನೋಡಿ "ಅದೇನದು" ಎಂದಳಂತೆ. ಅದಕ್ಕೆ ಆಕೆಯ ಪುತ್ರಿಯು "ವಿಜ್ಞಾನದ ಒಂದು ಯೋಜನೆ!!" ಎಂದಳಂತೆ.

ಮುಖಭಂಗದಿಂದ ತಪ್ಪಿಸಿಕೊಳ್ಳಲು ಜೀವನವನ್ನೇ ಹಗುರಮಾಡಿಕೊಳ್ಳುವ ಕಲೆಯನ್ನು ಕಲಿಯಬೇಕು. ತುರ್ತು ಹಾಸ್ಯದಿಂದ ಯಾರನ್ನು ಬೇಕಾದರೂ ಜಯಿಸಬಹುದು.

*ಸಂಕೇತಗಳನ್ನು ಸೃಷ್ಟಿಸಿ. ಒಬ್ಬಳು ತನ್ನ ಪತಿ ಯಾವಾಗಲೂ ಎಲ್ಲರ ಎದುರಿನಲ್ಲಿಯೂ ತನ್ನನ್ನು ವಿಮರ್ಶಿಸಿ ಮುಖಭಂಗ ಮಾಡುತ್ತಿದ್ದುದನ್ನು ತಿಳಿಸಿದಳು. ಆಕೆ ಚಿಕ್ಕದಾದ ಕೈಚಾಕವನ್ನು ತನ್ನೊಡನೆ ಒಯ್ದು ಆತನು ತನ್ನ ಬಗ್ಗೆ ನೋವುಂಟು ಮಾಡಬಹುದಾದ ಟೀಕೆಗಳನ್ನು ಮಾಡಿದಾಗಲೆಲ್ಲ ಆ ಚಾಕವನ್ನು ತನ್ನ ತಲೆಯ ಮೇಲೆ ಹಾಕಿಕೊಂಡು ಬಿಡುತ್ತಿದ್ದಳು. ಇದರಿಂದ ಆತನಿಗೇ ನಾಚಿಕೆಯಾಗಿ ತನ್ನ ಕೆಟ್ಟ ಚಾಳಿಯನ್ನು ಬಿಡಬೇಕಾಯಿತು.

*ಪಕ್ಕಕ್ಕೆ ಒತ್ತರಿಸಿ. ಏನು ಬೇಕಾದರೂ ಮಾತನಾಡಲು ಅವಕಾಶ ಕೊಡು. ನಿನ್ನ ಹೆಂಡತಿಯು "ನೀನು ಹತ್ತು ಕೆ.ಜಿ.ಗಳಷ್ಟು ತೂಕದಲ್ಲಿ ಹೆಚ್ಚಿದ್ದೀಯ"ಎಂದರೆ "ಹೌದು, ಹನ್ನೆರಡಕ್ಕೆ ಇನ್ನೂ ಮುಟ್ಟಿಲ್ಲ" ಎಂದು ಬಿಡು. ನಿನ್ನನ್ನು ಬಿಡದೇ ಆಕೆಯು "ಇದರ ಬಗ್ಗೆ ನೀನು ಏನೂ ಮಾಡುವುದಿಲ್ಲವೆ"? ಎಂದರೆ "ನೋಡೋಣ ಕೆಲವು ದಿವಸಗಳ ಕಾಲ ಸ್ಥೂಲಕಾಯನಾಗೇ ಇರುವ ಇಚ್ಛೆ" ಎನ್ನುವ, ಟೀಕೆಗೆ ನಾವು ಹೆಚ್ಚು ಪ್ರಾಮುಖ್ಯ ಕೊಟ್ಟಾಗ ಮಾತ್ರ ಅದಕ್ಕೆ ಹೆಚ್ಚು ಬಲ

ಬೆಲೆ ಬರುತ್ತವೆ. ಟೀಕೆಯನ್ನು ಸಲೀಸಾಗಿ ಸುಲಭವಾಗಿ ಒಪ್ಪಿಕೊಂಡಂತೆ ಮಾತನಾಡಿದರೆ-ಅದರ ಶಕ್ತಿಯು ಕ್ಷೀಣಿಸುತ್ತದೆ.

*ಟೀಕೆಯನ್ನು ಅಲಕ್ಷಿಸಿ. ವಿಮರ್ಶೆಯನ್ನು ಕೇಳಿ ಅದು ನಿಮಗಲ್ಲ ಎಂದು ಅದನ್ನು ಅಲಕ್ಷಿಸಿ. ಜೀವನವನ್ನು ಎದುರಿಸುವ ಕಲೆಗಳಲ್ಲಿ ಕ್ಷಮಿಸುವ ಈ ಕಲೆಯನ್ನು ನಾವು ಕರಗತಮಾಡಿಕೊಳ್ಳಬೇಕು. ನಿಮಗೆ ಇದು ಕಷ್ಟ ಎನಿಸಿದರೆ ಹೀಗೆ ಮಾಡಿ. ವಿಮರ್ಶೆ ಮಾಡುವವನಿಗೆ ನೀವು ಆತನ ಟೀಕೆಗಳನ್ನು ಕೇಳಿಸಿಕೊಂಡಿದ್ದೀರಿ, ಆದರೆ ಅದಕ್ಕೇನೂ ಪ್ರತಿಕ್ರಿಯೆ ತೋರಿಸುವುದಿಲ್ಲ ಎಂದು ತಿಳಿಯುವಂತೆ ನಡೆದುಕೊಳ್ಳಿರಿ. ಮುಂದಿನ ಸಲ ನಿಮ್ಮನ್ನು ಯಾರಾದರೂ ಟೀಕಿಸಿದಾಗ ನಿಮ್ಮ ಅಂಗಿಯ ಮೇಲೊಂದು ಕಾಲ್ಪನಿಕ ಕಲೆಯನ್ನು ಅಳಿಸಹಾಕುವಂತೆ ನಟಿಸಿರಿ. ಎದುರಿನಲ್ಲಿರುವ ವ್ಯಕ್ತಿ ಇದೇನು ಮಾಡುತ್ತಿರುವೆ ಎಂದು ಕೇಳಿದರೆ "ಅದೇ. ಯಾರೋ ನನ್ನನ್ನು ಗುದ್ದಿದರೆಂದು ತಿಳಿದೆ. ಆದರೆ ಅದು ನನ್ನ ತಪ್ಪು ತಿಳುವಳಿಕೆ"—ಎಂದು ಬಿಡಿ. ಆಗ ವಿಮರ್ಶಕರು ಜಾಗರೂಕರಾಗಿ ಬಿಡುತ್ತಾರೆ.

ಕೆಲವುಸಲ ಟೀಕೆಯ ಮಾತಿನಲ್ಲಿ ಆಸಕ್ತಿ ಇಲ್ಲದಂತೆ ನಟಿಸಿ ಕಣ್ಣು ಮಿಟುಕಿಸಿ, ಆಕಳಿಸಿ, ಎತ್ತಲೋ ನೋಡುತ್ತಾ "ನನ್ನ ಪಾಡಿಗೆ ನನ್ನನ್ನು ಬಿಟ್ಟುಬಿಡು" ಎನ್ನುವ ನೋಟವನ್ನು ಆತನೆಡೆಗೆ ಹೊರಳಿಸಿ. ತಾವು ಮತ್ತೊಬ್ಬರಿಗೆ ಬೇಸರ ತರಿಸುತ್ತಿದ್ದೇವೆಂದು ತಿಳಿದು ಅವರಿಗೇ ನಾಚಿಕೆಯಾಗಿ ದೂರ ಸರಿಯುತ್ತಾರೆ.

*ಶೇಕಡಾ ಹತ್ತರಷ್ಟು ಹೆಚ್ಚಿಸಿ. ಏನೇ ಆಗಲಿ ನಾವು ಎಲ್ಲಾ ವಿಮರ್ಶೆಗಳನ್ನು ತಡೆದು ಹಿಂದಕ್ಕೆ ಓಡಿಸುವುದು ಸಾಧ್ಯವಿಲ್ಲ. ಕೆಲವು ಮಾತಿನ ಬಾಣಗಳನ್ನು ಅತ್ಯಂತ ಸಹಜವಾಗಿ ಒಪ್ಪಿಕೊಂಡು ಅವನ್ನು ಎದುರಿಸಿ. ನಮ್ಮಲ್ಲಿ ಅನೇಕರು ಬೇರೆಯವರಿಗೆ ನೋವುಂಟು ಮಾಡಲು ಇಚ್ಛಿಸುವುದಿಲ್ಲ. ಆದರೂ ಕೆಲವು ಸಂದರ್ಭಗಳಲ್ಲಿ ಆ ತಪ್ಪು ನಡೆಯುತ್ತದೆ. ಆದ್ದರಿಂದ ಸರಿ ಎಂದು ತೋರಿದಾಗ ನಿಮ್ಮನ್ನು ನೀವು ಸ್ಪಷ್ಟೀಕರಿಸಿಕೊಳ್ಳಿ. ಹಾಗಾದಾಗಲೂ ಈ ಶೇಕಡಾ ಹತ್ತರ ತೊಡಕು ಬಿಡಿಸುವ ನಿಯಮವನ್ನು ಪಾಲಿಸಿ

೧. ಶೇಕಡಾ ಹತ್ತರಷ್ಟು ಸಲ ನಾವು ಖರೀದಿಸಿದ ವಸ್ತುವು ಬೇರೆಕಡೆ ಮತ್ತೂ ಅಗ್ಗವಾಗಿ ದೊರೆಯಬಹುದು.

೨. ಶೇಕಡಾ ಹತ್ತರಷ್ಟು ಸಲ ನಾವು ಸಾಲವಾಗಿ ಕೊಟ್ಟ ವಸ್ತುವು ಒಡೆದು ಭಿನ್ನವಾಗಿ ಹಿಂತಿರುಗಿ ಬರಬಹುದು.

೩. ಶೇಕಡಾ ಹತ್ತರಷ್ಟು ಸಲ ನಿನ್ನ ಅತ್ಯುತ್ತಮ ಸ್ನೇಹಿತರೂ ನಿನಗೆ ಅರ್ಥವಿಲ್ಲದೇ ಏನನ್ನಾದರೂ ಹೇಳಿ ಆಮೇಲೆ ಪಶ್ಚಾತ್ತಾಪ ಪಡಬಹುದು.

ಇದರ ಅರ್ಥವೇನೆಂದರೆ "ಗೋರ್ಕಲ್ಲ ಮೇಲೆ ಮಳೆಗರೆದಂತೆ" ದಪ್ಪ ಚರ್ಮದವರಾಗಿ. ತಾವು ಅತ್ಯುತ್ತಮವಾದದ್ದನ್ನು ಮಾಡುತ್ತಿದ್ದೇವೆ ಎಂದು ಎಲ್ಲರೂ ಅಂದುಕೊಂಡಿರುತ್ತಾರೆ. ಆದರೆ ತಮ್ಮ ನಡವಳಿಕೆಯಿಂದ ಅನ್ಯರಮೇಲೆ ಯಾವ ವಿಧವಾದ ಪರಿಣಾಮವಾಗಿದೆ ಎಂದು ಅವರಿಗೆ ತಿಳಿಯುವುದಿಲ್ಲ.

ನಿಮ್ಮನ್ನು ನೀವು ಸ್ವತಃ ಕಾಪಾಡಿಕೊಳ್ಳುವುದೂ ಸಂಯಮದಿಂದ ಇರುವುದೂ, ಯಾವಾಗಲೂ ಒಳಿತನ್ನೇ ಆಚರಿ


ಸುವುದೂ ಬಹಳ ಕಷ್ಟ. ಇತರರನ್ನು ಕ್ಷಮಿಸುವುದನ್ನು ಕಲಿಯಿರಿ. ಇದರಿಂದ ನಿಮಗೆ ಶೇಕಡಾ ಹತ್ತಕ್ಕಿಂತ ಹೆಚ್ಚಿಗೆಯೇ ಸಿಗುತ್ತದೆ.

ಬುದ್ಧ ತಾನು ಒಬ್ಬ ವ್ಯಕ್ತಿಯಿಂದ ನಿಂದಿಸಿ, ದೂಷಿಸಿಕೊಂಡಾಗ ಅವನು "ಮಗನೆ ಬಹುಮಾನವನ್ನು ಒಬ್ಬನು ನಿರಾಕರಿಸಿದರೆ ಅದು ಯಾರಿಗೆ ಸೇರುತ್ತದೆ?" ಎಂದು ಕೇಳಿದ. ಅದಕ್ಕೆ ಆ ವ್ಯಕ್ತಿ "ಕೊಡುವವನಿಗೆ" ಎಂದನಂತೆ. ಅದಕ್ಕೆ ಬುದ್ಧ "ಹಾಗಾದರೆ ನಿನ್ನ ದೂಷಣೆಗಳನ್ನು ಸ್ವೀಕರಿಸಲು ನಾನು ನಿರಾಕರಿಸುತ್ತೇನೆ"-ಎಂದನಂತೆ.

ಮತ್ತೊಬ್ಬರನ್ನು ಮೆಟ್ಟಿ ತುಳಿದು ತಮ್ಮನ್ನು ತಾವು ದೊಡ್ಡವರೆಂದು ತೋರಿಸಿಕೊಳ್ಳುವವರಿಂದ ಈ ಪ್ರಪಂಚ ತುಂಬಿದೆ. ಅವರ ಜೇಬುಗಳು ಮತ್ತು ಚೀಲಗಳ ತುಂಬ ಟೀಕೆಗಳೇ ತುಂಬಿವೆ. ಅವರು ಅದನ್ನೇ ಎಲ್ಲರಿಗೂ ಬಿತ್ತರಿಸುತ್ತಾರೆ.

ಅಪಹಾಸ್ಯವನ್ನು ಅವರು ಪ್ರೀತಿಯಿಂದಲೇ ನಿಮ್ಮ ಪ್ರೀತಿ ಪ್ರಯೋಗಿಸಿದಾಗಲೂ ನೀವು ಅದನ್ನು ಸ್ವೀಕರಿಸಬೇಡಿ. ಅವರನ್ನು ತಾತ್ಸಾರಮಾಡುವುದರಿಂದ ನಿಮ್ಮ ಉದ್ವೇಗ ಕಡಿಮೆಯಾಗುತ್ತದೆ. ಹೀಗೆ ನಿಮ್ಮ ಬಾಂಧವ್ಯಗಳನ್ನು ದೃಢಮಾಡಿಕೊಳ್ಳಬಹುದು, ಹಾಗೆಯೇ ನಿಮ್ಮ ಸ್ವಸಂತೋಷವನ್ನೂ ಹೆಚ್ಚಿಸಿಕೊಳ್ಳಬಹುದು.

———



## ಮದ್ಯಪಾನ

ಕುಡಿತ ಮನುಷ್ಯ ತನ್ನನ್ನು ತಾನು ಮರೆಯುವಂತೆ ಮಾಡುತ್ತದೆ. ಅವನು ಮೃಗಕ್ಕಿಂತಲೂ ಕಡೆಯಾಗುತ್ತಾನೆ.

ಒಂದು ರಾಷ್ಟ್ರ, ಮದ್ಯವನ್ನು ಕುಡಿಯಲು ಜನರಿಗೆ ಒದಗಿಸುವ ಕ್ರಮ ತಪ್ಪು ಮತ್ತು ಅನೀತಿಯುತವಾದುದು.

—ಗಾಂಧೀಜಿ

# ಮುಕ್ತಿಗಿಲ್ಲಿದೆ ಸುಲಭ ದಾರಿ

**ಸರಸ್ವತಿ ಬಡೆಕ್ಕಿಲ**
ಮನೆ ಸಂಖ್ಯೆ ೧೨, ದೀಪಾನಗರ
ಬೋಗಾದಿ, ಮೈಸೂರು–೫೭೦೦೦೬

ವರ್ಷಗಳ ಹಿಂದಿನ ಘಟನೆ. ಒಬ್ಬ ಪ್ರಸಿದ್ಧ ಯಹೂದಿ ಪಂಡಿತ ನನ್ನ ಬಳಿಗೆ ಬಂದ. ಒಂದು ಹಸ್ತಪ್ರತಿಯ ಬಗ್ಗೆ ನನ್ನ ಅಭಿಪ್ರಾಯ ತಿಳಿದುಕೊಳ್ಳುವುದು ಆತನ ಉದ್ದೇಶವಾಗಿತ್ತು— "ಒಬ್ಬ ಹುಡುಗ ಇದನ್ನು ಕೊಟ್ಟ. ನಾನು ಇದನ್ನು ಮಾರಾಟ ಮಾಡಿಕೊಡಬೇಕೆಂದು ಅವನ ಆಸೆ. ನನಗೋ ಅದನ್ನು ಓದಿನೋಡುವುದಕ್ಕೂ ಕಾಲಾವಕಾಶ ಸಿಗುತ್ತಿಲ್ಲ!" ಪಂಡಿತನೆಂದ.

ಅದರ ಒಂದೆರಡು ವಾಕ್ಯ ಸರಣಿಗಳನ್ನು ಓದುವಾಗಲೇ ಅದೊಂದು ಪ್ರಕಾಶ ಸಂಸ್ಥೆಯ ಲಘು ಗ್ರಂಥದ ನಕಲೆಂದು ನನಗೆ ತಿಳಿದುಹೋಯಿತು. ಆದರೆ ಧರ್ಮಪಂಡಿತ ನೊಡನೆ ಹಾಗೆಯೇ —ಇದ್ದುದಿದ್ದಂತೆ ಹೇಳದೆ, ಹಾರಿಕೆಯ ಮಾತಿನಲ್ಲಿ— ಇದೇನೋ ನನಗೆ ತಿಳಿಯದ ವಿಷಯ; ಬೇಕಿದ್ದರೆ ನನ್ನ ಸಹಾಯಕನೊಬ್ಬನಿದ್ದಾನೆ. ಅವನಿಗೆ ಕೊಡಬಲ್ಲೆ"—ಎನ್ನುತ್ತ ಲೇಖನ ಹಿಂತಿರುಗಿಸಿದೆ.

ಪುಟಗಳನ್ನು ತಿರುವುತ್ತ ಒಂದು ನಿಮಿಷ ಮೇಲು ಮೇಲಿಂದ ನೋಟ ಹರಿಸಿ, ಧರ್ಮ ಪಂಡಿತ ಆಶ್ಚರ್ಯದಿಂದ ಹೇಳಿದ—"ಏನು? ನೀನು ನಿನ್ನ ಪ್ರತಿನಿಧಿಗೆ ಕಳುಹಿಸಿಕೊಟ್ಟು, ಆಮೇಲೆ ಅದನ್ನು ಓದೆಂದು ಒತ್ತಾಯಿಸಿ, ಆ ಬಳಿಕ ಆವನು ನಿನಗೊಂದು ಪತ್ರ ಬರೆದು, ಕೊನೆಗೆ ನನಗೆ ತಿಳಿಸುವ ಆಲೋಚನೆಯಷ್ಟೆ? ಈಗಲೇ, ಅದನ್ನೇ, ಯಾಕೆ ಹೇಳಬಾರದು?" ಬೇಸ್ತು ಬಿದ್ದೆ ನಾನು. ವಿವರ್ಣಗೊಂಡ ನನ್ನ ಮುಖ ನೋಡಿ ನನ್ನ ಅಂತರಂಗದ ಅರಿವಾಗಿರಬೇಕು ಆತನಿಗೆ. ಗಂಭೀರನಗೆ ಆತನ ಮುಖದಲ್ಲಿ ಸುಳಿದಾಡಿತು. ಮತ್ತೆ ಆತ್ಮೀಯತೆಯಿಂದ ಹೇಳಿದ—"ನೀವು ಯಾವಾಗಲೂ ನೆನಪಿನಲ್ಲಿಡಿ— ಅನಾವಶ್ಯಕ ಶ್ರಮ, ತೊಂದರೆಗಳನ್ನು ನಿವಾರಿಸುವ ಅತಿ ಮಹತ್ವದ ಆದರೆ ಅತಿ ಸುಲಭವಾದ ತಂತ್ರವೇ ಪ್ರಾಮಾಣಿಕತೆ"

ಮುಂದೆ ಬಹಳಕಾಲ ಅವನ ಈ ಮಾತುಗಳನ್ನು ನನ್ನೊಳಗೇ ಪ್ರಶ್ನಿಸಿಕೊಳ್ಳುತ್ತ ಮಥಿಸಿದಾಗ, ಇದುವರೆಗೂ ನಾನು ವರ್ಷಗಳ ಪರ್ಯಂತ, ಹಿಂದಕ್ಕೆ ಎಂದಿಗೂ ಪಡೆಯಲಾಗದ, ಬೆಲೆ ಕಟ್ಟಲಾಗದಂಥ ಕಾಲ ಮತ್ತು ಶಕ್ತಿಗಳನ್ನು ಇಂಥದೇ ವಂಚನೆಯ, ಕಪಟದ ತಂತ್ರಗಳಿಂದ ಅಪವ್ಯಯಗೊಳಿಸುತ್ತ ಬಂದಿರುವೆನೇನು? ನಾನು ಸದ್ಗುಣಿ, ಶೀಲವಂತ, ವ್ಯವಹಾರ ಚತುರ ಎಂಬ ಮುಸುಕುವೇಷದ ಮರೆಯೊಳಗೆ ನಡೆಸಿದ್ದೆಲ್ಲ ಅಪ್ರಮಾಣಿಕ ವ್ಯವಹಾರವೇ?

ಬರಬರುತ್ತ ನಿಧಾನವಾಗಿ ಪ್ರಾಮಾಣಿಕತೆಯೆಂಬುದು ಶ್ರಮ ಮತ್ತು ಕಾಲ ಉಳಿಸುವ

ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಇಲ್ಯೈಸ್ ಡೇವಿಸ್ ಮಿಲ್ಲರ್ ಅವರ 'ಮೇಕಿಂಗ್ ದಿ ಮೋಸ್ಟ್ ಆಫ್ ಯುವರ್ ಲೈಫ್'ನ 'ಎ ಶಾರ್ಟ್‌ಕಟ್ ಟು ಸೆಟ್ ಯು ಫ್ರೀ' ಲೇಖನದ ಅನುವಾದ.

ಕ್ರಿಯೆಗಿಂತಲೂ ಹೆಚ್ಚಿನದು, ಮೇಲ್ಪಟ್ಟದ್ದು ಎಂಬ ಅರಿವು ಉಂಟಾಯಿತು. ಅತ್ಯಂತ ಬೆಲೆ ಬಾಳುವ, ಅನರ್ಘ್ಯವಾದ ಅರ್ಥಪೂರ್ಣವೂ ಅರ್ಥಲಾಭವೂ ಇರುವ ಎಲ್ಲ ಮಾನವ ಸಂಬಂಧಗಳ ಚರಮಸೀಮೆ—ಪ್ರಾಮಾಣಿಕತೆ—ಎಂಬ ಸತ್ಯವು ಗೋಚರವಾಯಿತು. ಪ್ರಾಮಾಣಿಕತೆಯಿಂದ ಒದಗುವ ಪ್ರಯೋಜನಗಳಿಗೆ ಈ ದೃಷ್ಟಾಂತಗಳನ್ನು ಗಮನಿಸಿರಿ —

**ಪ್ರಾಮಾಣಿಕತೆಯಿಂದ ಕಾಲದ ಉಳಿತಾಯ :**

ನನ್ನ ಕಛೇರಿಯ ಕೆಲಸಕಾರ್ಯಗಳಿಗೆ ಅಡ್ಡಿ ತಂದೊಡ್ಡುವ ದೂರವಾಣಿ ಕರೆಗಳಿಂದ ಪದೇಪದೇ ಭಂಗಗೊಳ್ಳುತ್ತಿರುವುದು ಪ್ರತಿ ದಿನದ ಸಾಮಾನ್ಯ ಸಂಗತಿ. ಆ ಕರೆಗಳಲ್ಲಿ ಅನಗತ್ಯ ವಿಷಯಗಳು ತುಂಬಿರುವುದೇ ಹೆಚ್ಚು. ನನಗೆ ಬೇಕಿಲ್ಲದ ಸಾಮಗ್ರಿಗಳ ಜಾಹೀರಾತುಗಳು, ಅವುಗಳ ಜತೆ ಪುಕ್ಕಟೆ ಕೊಡುಗೆಗಳು ಇತ್ಯಾದಿ. ಅವುಗಳ ಮಾದರಿಯನ್ನೊಮ್ಮೆ ನೋಡಿ—ಎಲ್ಲವೂ ಧರ್ಮಾರ್ಥ. ನೃತ್ಯಪಾಠಗಳಿಂದ ಮೊದಲುಗೊಂಡು ಹಲವು ವಿವರಗಳಲ್ಲದೆ ನಿಮ್ಮ ಶವಸಂಸ್ಕಾರಕ್ಕೆ, ಸಮಾಧಿ ಕಟ್ಟಲಿಕ್ಕೆ ಬೇಕಾದ ನಿವೇಶನವೂ ಧರ್ಮಾರ್ಥ—ಎಂದರೆ ಕಾಸೂ ಖರ್ಚಿಲ್ಲದೆ!

ಅಂಥ ಸಂದರ್ಭಗಳಲ್ಲಿ ಹಿಂದೆಯೆಲ್ಲ ನನ್ನ ಮನದಲ್ಲೇಳುವ ಅಸಹನೆಯ ಭಾವನೆಗಳನ್ನು ಒಂದಿಷ್ಟೂ ವ್ಯಕ್ತಪಡಿಸದೆ ಅವರು ಕಂಠಪಾಠಮಾಡಿಕೊಂಡು ಉದುರಿಸುವ ಅಪಲಾಪಗಳನ್ನು ಮೌನವಾಗಿ ಸಹಿಸುತ್ತ ಆ ಭಾಷಣ ಮುಗಿದಾಗ ಆಶಾಭಂಗದಿಂದ ರೋಷಗೊಳ್ಳುತ್ತಿದ್ದೆ. ಕಳೆದು ಹೋದ ವೇಳೆಗಾಗಿ ಹಳಹಳಿಸುತ್ತಿದ್ದೆ. ಆದರೀಗ ನನ್ನ ರೀತಿಯನ್ನೇ ಬದಲಾಯಿಸಿದೆ. ದೂರವಾಣಿಯ ಮಾತಿನ ಓಟ ಎತ್ತಕಡೆಗಿದೆ ಎಂದು ತಿಳಿದಾಕ್ಷಣ ಮಧ್ಯದಲ್ಲೇ ಅವರ ಮಾತನ್ನು ಕತ್ತರಿಸಿ ಹೇಳುತ್ತೇನೆ—'ನೋಡಿ, ನಾನು ನಿಮ್ಮ ಕಾಲವನ್ನು ವ್ಯರ್ಥಗೊಳಿಸುವುದು ಸರಿಯಲ್ಲ. ನಿಮ್ಮ ವಿಚಾರಗಳಲ್ಲಿ ನನಗೆ ಎಳ್ಳಷ್ಟೂ ಆಸಕ್ತಿ ಇಲ್ಲವೆಂದು ಮೊದಲೇ ನಾನರಿತಿರುವಾಗ....” ಎನ್ನುತ್ತಾ ಫೋನನ್ನು ಕೆಳಗಿಟ್ಟುಬಿಡುತ್ತೇನೆ.

**ಇನ್ನೊಂದು ಪ್ರಸಂಗವನ್ನು ನೋಡಿ :**

‘ಹೊಸ ವರ್ಷದ’ ದಿನ. ನನಗೆ ಚೆನ್ನಾಗಿ ಪರಿಚಯವಿರುವ ದಂಪತಿಗಳು ತಮ್ಮ ಸಾಮಾಜಿಕ ಜೀವನದಲ್ಲಿ ಮುಂದೆ ಎಂದೆಂದೂ ‘ಸಂಪೂರ್ಣ ಪ್ರಾಮಾಣಿಕರಾಗಿ ಇರುತ್ತೇವೆ’ ಎಂದು ಪ್ರತಿಜ್ಞಾಬದ್ಧರಾದರು. ಆ ಬಳಿಕ ಅವರಿಗೆ ಎದುರಾದ ಸಂದರ್ಭ, ಅನುಭವಗಳನ್ನು ನೋಡಿ. ಪತ್ನಿ ಹೀಗೆ ಹೇಳಿದಳು—ಅದರ ಪ್ರಾರಂಭ ಈ ರೀತಿಯಲ್ಲಾಯಿತು. ಪ್ರತಿ ಸೋಮವಾರ ನಮ್ಮ ಆತ್ಮೀಯ ಗೆಳೆಯನೊಬ್ಬ ಆ ವಾರದ ಕೊನೆಯ ದಿನ ಏನೆಲ್ಲ ಮಾಡಬೇಕು, ಎಲ್ಲಿಗೆ ಹೋಗಬೇಕು, ಯಾವುದು ನೋಡೋಣ ಇತ್ಯಾದಿಗಳ ಒಂದು ಯಾದಿಯನ್ನು ಸಿದ್ಧಪಡಿಸಿ ನಮ್ಮನ್ನು ಒತ್ತಾಯಿಸುತ್ತಿದ್ದ. ಅವನಿಗೆ ನಮ್ಮ ಅನಿಚ್ಛೆಯನ್ನು ತಿಳಿಸುವ ಉಪಾಯ ತಿಳಿಯದೆ, ನಮಗೆ ಇಷ್ಟವಿರಲಿ, ಬಿಡಲಿ, ತಕ್ಷಣದಲ್ಲೇ ನಿರ್ಣಯ ತೆಗೆದುಕೊಳ್ಳಲು ಅಸಮರ್ಥರಾಗಿ ಒಪ್ಪಿಕೊಂಡು ಬಿಡುತ್ತಿದ್ದೆವು. ಆದರೆ ವಾರದ ಕೊನೆಯವರೆಗೂ ಆ ಕಾರ್ಯಕ್ರಮ ರದ್ದುಪಡಿಸುವ ಮಾರ್ಗ ಹುಡುಕಬೇಕಾಗುತ್ತಿತ್ತು. ಬರಬರುತ್ತ

ನಮ್ಮ ಪರದಾಟದಿಂದಲೇ ನಾವು ಪಾಠ ಕಲಿತೆವು. ಯಾವುದೇ ನಿಯಂತ್ರಣವನ್ನು ಆ ಕ್ಷಣದಲ್ಲೇ ಅಸ್ವೀಕಾರ ಮಾಡುವುದರಿಂದ ತಪ್ಪಿತಸ್ಥರಾಗುವುದಿಲ್ಲ. ಅದು ಅಸಭ್ಯತೆಯಾಗುವುದೂ ಇಲ್ಲ.

**'ಉತ್ತಮ ನಡವಳಿಕೆ' ಇದರರ್ಥವೇ ಪ್ರಾಮಾಣಿಕ ವ್ಯವಹಾರ :**

ಪ್ರಾಮಾಣಿಕ ಪ್ರಶ್ನೆಗೆ ಪ್ರಾಮಾಣಿಕ ಉತ್ತರದ ಹಕ್ಕು ಇದ್ದೇ ಇದೆ. ಅದು ಸೌಜನ್ಯದ ಸಾಮಾನ್ಯ ಲಕ್ಷಣ. ನಮ್ಮ ನೆರೆಮನೆಯಾಕೆಗೆ ಹೊಸತೊಂದು ನಾಯಿ ಮರಿ ಸಿಕ್ಕಿತು. ಅದನ್ನು ಜಾನುವಾರು ವೈದ್ಯರಿಗೆ ತೋರಿಸೋಣವೆಂದು ದೂರ-ವಾಣಿಯಲ್ಲಿ ಸಂಪರ್ಕಿಸಿದಳು. ಪದೇ ಪದೇ ಮೂರು ಬಾರಿ ವಿನಂತಿಸಿದರೂ ವೈದ್ಯರ ಆಗಮನವಾಗದಿದ್ದಾಗ, ಆಕೆ ಸ್ವಾಗತಕರ್ತೆಗೆ ನೇರ ಪ್ರಶ್ನೆ ಹಾಕಿದಳು—"ನಿಮ್ಮ ಡಾಕ್ಟರರಿಗೆ ಪುರುಸೊತ್ತಾಗದಷ್ಟು ಬಹಳ ರೋಗಿಗಳ ಶುಶ್ರೂಷೆ ಇದೆಯೆಂದು ನಿಮ್ಮ ಅಭಿಪ್ರಾಯವೇ?"—ತುಸು ಹೊತ್ತಿನ ಮೌನದ ಬಳಿಕ ಸ್ವಾಗತಕರ್ತೆಯ ಉತ್ತರ ನಿಧಾನವಾಗಿ ಕೇಳಿಬಂತು—"ನೀವು ಆತ್ಮೀಯತೆಯಿಂದ ಪ್ರಶ್ನಿಸಿದಿರಿ. ಅದ್ದರಿಂದ ನಾನೂ ಹಾಗೇ ಉತ್ತರಿಸುತ್ತೇನೆ—ನಿಮ್ಮ ಅನುಮಾನ ಸರಿಯಾಗಿದೆ. ಸಮರ್ಪಕ ಚಿಕಿತ್ಸೆ ನೀಡಲು ಸಾಧ್ಯವಾಗದಷ್ಟು ರೋಗಿಗಳು ಈಗಾಗಲೇ ವೈದ್ಯರ ಬಳಿ ಇದ್ದಾರೆ. ನಾನು ನೀವಾಗಿದ್ದಲ್ಲಿ ಅರ್ಥಾತ್ ನಿಮ್ಮ ಸ್ಥಾನದಲ್ಲಿ ನಾನಿರುತ್ತಿದ್ದರೆ ಇನ್ನೂ ಚೆನ್ನಾಗಿ ನೆಲೆಗೊಂಡಿರದ, ಪ್ರಾರಂಭಿಕ ಹಂತದಲ್ಲಿರುವ ಬೇರೆ ಯಾವುದಾದರೂ ವೈದ್ಯಶಾಲೆಯ ಕಿರಿಯ ಡಾಕ್ಟರರನ್ನು ಸಂಪರ್ಕಿಸುತ್ತಿದ್ದೆ."

**ಪ್ರಾಮಾಣಿಕತೆ ಇದ್ದಲ್ಲಿ ವ್ಯರ್ಥ ಯೋಜನೆ ಹಾಕುವ ಅಥವಾ ಉಪಾಯ ಹುಡುಕುವ ಶ್ರಮದಿಂದ ಮುಕ್ತಿ :**

ನನ್ನ ಗೆಳತಿಯೊಬ್ಬಳು ಇತ್ತೀಚೆಗೆ ಒಂದು ಹೊಸ ಮನೆಗೆ ವಸತಿ ಬದಲಾಯಿಸಿದಳು. ಮನೆಯ ಸಾಮಾನು ಸಾಗಿಸುವವರು ಪೆಟ್ಟಿಗೆ, ಚೀಲ, ಡಬ್ಬಿಗಳನ್ನು ವಾಹನಕ್ಕೆ ತುಂಬುತ್ತಿದ್ದಾಗ ಅವಳ ಅತಿ ಪ್ರೀತಿಯ ಅಮೂಲ್ಯ ಹೂದಾನಿಯೊಂದು ಎಲ್ಲೂ ಕಂಡುಬರಲಿಲ್ಲ. ಕೆಲಸಗಾರರು ನಾಲ್ವರೂ ಎಲ್ಲ ಕಡೆ, ಮನೆಯ ಮೂಲೆ ಮೂಲೆಗಳಲ್ಲಿಯೂ ಹುಡುಕಿದರು. ಅವರ ಜತೆ ಆಕೆಯೂ, ಅವಳ ಹದಿಹರೆಯದ ಮಗಳೂ ಕಪಾಟು, ಮೇಜು ಇತ್ಯಾದಿ ಎಲ್ಲ ವಸ್ತುಗಳನ್ನು ಶೋಧಿಸಿದರೂ ಹೂದಾನಿ ಮಾತ್ರ ಸಿಗಲೇ ಇಲ್ಲ. ಅಷ್ಟರಲ್ಲಿ ಆ ನನ್ನ ಗೆಳತಿಯ ಕಣ್ಣಿಗೆ ಅಡುಗೆ ಕೋಣೆಯ ನೆಲದಲ್ಲಿ ಥಳ ಥಳಿಸುವ ಮುರುಕಲು ಹರಳೊಂದು ಕಾಣಿಸಿತು. ಅಮ್ಮನ ಮುಖದಲ್ಲಾದ ಬದಲಾವಣೆಯನ್ನು ಮಗಳು ಗಮನಿಸಿ ನಡುಗಿದಳು. ಕಣ್ಣೀರು ಝಲ್ಲನೆ ಒಸರಿತು. ಅಳುತ್ತಾ—"ಅಮ್ಮಾ ನಾನೂ....ನಾನು.... ಅದನ್ನು ಇಂದು ಬೆಳಿಗ್ಗೆ ಕೆಳಕ್ಕೆ ಬೀಳಿಸಿ ಬಿಟ್ಟೆ....ಇಷ್ಟೂ ಹೊತ್ತು ಅದನ್ನು ಹೇಳದೆ ಮುಚ್ಚಿಟ್ಟೆ. ತಪ್ಪಾಯಿತಮ್ಮಾ ಕ್ಷಮಿಸು...." ಎನ್ನುತ್ತ ಭೋರೆಂದು ಅಳತೊಡಗಿದಳು.

ನನ್ನ ಸ್ನೇಹಿತೆಗೆ ತನ್ನ ಅಮೂಲ್ಯ ವಸ್ತು ನಷ್ಟ ಹೊಂದಿದ್ದಕ್ಕೆ ಬಹಳ ವ್ಯಥೆ ಆಯಿತು, ಸಹಜವೇ. ಆದರೆ ಮಗಳ ವರ್ತನೆಯಿಂದಾಗಿ ಇಷ್ಟೂ ಹೊತ್ತು ಎಲ್ಲರೂ ಪಟ್ಟ ಅನಗತ್ಯ ಶ್ರಮ ಮತ್ತು ಕಳವಳಕ್ಕಾಗಿ ಇನ್ನಷ್ಟು

ವ್ಯಥೆಯಾಯಿತು. "ನೀನು ಆರು ಜನರ ಒಂದು ಗಂಟೆಯ ಆಯುಸ್ಸನ್ನು ಹಾಳು ಮಾಡಿದೆ! ಒಟ್ಟು ಆರು ಗಂಟೆಯ ಕೆಲಸ! ಅರ್ಥಾತ್ ಒಬ್ಬನ ಇಡೀ ದಿನದ ಶ್ರಮ!"

ಬಿಕ್ಕಳಿಸುತ್ತಾ ಇದ್ದ ಹುಡುಗಿ ಸ್ವಲ್ಪ ಹೊತ್ತಿನ ಬಳಿಕ ಕಣ್ಣೀರೊರಸಿಕೊಳ್ಳುತ್ತಾ "ಅಮ್ಮಾ ಇಂದು ನಾನೊಂದು ಪಾಠ ಕಲಿತೆ —ಮುಂದೆ ಎಂದೆಂದೂ ಹೀಗೆ ಮಾಡಲೊಲ್ಲೆ —ಸತ್ಯವು ಅಪ್ರಿಯವೆಂದು ಮುಚ್ಚಿಡುವುದರಿಂದ ಇನ್ನಷ್ಟು ಕಷ್ಟನಷ್ಟಗಳು ಸಂಭವಿಸುತ್ತವೆಯೇ ವಿನಾ ಪ್ರಯೋಜನವಾಗದು."

**ಪ್ರಾಮಾಣಿಕತೆಯು ವಿಶ್ವಾಸವನ್ನು ಬೆಳೆಯಿಸುವುದು :**

ಒಬ್ಬ ಚಿಕ್ಕ ಹುಡುಗನಿಗೆ ರಕ್ತವನ್ನು ಕಂಡರೆ ತುಂಬಾ ಭಯವಿತ್ತು. ಅವನ ಹಲ್ಲು ಕೀಳಿಸಬೇಕೆಂದು ದಂತವೈದ್ಯರಲ್ಲಿಗೆ ಕರೆದೊಯ್ದರು. ವೈದ್ಯರೂ, ತಂದೆಯೂ, "ಹಲ್ಲು ಕೀಳುವಾಗ ರಕ್ತ ಬರುವುದಿಲ್ಲ" ಎಂದು ಹುಡುಗನನ್ನು ನಂಬಿಸಿದರು. ಆದರೆ ರಕ್ತ ಬಂದೇ ಬಿಟ್ಟಿತು! ಹುಡುಗನಿಗೆ ಬಹಳ ಸಿಟ್ಟು ಬಂತು. ಡಾಕ್ಟರ್ ಮಾತ್ರವೇ ಅಲ್ಲ, ತಂದೆಯೂ ಕೂಡ ಸುಳ್ಳಾಡಿ ಮೋಸಗೊಳಿಸಿದ್ದಕ್ಕಾಗಿ. ಈ ಹಳೆಯ ಕತೆಯನ್ನು ೮೦ ವರ್ಷದ ವೃದ್ಧ ಹೇಳಿದ. ಮುಂದುವರಿಸುತ್ತಾ—ಇಂದಿಗೂ ನಾನು ಆ ದಿನವನ್ನು ಮರೆತಿಲ್ಲ. ತಾಯಿ ತಂದೆಯರು ಮಗುವಿನ ಜತೆ ಎಂದೂ ಸುಳ್ಳಾಡಬಾರದು. ಆ ಸುಳ್ಳಿನಿಂದ ಮಗುವಿಗೆ ಒಳಿತಾಗುವುದೆಂಬ ನಂಬಿಕೆ ಅವರಲ್ಲಿದ್ದರೂ ಸಹ! ಸುಳ್ಳಿನ ಪರಿಣಾಮವಾಗಿ ಸ್ನೇಹಸಂಬಂಧಗಳು ಕ್ಷಯಿಸುತ್ತವೆಯಷ್ಟೇ ಅಲ್ಲ; ಶಾಶ್ವತವಾಗಿ ನಶಿಸಿಹೋಗಲೂಬಹುದು.

**ಪ್ರಾಮಾಣಿಕತೆಯು ಮನಃಶಾಂತಿಯನ್ನು ಗಳಿಸಿಕೊಡುವುದು :**

ನನ್ನ ಗುರುತಿನ ಅಮೆರಿಕನ್ ನಟಿಯೋರ್ವಳು ಪ್ರಥಮ ಬಾರಿ ಹಾಲಿವುಡ್ಡಿಗೆ ಭೇಟಿಕೊಟ್ಟಾಗ ತಾನು 'ಬ್ರಿಟಿಷ್ ಮಹಿಳೆ' ಎಂದು ತನ್ನ ಪರಿಚಯ ಹೇಳಿಕೊಂಡಳು. ಈ ಸುಳ್ಳಿನ ಪರದೆ ಹಚ್ಚಿ ತನ್ನ ಮೋಹಕತೆಗೆ, ಲಾವಣ್ಯಕ್ಕೆ ಮೆರುಗೇರಿಸಬಲ್ಲೆ. ಘನತೆ ಮೆರೆಯಿಸಬಲ್ಲೆ' ಎಂದು ಭಾವಿಸಿದ್ದಳು. ಆದರೆ ಮುಂದೆ ಅವಳ ಮನಃಶಾಂತಿ ಕದಡಿ ಹೋಯಿತು. ಆಕೆ ನನ್ನೊಡನೆ ಹೀಗೆಂದಳು —"ಅಬ್ಬಬ್ಬ ಅಂದಿನ ದಿನಗಳನ್ನು ನೆನೆಯುವುದೇ ಬೇಡ! ನಿದ್ದೆ ಬಾರದೆ ಒದ್ದಾಡುವ ರಾತ್ರಿಗಳು. ನನ್ನ ಸ್ಥಿತಿ ಭಯಾನಕವಾಗಿತ್ತು. ನಾನು ಏನಾಗಿಲ್ಲವೋ ಅದಾಗಬೇಕೆಂದು ನಟಿಸಿದ್ದೇ ಮುಂದೇನಾಯಿತು ಕೇಳಿ—

ಒಂದು ದಿನ ಒಂದು ಪ್ರಸಿದ್ಧ ದಿನಪತ್ರಿಕೆಯ ಅಂಕಣ ಬರಹಗಾರ ನನ್ನ ಬಳಿ ಬಂದು ಹೀಗೆ ಹೇಳಿದ—"ನಿನ್ನ ರಹಸ್ಯ ನನಗೆ ಗೊತ್ತಿದೆ. ಅದನ್ನು ಬಹಿರಂಗಪಡಿಸಲಿಕ್ಕೂ ಇದ್ದೇನೆ. ಆದರೆ ಯಥಾರ್ಥ ಸಂಗತಿಯೆಂದರೆ, ಜನರು ನಿನ್ನನ್ನು ಬ್ರಿಟನ್ನಿನವಳೆಂದು ನಂಬುತ್ತಾರೆ. ಹಾಗಿದ್ದ ಮೇಲೆ ನೀನು ನಟನಾಕುಶಲಳೆಂದು ಸಾಬೀತಾದ ಹಾಗೆಯೇ! ಆದರೆ ಇಂಥ ಕಪಟನಾಟಕವನ್ನು ಹೆಚ್ಚು ಕಾಲ ಮುಂದುವರಿಸುವುದು ನಿನ್ನಿಂದ ಸಾಧ್ಯವಾಗದು. ಏಕೆಂದರೆ ಮುಂದಿನ ನಿನ್ನ ವೃತ್ತಿಜೀವನದಲ್ಲಿ, ನಿನ್ನ ನಿಜವಾದ ನಟನಾಸಾಮರ್ಥ್ಯ ಪ್ರದರ್ಶನಕ್ಕೆ ನಿನ್ನ ಅಂತರಂಗದೊಳಗೆ ಶಕ್ತಿಯೇ ಉಳಿಯಬಾರದು" —ನನ್ನ ಮನಸ್ಸಿಗೆ ಕನ್ನಡಿ ಹಿಡಿದಂತಿತ್ತು. ಆತನ

ಈ ಎಚ್ಚರಿಕೆಯ ಮಾತುಗಳು! ನಾನು ಆ ಪತ್ರಕರ್ತನಿಗೆ ಜೀವಮಾನವೆಲ್ಲ ಕೃತಜ್ಞನಿರಬೇಕು ಮತ್ತು ಕೃತಜ್ಞನಾಗಿಯೇ ಇರುವೆ. ಪ್ರಯತ್ನಪೂರ್ವಕವಾಗಿಯಾದರೂ ಸತ್ಯವನ್ನು ಸ್ವೇಚ್ಛೆಯಿಂದ ಹೊರಗೆಡಹುವಂತಾದುದು ಅವನಿಂದಾಗಿಯೇ! ಪರಿಣಾಮವಾಗಿ ನನ್ನ ಆತ್ಮವನ್ನು ಸದಾ ಕಾಲ ಕೆಣಕಿ ಚುಚ್ಚುತ್ತಿದ್ದ ಸುಳ್ಳಿನ ನರಕಬಾಧೆಯಿಂದ ಮುಕ್ತಿದೊರೆಯಿತು."

* * *

ಆದರೆ ಪ್ರಾಮಾಣಿಕತೆಯ ಒಳಹೊರಗುಗಳ ಬಗ್ಗೆ ಅದರ ಅರ್ಥವ್ಯಾಪ್ತಿಯ ಬಗ್ಗೆ ಒಂದು ಎಚ್ಚರಿಕೆ! ಸತ್ಯ ಭಾಷಣವನ್ನು ತೆಗಳಲಿಕ್ಕಾಗಿಯೋ ಅಥವಾ ವ್ಯಗ್ರಗೊಳಿಸಲಿಕ್ಕಾಗಿಯೋ ಉಪಯೋಗಿಸಿಕೊಂಡಾಗ ಮತ್ತು ಅಂಥ ದುರುದ್ದೇಶವಿಲ್ಲದಿದ್ದ ಸಂದರ್ಭದಲ್ಲಿ ಕೂಡ ಸೌಜನ್ಯವಿಲ್ಲದ, ಬರ್ಬರ ರೀತಿಯ ಮರ್ಮಭೇದಕ ನುಡಿಯು ಸತ್ಯವಾಕ್ಯವೇ ಇದ್ದರೂ, ಪ್ರಾಮಾಣಿಕತೆಗೆ ಹೋಲಿಸಲಾಗದು.

ಒಬ್ಬ ಧರ್ಮ ಗುರುಗಳು ಅದನ್ನು ಈ ರೀತಿ ವಿವರಿಸಿದರು—ಮುನ್ನುಗ್ಗಿ ಮುಖಕ್ಕೆ ರಾಚುವಂತೆ ಲೋಪದೋಷಗಳನ್ನು ಎತ್ತಿ ನುಡಿಯುವುದು 'ಪ್ರಾಮಾಣಿಕತೆ' ಎಂಬ ಸದ್ಗುಣದ ಸಾಲಿಗೆ ಸೇರುವುದಿಲ್ಲ. ಒಂದು ಸಣ್ಣ ಉದಾಹರಣೆ ತೆಗೆದುಕೊಳ್ಳಿ. ನೀವು ಕೊಂಡುತಂದ ಹೊಸ ತೊಡುಗೆ ಅಥವಾ ಒಂದು ಕುರ್ಚಿಯೇ ಇರಬಹುದು. ಅದರ ಬಗ್ಗೆ ಏನಾದರೂ ಕೊರತೆ, ಕೊಂಕು ಹೇಳಿ ತಮಗೆ ತಾವೇ ತೃಪ್ತಿಪಟ್ಟುಕೊಳ್ಳುವ ಹಲವರಿದ್ದಾರೆ.

ಇನ್ನು ಕೆಲವರು—"ಇತರರು ನಿಮ್ಮ ಬಗ್ಗೆ, ನಿಮ್ಮ ಸಾಧನೆ, ಸಾಮಗ್ರಿಗಳ ಬಗ್ಗೆ ತಳೆಯುವ ಕೆಟ್ಟ ಮನೋಭಾವವನ್ನು ಮುಚ್ಚಿಡದೆ ನಿಮಗೆ ಯಥಾಕಾಲದಲ್ಲಿ ತಿಳಿಸುವವನೇ ನಿಮ್ಮ ನಿಜವಾದ ಗೆಳೆಯನೆಂದೂ ಅಭಿಪ್ರಾಯ ಪಡುತ್ತಾರೆ.

ಧರ್ಮಗುರು ಮುಂದುವರಿಸುತ್ತ ಹೀಗೆಂದರು—ನನ್ನ ವೃತ್ತಿಜೀವನದಲ್ಲಿ ಎಷ್ಟೋವೇಳೆ ಕರ್ಣಕಠೋರ ಸತ್ಯವನ್ನು ನುಡಿಯಲೇಬೇಕಾಗಿ ಬರುವುದಿದೆ. ಆದರೆ ಅದನ್ನು ಪ್ರೀತಿಯಿಂದ ಸಹವೇದನೆಯಿಂದ ತಿಳಿಸುತ್ತಿರುವೆನೇ ಇಲ್ಲವೇ ಎಂದು ನನಗೆ ನಾನೇ ಪ್ರಶ್ನಿಸಿ ಖಚಿತಪಡಿಸಿಕೊಂಡು ಹೇಳತೊಡಗುತ್ತೇನೆ. ನಾನು ಅನುಸರಿಸುವ ಸೂತ್ರ ಅರ್ಥಾತ್ ನಿಬಂಧನೆ—ಹೀಗಿದೆ—ಇದನ್ನು ಯಾರೇ ಆದರೂ ಉಪಯೋಗಿಸಿಕೊಳ್ಳಲು ಸಾಧ್ಯವಿದೆ—ಯಾವುದೇ ವಿಷಯವನ್ನು ಮುಚ್ಚಿಡುವುದರಿಂದ ಎದೆ ಬಿರಿದು ಚೂರಾದಂತೆ ನೋವೆನಿಸುತ್ತಿದ್ದರೆ, ನುಡಿಯದೆ ನಿರ್ವಾಹವಿಲ್ಲವೆನಿಸಿದರೆ ಅಪ್ರಿಯವಾಗಿದ್ದರೂ, ನೋವು ಕೊಡುವುದಾಗಿದ್ದರೂ ಆ ಸತ್ಯವನ್ನು ಹೊರಗೆಡಹುತ್ತೇನೆ. ಅಂತೆಯೇ, ನಾನೊಬ್ಬ ಮಹಾ ನೀತಿವಂತ, ಶ್ರೇಷ್ಠ ವ್ಯಕ್ತಿ ಎಂಬೆಲ್ಲ ಅಭಿಪ್ರಾಯ ಮೂಡಿಸಲಿಕ್ಕಾಗಿ, ಇತರರ ಹೃದಯವನ್ನು ಘಾಸಿಗೊಳಿಸುವ ಸತ್ಯವನ್ನು ಬಿತ್ತರಿಸಿ, ಪ್ರಾಮಾಣಿಕನೆಂಬ ಬಿರುದು ಪಡೆಯಲೊಲ್ಲೆ ಅಥವಾ ನನಗೆ ಮೆಚ್ಚುಗೆಯಾಗದವರನ್ನು ಶಿಕ್ಷಿಸಲಿಕ್ಕಾಗಿ ನೋಯಿಸುವ ಕೆಲಸವನ್ನೂ ಮಾಡಲೊಲ್ಲೆ."

ಇವೆಲ್ಲ ವಿಚಾರಗಳಿಂದ ತಿಳಿದುಕೊಳ್ಳಬೇಕಾದ ಅಂಶವೆಂದರೆ—ಕಾಲಕಾಲಕ್ಕೆ ನಾವು ಪ್ರತಿಯೊಬ್ಬರೂ, ಹಿನ್ನೋಟ

ಹಿಂಸಿ ನಮ್ಮ ನಿತ್ಯ ಜೀವನ ಚರ್ಯೆಗಳನ್ನು ಅವಲೋಕಿಸಬೇಕು. ಸಂಭಾವಿತನೆನಿಸಿ ಕೊಳ್ಳುವ ಸೋಗಿಗಾಗಿಯೋ, ಧಾರ್ಷ್ಟ್ಯ ದಿಂದಲೋ ಪ್ರಭಾವಿತರಾಗಿ ವಿವಿಧ ಮಾರ್ಗೋಪಾಯಗಳನ್ನು ಪ್ರಯೋಗಿಸುತ್ತ ಇತರರನ್ನು ಪೇಚಿಗೆ ಸಿಲುಕಿಸುತ್ತ, ಅವರ ಮಾತ್ರವಲ್ಲ ಸ್ವ-ಕಾಲವನ್ನು ಸ್ವ-ಶಕ್ತಿ ಯನ್ನು ಕೂಡ ವ್ಯರ್ಥಗೊಳಿಸುತ್ತಿದ್ದೇವೆಯೋ, ಹೇಗೆ? ಎಂಬುದನ್ನು ಪರೀಕ್ಷಿಸಿಕೊಳ್ಳುತ್ತ, ನಮ್ಮೊಳಗಿನ ಹುರುಳನ್ನು ಅರಿಯುತ್ತಿರ ಬೇಕು.

ಈ ತೆರನಾಗಿ ಆತ್ಮ ನಿರೀಕ್ಷೆ ಮಾಡುತ್ತ ಮಾಡುತ್ತ ಬಂದಂತೆ, ನನಗೆ ಪ್ರಾಮಾಣಿಕತೆಯ ಹಲವು ವಿವರಗಳು ಅರ್ಥವಾದುವು. ಪ್ರಾಮಾಣಿಕತೆ ಎಂಬುದು ಒಂದು ಪ್ರತಿಭೆ ಅಥವಾ ಬುದ್ಧಿಬಲವಲ್ಲ, ಕಲೆಗಾರಿಕೆಯೂ ಅಲ್ಲ; ಶಕ್ತಿ ಸಾಮರ್ಥ್ಯವೂ ಅಲ್ಲ. ಅದು ಕೇವಲ ಅಭ್ಯಾಸ ಬಲ. ಅದಕ್ಕೆ ಬೇಕಾಗುವುದು ಏಕಾಗ್ರತೆ, ಪರಿಶ್ರಮ, ಸತ್ಯನಿಷ್ಠೆ ಅಹಂಕಾರವಿಲ್ಲದ, ಸರಳ ಸತ್ಯತೆ, ನಮ್ಮ ಸ್ವಭಾವದೊಳಗೇ ಪ್ರಾಮಾಣಿಕತೆ ಸೇರಿಹೋಗಬೇಕು. ನಿರಂತರ ಅಭ್ಯಾಸ ದಿಂದ ಗಳಿಸಿಕೊಳ್ಳಬೇಕು. ಅದಕ್ಕೆ ಸಂಯಮ, ದೃಢಸಂಕಲ್ಪ, ಪ್ರಯತ್ನಶೀಲತೆ ಮುಪ್ಪುರಿಯಾಗಿ ಸೇರುವ ಅಗತ್ಯವಿದೆ. ಒಮ್ಮೆ ನಾವು ಪ್ರಾಮಾಣಿಕತೆಯ ಅಚ್ಚಿನಲ್ಲಿ ಎರಕಗೊಂಡವಾದರೆ, ಪ್ರಾಮಾಣಿಕತೆಯೇ ಜೀವನದ ತಿರುಳಾಗಿಬಿಟ್ಟರೆ, ಅದಕ್ಕೆ ತಕ್ಕ ಪುರಸ್ಕಾರ, ಬಹು ಮಾನ್ಯತೆ, ಎಲ್ಲಕ್ಕಿಂತ ಮಿಗಿಲಾಗಿ ಸ್ವಸ್ಥಚಿತ್ತವು ನಮ್ಮದಾಗುವು ದಲ್ಲದೆ, ಎಲ್ಲರ ವಿಶ್ವಾಸ, ಪ್ರೀತಿಗಳಿಗೆ ಪಾತ್ರ ರಾಗುವೆವು. ಲೋಕದಲ್ಲಿ ಇದಕ್ಕಿಂತ ದೊಡ್ಡ ಗಳಿಕೆ ಇನ್ನೇನಿದೆ?

* * *

**ಸುಭಾಷಿತ :**

ಸತ್ಯಂ ಬ್ರೂಯಾತ್। ಪ್ರಿಯಂ ಬ್ರೂಯಾತ್।
ನಬ್ರೂಯಾತ್ ಸತ್ಯಮಪ್ರಿಯಂ॥

ಅರ್ಥಾತ್ —

ಸತ್ಯವನ್ನೇ ನುಡಿಯಿರಿ। ಪ್ರಿಯವಾಗಿ ನುಡಿಯಿರಿ।
ಸತ್ಯವನ್ನು ಅಪ್ರಿಯವಾಗಿ ನುಡಿಯದಿರಿ॥

—ಸೇಡಿಯಾಪು

## ಅಹಿಂಸೆ

ಅಹಿಂಸೆ ಅತುಚ್ಛ ಭಾವನೆಯಿಂದ ಕೂಡಿದುದು. ಇದು ಧೈರ್ಯಶಾಲಿಗಳ ಅಸ್ತ್ರವೇ ಹೊರತು, ಹೇಡಿಗಳಿಗಲ್ಲ.

ಅಹಿಂಸೆ ಘಾಸಿ ಮಾಡುವ ಅಥವಾ ಕೊಲ್ಲುವ ಮನೋಭಾವವನ್ನು ಮೂಲೋತ್ಪಾಟನೆ ಮಾಡುತ್ತದೆ.

ಅಹಿಂಸೆ ವಿಶ್ವದ ಮೂಲತತ್ವಗಳಲ್ಲಿ ಒಂದು. ಅದನ್ನು ಯಾವ ಶಕ್ತಿಯೂ ಅಳಿಸಿ ಹಾಕಲಾಗುವುದಿಲ್ಲ.

—ಗಾಂಧೀಜಿ

# ತಂಬಾಕಿನ ಅಗ್ರಮಾನ್ಯ ವೈರಿ

ಎಸ್. ಶ್ರೀಧರಮೂರ್ತಿ
ಮುಕ್ತ ವಿಶ್ವವಿದ್ಯಾನಿಲಯ
ಮೈಸೂರು–೫೭೦೦೦೬

## ಏಶಿಯಾದಲ್ಲಿ ಧೂಮಪಾನ ಆಧಿಕ್ಯವನ್ನು ತಡೆದ ಏಕಾಂಗಿ ಮಹಿಳಾ ಡಾಕ್ಟರ್

ಲೊರೇನ್ ಚೇಂಬರ್ಸ್ ಮತ್ತು ಜಸ್ಸಿತ ಮ್ಯಾನ್ಸ್‌ಫೀಲ್ಡ್ ಇಬ್ಬರೂ ಹದಿಹರೆಯದ ಶಾಲಾ ಮಕ್ಕಳು. ಅವರು ಒಂದು ದಿನ ಹಾಂಗ್‌ಕಾಂಗ್ ನಗರದ ಪೆನಿನ್‌ಸೂಲ ಹೋಟೆಲ್‌ನಲ್ಲಿರುವ ಡೇವಿಡ್‌ಆಫ್ ಸಿಗಾರ್ ಅಂಗಡಿಗೆ ತಮ್ಮ ಶಾಲಾ ಯೂನಿಫಾರಂ ಧರಿಸಿಕೊಂಡೇ ಹೋದರು. "ನಿಮ್ಮ ಅಂಗಡಿಯಲ್ಲಿ ಕೋಪೆನ್ ಹೇಗೆನ್ ಇದೆಯೆ" ಎಂದು ಜಸ್ಸಿತ ಕೇಳಿದ. ಕೋಪೆನ್ ಹೇಗೆನ್ ಎಂದರೆ ಜಗಿಯುವ ತಂಬಾಕು. ಅಂಗಡಿಯಾತ ಈ ಹುಡುಗರಿಗೆ ಒಂದು ಪ್ಯಾಕೆಟ್ ಜಗಿಯುವ ಹೊಗೆಸೊಪ್ಪನ್ನು ನೀಡಿ "ಅಧಿಕವಾಗಿ ಸೇವಿಸಬೇಡಿ" ಎಂದು ಕಿವಿಮಾತು ಹೇಳಿದ.

ಜಸ್ಸಿತ ತಂಬಾಕಿನ ಪ್ಯಾಕೆಟನ್ನು ತನ್ನ ಸ್ಕೂಲ್ ಚೀಲದಲ್ಲಿರಿಸಿಕೊಂಡ. ಲೊರೇನ್ ೧೬.೫೦ ಹಾಂಗ್‌ಕಾಂಗ್ ಡಾಲರ್ ನೀಡಿದಳು (ಒಂದು ಹಾಂಗ್‌ಕಾಂಗ್ ಡಾಲರ್ ಎಂದರೆ ನಮ್ಮ ರೂ. ೫.೭೦ಕ್ಕೆ ಸಮ.)

ಆ ಮೇಲೆ ಈ ವಿದ್ಯಾರ್ಥಿಗಳು ಹೋಟೆಲ್‌ನ ಹಾಲ್‌ನಲ್ಲಿ ತಮಗಾಗಿ ಕಾಯುತ್ತಿದ್ದ ಬ್ರಿಟಿಷ್ ವೈದ್ಯೆ ಬಳಿ ಬಂದರು. "ನಿಮಗೆ ತಂಬಾಕು ಕೊಟ್ಟನೇ" ಎಂದು ಆಕೆ ಕೇಳಿದಳು.

ಜಸ್ಸಿತ ತನ್ನ ಸ್ಕೂಲ್ ಬ್ಯಾಗ್‌ನಿಂದ ತಂಬಾಕಿನ ಪಾಕೆಟನ್ನು ನೀಡಿದ ಜೊತೆಗೆ ಪುಟ್ಟ ಟೇಪ್ ರೆಕಾರ್ಡರನ್ನು ತೆಗೆದುಕೊಟ್ಟ. ಆ ಬ್ರಿಟಿಷ್ ವೈದ್ಯೆ ಜುಡಿತ್ ಮ್ಯಾಕೆ ರೆಕಾರ್ಡರಲ್ಲಿದ್ದ ಟೇಪನ್ನು ಆಲಿಸಿದಳು. ಅಂಗಡಿಯಾತ ಹಾಗೂ ಮಕ್ಕಳ ನಡುವೆ ನಡೆದ ಮಾತುಕತೆ ಅಲ್ಲಿ ದಾಖಲಾಗಿತ್ತು.

ಭುಗಿಲೆದ್ದ ವಿವಾದವೊಂದನ್ನು ಸಂಹರಿಸಲು ಈ ರುಜುವಾತು ಒಂದೇ ಮ್ಯಾಕೆಗೆ ಸಾಕಾಯಿತು. ಆ ಸಮಯದಲ್ಲಿ ಬೃಹತ್ ಹೊಗೆಸೊಪ್ಪು ಕಂಪನಿಗಳು ಧೂಮರಹಿತ ಜಗಿಯುವ ತಂಬಾಕನ್ನು ಆಗಿನ ಬ್ರಿಟಿಷ್ ಕಾಲೋನಿಯಾಗಿದ್ದ ಹಾಂಗ್‌ಕಾಂಗ್‌ನ ಉದ್ದಗಲಕ್ಕೆ ಸಮೂಹ ಮಾರುಕಟ್ಟೆಗೆ ನುಗ್ಗಲು ಭಾರೀ ಪ್ರಯತ್ನ ನಡೆಸಿದ್ದರು. ಹಾಂಗ್‌ಕಾಂಗ್ ಶಾಸಕಾಂಗ ಮಂಡಳಿಯ ಅನೇಕ ಸದಸ್ಯರು ಇದನ್ನು ಪ್ರತಿಭಟಿಸುತ್ತಿದ್ದರು. ಜಗಿಯುವ ತಂಬಾಕಿನ ಅಭ್ಯಾಸದಿಂದ ಯುವಕ ಯುವತಿಯರು ಧೂಮಪಾನ ಚಟಕ್ಕೆ ದಾಸರಾಗುವ ಸಂಭವವಿದೆ ಎಂದು ಅವರು ವಾದಿಸುತ್ತಿದ್ದರು. ಆದರೆ ತಂಬಾಕಿನ ಕಂಪನಿಯವರು ಇದು ಸಾಧ್ಯವೇ ಇಲ್ಲ. ಜಗಿಯುವ ತಂಬಾಕನ್ನು ನಾವು ಮಕ್ಕಳಿಗೆ ನೀಡುವುದೇ ಇಲ್ಲ ಎಂದು ಘೋಷಿಸಿದ್ದರು.

ಜೂನ್ ೨೦೦೦ ದ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾಗಿರುವ "ಟೊಬಾಕೋಸ್ ನಂ 1 ಎನಿಮಿ" ಎಂಬ ಸುಸಾನ್ ಕೀಟಿಂಗ್ ಅವರ ಲೇಖನದ ಅನುವಾದ.

ಬ್ರಿಟಿಷ್ ವೈದ್ಯೆ ಮ್ಯಾಕೆಗೆ ಹೊಗೆಸೊಪ್ಪು ಕಂಪನಿಯವರೇ ಸುಳ್ಳು ಹೇಳುತ್ತಿದ್ದಾರೆ ಎಂದು ಖಚಿತವಾಗಿ ತಿಳಿದಿತ್ತು. ಅದನ್ನು ರುಜುವಾತುಪಡಿಸಲು ತಾನು ಪಡೆದ ಟೇಪಿನ ಪ್ರತಿಯನ್ನು ಶಾಸಕಾಂಗ ಮಂಡಳಿಗೆ ಸಲ್ಲಿಸಿದಳು. "ಎಲ್ಲ ಅಂಗಡಿಗಳಲ್ಲಿ ಜಗಿಯುವ ತಂಬಾಕನ್ನು ಮಕ್ಕಳಿಗೆ ಅಡೆತಡೆಯಿಲ್ಲದೆ ಮಾರುತ್ತಿರುವಾಗ, ಹೊಗೆಸೊಪ್ಪು ಕಂಪನಿಯವರು ಈ ವಸ್ತುವನ್ನು ಮಕ್ಕಳ ಕೈಗೆ ಸಿಗದ ಹಾಗೆ ವ್ಯವಸ್ಥೆ ಮಾಡುತ್ತೇವೆ ಎಂದು ಹೇಗೆ ತಾನೆ ಭರವಸೆ ನೀಡುತ್ತಾರೆ" ಎಂದು ಪ್ರಶ್ನಿಸಿದಳು.

ಇವಳ ಈ 'ಕುಟುಕು' ಕಾರ್ಯಾಚರಣೆ ಅಗಾಧವಾದ ಜನಾಭಿಪ್ರಾಯವನ್ನು ಸೃಷ್ಟಿಸಿತು. ಶಾಸಕಾಂಗವಿಡೀ ಒಮ್ಮತದಿಂದ ಹೊಗೆಸೊಪ್ಪು ಕಂಪನಿಗಳ ವಿರುದ್ಧವಾಯಿತು. ಹಾಂಗ್‌ಕಾಂಗ್‌ನ ಆದ್ಯಂತ ಜಗಿಯುವ ತಂಬಾಕನ್ನು ಕಾನೂನುಬದ್ಧವಾಗಿ ನಿಷೇಧಿಸಲಾಯಿತು.

ಈ ಘಟನೆ ನಡೆದದ್ದು ೧೯೮೭ ರಲ್ಲಿ. ರಶಿಯಾದ ಅಗ್ರಮಾನ್ಯ ಧೂಮಪಾನ ವಿರೋಧ ಕಾರ್ಯಕರ್ತೆಯಾದ ಜುಡಿತ್ ಮ್ಯಾಕೆ ಹೇಗೆ ಅತ್ಯಂತ ಬಲಿಷ್ಠ ಹೊಗೆಸೊಪ್ಪು ಉದ್ಯಮದ ವಿರುದ್ಧ ಹೋರಾಡುತ್ತಿದ್ದಾಳೆ ಎನ್ನುವುದಕ್ಕೆ ಈ ಘಟನೆ ಒಂದು ನಿದರ್ಶನ.

ಆದರೆ ಈಕೆ ಬೀಡಿ, ಸಿಗರೇಟ್ ಮತ್ತು ಸಿಗಾರ್‌ಗಳ ಮೇಲೆ ನಿಷೇಧ ಹೇರಿ ಎಂದು ಪ್ರತಿಪಾದಿಸುವುದಿಲ್ಲ. ಸೂಕ್ತವಾದ ಆರೋಗ್ಯ ಕ್ರಮಗಳು ಹಾಗೂ ಯುಕ್ತವಾದ ಶಿಕ್ಷಣದ ಮೂಲಕ ಈ ಅಪಾಯಕಾರಿ ತರಹದ ಬಳಕೆಯನ್ನು ಕಡಿಮೆ ಮಾಡಬಹುದು ಎನ್ನುವುದು ಅವಳ ನಿಲುವಾಗಿದೆ.

ಧೂಮಪಾನದ ಅಪಾಯಗಳು ಭಯಂಕರವಾದವು ಎಂಬ ಅವಳ ನಂಬಿಕೆ ಅಚಲವಾದದ್ದು. ಈ ದೃಢನಂಬಿಕೆಯೇ ಅವಳನ್ನು ಹೊಗೆಸೊಪ್ಪು ಕಂಪನಿಗಳ ಕಡುವೈರಿಯನ್ನಾಗಿಸಿದೆ.

ಹಾಂಗ್‌ಕಾಂಗ್‌ನ ಧೂಮಪಾನ ಹಾಗೂ ಆರೋಗ್ಯ ಮಂಡಳಿಯ ಅಧ್ಯಕ್ಷ ಅಂತೋಣಿ ಜೆ. ಹೆಡ್ಲಿಗೆ ಇವಳ ಬಗ್ಗೆ ಅಪಾರ ಗೌರವ. "ಹೊಗೆಸೊಪ್ಪು ಕಂಪನಿಗಳ ಬಲವತ್ತರ ಒತ್ತಡಕ್ಕೂ ಸೊಪ್ಪು ಹಾಕದ, ಮಣಿಯದ ಈಕೆಯ ಅದ್ಭುತ ಧೈರ್ಯದಿಂದಾಗಿ ಸಾರ್ವಜನಿಕ ಆರೋಗ್ಯದ ಮೇಲೆ ಅಗಾಧವಾದ ಹಿತಕಾರಿ ಪರಿಣಾಮವಾಗಿದೆ" ಎನ್ನುತ್ತಾನೆ.

ಈ ಬಗೆಯ ವೃತ್ತಿ ತನ್ನ ಪ್ರವೃತ್ತಿಯಾಗುತ್ತದೆ ಎಂದು ಆಕೆ ಹಾಂಗ್‌ಕಾಂಗ್‌ಗೆ ಬಂದಾಗ ಅವಳಿಗೇ ಗೊತ್ತಿರಲಿಲ್ಲ. ೧೯೬೭ ರಲ್ಲಿ ತನ್ನ ಗಂಡ ಜಾನ್ ಜೊತೆಗೆ ಬಾಳಲು ಇಂಗ್ಲೆಂಡಿನಿಂದ ಹಾಂಗ್‌ಕಾಂಗ್‌ಗೆಬಂದಳು. ನಂತರ ಹಾಂಗ್‌ಕಾಂಗ್‌ನ ಆಸ್ಪತ್ರೆಗಳಲ್ಲಿ ರೋಗಿ ಶುಶ್ರೂಷೆಯನ್ನು ಆರಂಭಿಸಿದಳು. ಅವಳ ರೋಗಿಗಳಲ್ಲಿ ಅನೇಕರು ಕಡುಬಡವರು. ಅವರಿಗೆ ಸುಖ ನೀಡುವ ವಿಲಾಸವೆಂದರೆ ಧೂಮಪಾನ ಮಾತ್ರವೇ ಆಗಿತ್ತು. ಆದರೆ ಅವರ ಈ ಹವ್ಯಾಸ ಭಯಾನಕ ಪ್ರತೀಕಾರವೆಸಗುತ್ತಿತ್ತು. ಲೆಕ್ಕವೇ ಇಲ್ಲದಷ್ಟು ಶ್ವಾಸಕೋಶ ಕ್ಯಾನ್ಸರ್ ಮತ್ತು ಹೃದಯ ರೋಗಗಳು ಮ್ಯಾಕೆ ಇದೆಲ್ಲವನ್ನು ಗಮನಿಸಿ ಗಮನಿಸಿ ಆತಂಕಗೊಂಡಳು.

ಧೂಮಪಾನ ಉಂಟುಮಾಡುವ ಕೆಡುಕುಗಳ ಬಗ್ಗೆ ಮ್ಯಾಕೆ ಮಾತನಾಡಲಾರಂಭಿಸಿ

ದಳು. ತನ್ನ ರೋಗಿಗಳಿಗೆ ಮನದಟ್ಟಾಗುವಂತೆ ವಿವರಿಸತೊಡಗಿದಳು. "ದಿ ಸೌತ್ ಚೈನ ಮಾರ್ನಿಂಗ್ ಪೋಸ್ಟ್" ಎಂಬ ನಿಯತಕಾಲಿಕದಲ್ಲಿ ೧೯೭೦ರ ದಶಕದಲ್ಲಿ ಒಂದು ವೈದ್ಯ ಅಂಕಣವನ್ನು ಬರೆಯತೊಡಗಿದಳು. ಅಲ್ಲಿಯೂ ಧೂಮಪಾನದ ಅನಿಷ್ಟದ ಬಗ್ಗೆ ಕಟುವಾಗಿ ಬರೆದಳು. ಕ್ಯಾನ್ಸರ್, ಶ್ವಾಸಕೋಶ ತೊಂದರೆಗಳು, ಹೃದ್ರೋಗಗಳು ಮತ್ತು ಇತರ ಅನೇಕ ರೋಗಗಳಿಗೂ ಧೂಮಪಾನಕ್ಕೂ ನಿಕಟವಾದ ಸಂಬಂಧವಿದೆ ಎಂಬ ಅಂಶ ಅಮೆರಿಕ ಮತ್ತು ಯೂರೋಪ್ ನಾಡುಗಳ ಜನರಿಗೆ ಸ್ಪಷ್ಟವಾಗಿ ಗೊತ್ತಿದೆ. ಆದರೆ ಹಾಂಗ್‌ಕಾಂಗ್ ಮತ್ತು ಏಶಿಯಾ ನಾಡುಗಳ ಜನರಿಗೆ ಈ ಅಂಶ ಇನ್ನೂ ಸ್ಪಷ್ಟವಾಗಿ ಅರಿವಾಗಿಯೇ ಇಲ್ಲ ಎಂದು ಪ್ರತಿಪಾದಿಸತೊಡಗಿದಳು.

ಅವಳ ಧ್ವನಿ ಅರಣ್ಯರೋದನವಾಗಿತ್ತು. ಹಾಂಗ್‌ಕಾಂಗ್‌ನ ವೈದ್ಯ ಸಮುದಾಯದಲ್ಲಿ ಕೆಲವೇ ಕೆಲವರು ಮಾತ್ರ ಈ ಬಗ್ಗೆ ಮಾತನಾಡುತ್ತಿದ್ದರು. ಧೂಮಪಾನದ ಬಗ್ಗೆ ಯಾವುದೇ ಬಗೆಯ ಸಾರ್ವತ್ರಿಕ ನಿಯಂತ್ರಣ ಇರಲಿಲ್ಲ.

ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಎಲ್ಲ ಸಿಗರೇಟ್ ಪ್ಯಾಕ್‌ಗಳ ಮೇಲೆ ಎಚ್ಚರಿಕೆಯ ಲೇಬಲ್‌ಗಳನ್ನು ಕಡ್ಡಾಯವಾಗಿ ಹಾಕಲೇಬೇಕೆಂಬ ನಿಯಮವಿತ್ತು. ಆದರೆ ಸಿಗರೇಟ್ ಉತ್ಪಾದಕರು ಅದೇ ಸಿಗರೇಟ್ ಪ್ಯಾಕ್‌ಗಳನ್ನು ಯಾವುದೇ ಮುದ್ರಿತ ಎಚ್ಚರಿಕೆಯಿಲ್ಲದೆ ಏಶಿಯಾದ ನಾಡುಗಳಿಗೆ ರಫ್ತು ಮಾಡುತ್ತಿದ್ದರು.

ಬ್ರಿಟಿಷ್ ವೈದ್ಯೆ ಮ್ಯಾಕೆಗೆ ತನ್ನ ವೃತ್ತಿಯನ್ನು ನಿರ್ವಹಿಸಬೇಕಿತ್ತು. ಜೊತೆಗೆ ತನ್ನ ಇಬ್ಬರು ಎಳೆಯ ಗಂಡು ಮಕ್ಕಳನ್ನು ಪೋಷಿಸಬೇಕಿತ್ತು. ಆದರೂ ಅವಳು ಧೂಮಪಾನ ವಿರೋಧಿ ಚಳುವಳಿಗೆ ಧುಮುಕಿದಳು. ಶಾಸನಾಂಗಕ್ಕೆ ತನ್ನ ವೈದ್ಯಕೀಯ ತಜ್ಞ ಸಲಹೆಗಳನ್ನು ನೀಡತೊಡಗಿದಳು. ಸಿಗರೇಟ್ ಪ್ಯಾಕ್‌ಗಳ ಮೇಲೆ ಎಚ್ಚರಿಕೆಯ ಮಾತುಗಳನ್ನು ಮುದ್ರಿಸಲೇಬೇಕೆಂದು ಹಠ ಹಿಡಿದಳು. "ನಾವು ಕೇಳುವ ಕನಿಷ್ಠ ಬೇಡಿಕೆ ಇದು. ಅಂತರ್ರಾಷ್ಟ್ರೀಯ ತಂಬಾಕು ಕಂಪನಿಗಳು ತಮ್ಮ ಸ್ವಂತ ನಾಡಿನಲ್ಲಿ ಪಾಲಿಸುವ ನಿಯಮ ನಿಬಂಧನೆಗಳನ್ನು ಇಲ್ಲಿಯೂ ಇತರ ನಾಡುಗಳಲ್ಲಿಯೂ ಪರಿಪಾಲಿಸಲೇಬೇಕಾದದ್ದು ಕಡ್ಡಾಯ" ಎಂದು ವಾದಿಸತೊಡಗಿದಳು.

ಸಿಗರೇಟ್ ಪ್ಯಾಕ್‌ಗಳ ಮೇಲೆ ಎಚ್ಚರಿಕೆ ತಿಳುವಳಿಕೆಯನ್ನು ಮುದ್ರಿಸಲೇಬೇಕೆಂಬ ೧೯೮೩ರ ಕಾನೂನು ಕರಡು ಸಿದ್ಧಗೊಳಿಸಲು ಮ್ಯಾಕ್ ನೆರವಾದಳು. ಸಾರ್ವಜನಿಕ ಪ್ರದೇಶಗಳಲ್ಲಿ ಧೂಮಪಾನರಹಿತ ವಲಯಗಳನ್ನು ರೂಪಿಸುವ ಕಾರ್ಯಕ್ರಮದಲ್ಲಿಯೂ ಇವಳ ಕೊಡುಗೆ ಅಪಾರ.

ತಂಬಾಕು ಕಂಪೆನಿಗಳು ಈ ಕ್ರಮಗಳಿಂದ ಬಗ್ಗಲಿಲ್ಲ, ಬೆಚ್ಚಲಿಲ್ಲ. ಫಿಲಿಪ್ ಮಾರಿಸ್ ಸಿಗರೇಟ್ ಮತ್ತು ಇತರ ಬ್ರಾಂಡ್ ಸಿಗರೇಟ್ ಕಂಪನಿಗಳು ಸ್ಥಳೀಯ ಮಾರುಕಟ್ಟೆಗೆ ಬಿಡುಗಡೆ ಮಾಡುವ ಸಿಗರೇಟ್‌ಗಳಲ್ಲಿ ನಿಕೋಟಿನ್ ಮತ್ತು ಟಾರ್ ಪ್ರಮಾಣವನ್ನು ಅಧಿಕಗೊಳಿಸತೊಡಗಿದರು. ಹಾಗಾಗಿ ಸಿಗರೇಟ್‌ನ ಮಾದಕತೆ ಹೆಚ್ಚಿಸತೊಡಗಿತ್ತು. ವ್ಯಸನಿಗಳು ಅದನ್ನು ಬಿಡಲಾರದಾದರು. ಸಿಗರೇಟ್‌ಗಳು ಹೆಚ್ಚು ವಿಷಮಯವಾದವು.

೧೯೮೦ ರಲ್ಲಿ ಹಾಂಗ್ ಕಾಂಗ್ ಗ್ರಾಹಕ ಮಂಡಳಿ ನೇಮಿಸಿದ ಆಯೋಗದ ವರದಿ ಕಣ್ತೆರೆಸುವಂತಿತ್ತು. "ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಮಾರಾಟವಾಗುವ ಎಲ್ಲ ಬ್ರಾಂಡ್ ಸಿಗರೇಟುಗಳಲ್ಲಿನ ಸರಾಸರಿಗಿಂತ ಹಾಂಗ್‌ಕಾಂಗ್ ಪ್ರದೇಶದಲ್ಲಿ ಮಾರಾಟವಾಗುವ ಸಿಗರೇಟ್‌ಗಳಲ್ಲಿ ಶೇ. ೭೩ ಟಾರ್ ಹಾಗೂ ಶೇ ೫೬ ನಿಕೋಟಿನ್ ಅಧಿಕವಾಗಿದೆ ಎಂದು ಗಮನಿಸಲಾಗಿದೆ".

ವ್ಯಾಕೆ ಮತ್ತು ಇತರ ತಂಬಾಕು ವಿರೋಧಿಗಳನ್ನು ತಂಬಾಕು ಕಂಪನಿಗಳು ನಿರ್ಲಕ್ಷಿಸಿ ಅವರು ಜನಸಾಂಗತ್ಯ ಬದುಕನ್ನು ಅರ್ಥಮಾಡಿಕೊಳ್ಳದ ಹುಚ್ಚರು ಎಂದು ಗೇಲಿ ಮಾಡಿದವು.

ಇನ್ನೂ ಘಾತಕವಾದ ಅಂಶವೆಂದರೆ ತಂಬಾಕು ಉದ್ಯಮದವರು ತಮ್ಮ ಸರಕುಗಳ ಸಾಮರ್ಥ್ಯದ ಬಗ್ಗೆ ಹೆಚ್ಚು ಹೆಚ್ಚು ಹೇಳಿಕೊಳ್ಳತೊಡಗಿದರು. ಈ ತರದ ಹೇಳಿಕೆಗಳನ್ನು ಅವರು ತಮ್ಮ ಸ್ವಂತ ರಾಷ್ಟ್ರಗಳಲ್ಲಿ ಹೇಳಿಕೊಳ್ಳಲು ಸಾಧ್ಯವೇ ಇರಲಿಲ್ಲ. ಸಿಗರೇಟು ಸೇವನೆಯಿಂದ ಜ್ಞಾಪಕಶಕ್ತಿ ವೃದ್ಧಿಗೊಳ್ಳುತ್ತದೆ. ಕಲಿಕಾ ಸಾಮರ್ಥ್ಯ ಇಮ್ಮಡಿಗೊಳ್ಳುತ್ತದೆ ಎಂದು ಉದ್ಯಮ ಜಾಹಿರಾತುಗಳು ಘೋಷಿಸತೊಡಗಿದವು. ಧೂಮಪಾನದಿಂದ ರೋಗಗಳುಂಟಾಗುತ್ತವೆ ಎನ್ನುವ ಮಾತು ಕೇವಲ ಅಭಿಪ್ರಾಯವೇ ಹೊರತು ಸಾಧಾರಪಡಿಸಿದ ವಿಚಾರವಲ್ಲ ಎಂದು ಉದ್ಯಮ ಪ್ರತಿಪಾದಿಸತೊಡಗಿತು.

ವ್ಯಾಕೆ ತನ್ನ ಗಂಡನಿಗೆ ಹೇಳಿದಳು "ಈ ರೀತಿ ಪೊಳ್ಳು ಮಾತುಗಳನ್ನು ಹೇಳಿ ಕಂಪನಿಗಳು ಮೆರೆಯಲು ಅವಕಾಶ ನೀಡಕೂಡದು. ಅವರ ಸುಳ್ಳುಗಳಿಗೆ ಯಾರಾದರೂ ಬದಲು ನೀಡಿಯೇ ತೀರಬೇಕು". ತಕ್ಷಣವೇ ಸನ್ನದ್ಧಳಾದಳು. ಧೂಮಪಾನದಿಂದ ಉಂಟಾಗುವ ಅಕಾಲಿಕ ಮರಣಗಳು ಹಾಗೂ ನಿವಾರ್ಯವಾದ ರೋಗಗಳ ಬೃಹತ್ ಸಂಖ್ಯೆಯ ಮೇಲೆ ತನ್ನ ವೈದ್ಯಕೀಯ ಚಾಣಾಕ್ಷತೆಯನ್ನೆಲ್ಲ ಮಡಿಸಿಡಲು ನಿರ್ಧರಿಸಿದಳು. ತನ್ನ ಆಸ್ಪತ್ರೆ ಉದ್ಯೋಗಕ್ಕೆ ರಾಜಿನಾಮೆ ನೀಡಿದಳು. ತನ್ನ ಮನೆಯಲ್ಲಿಯೇ ಕಾರ್ಯಾಲಯ ತೆರೆದಳು. ಒಂದು ರೋಗಿ ಕೋಣೆಯನ್ನು ಸಿದ್ಧಪಡಿಸಿಕೊಂಡಳು.

ಮೊದಮೊದಲಿಗೆ ಅವಳದು ಏಕಾಂಗಿ ಸಮರವಾಗಿತ್ತು. ಭಾರೀ ಕಟ್ಟಡಗಳಲ್ಲಿ ವಿಲಾಸಪೂರ್ಣ ಕಾರ್ಯಾಲಯಗಳಲ್ಲಿ ಕೆಲಸ ಮಾಡುವ ತಂಬಾಕು ಉದ್ಯಮದ ಉನ್ನತ ಅಧಿಕಾರಿಗಳ ದಂಡಿನ ವಿರುದ್ಧ ಏಕೈಕ ಮಹಿಳೆಯ ಹೋರಾಟ. ಆದರೆ ವ್ಯಾಕೆ ಚಿಕ್ಕಂದಿಸಿಂದಲೆ ಪ್ರತಿಭಟನಾ ಮನೋಭಾವ ಉಳ್ಳವಳಾಗಿದ್ದು ಹೋರಾಟ ಪ್ರವೃತ್ತಿ ರಕ್ತಗತವಾದವಳು. ಹಾಂಗ್‌ಕಾಂಗ್‌ಗೆ ಬಂದ ಹೊಸದರಲ್ಲಿ ಅವಳ ಪುರುಷ ಸಹೋದ್ಯೋಗಿಗಳಿಗಿಂತ ಕಡಿಮೆ ವೇತನ ಪಡೆಯುತ್ತಿದ್ದವಳು. ಹಾಗಾಗಿ ಆಗಲೆ ಅವಳು ಮಹಿಳಾ ಹೋರಾಟ ಚಳುವಳಿ ಆರಂಭಿಸಿದ್ದಳು. ಆ ಚಳುವಳಿಯಲ್ಲಿ ಆಕೆಗೆ ಜನಸಂಪರ್ಕದ ಒತ್ತಡ ಪ್ರಭಾವ ಪುಸಲಾವಣೆ ಕಾರ್ಯಸಾಧನೆ ಇತ್ಯಾದಿಗಳ ಕರತಲಾಮಲಕವಾಗಿದ್ದವು. ಆ ಕಲಿಕೆ ಈಗ ತಂಬಾಕು ಉದ್ಯಮ ವಿರುದ್ಧ ಹೋರಾಟದಲ್ಲಿ ಸಹಕಾರಿಯಾಯಿತು. ರೂಡಿ ಖೂ ಎಂಬ ಖ್ಯಾತ ಕ್ಯಾನ್ಸರ್ ಡಾಕ್ಟರನ್ನು ಸಂಪರ್ಕಿಸಿ ಅವನನ್ನು ಒಲಿಸಿ

ಧೂಮಪಾನದ ಕೆಡಕುಗಳ ಬಗ್ಗೆ ಪ್ರಕಟಿಸಲು ಒಪ್ಪಿಸಿದಳು. ಅನಂತರ ಉನ್ನತ ಸರ್ಕಾರಿ ಅಧಿಕಾರಿ ಇವಳ ಜೊತೆಗೂಡಿದ. ಸರ್ಕಾರದ ತಂಬಾಕು ನಿಯಂತ್ರಣ ಕ್ರಮಗಳನ್ನು ಪರಿಶೀಲಿಸಲು ಸಭೆ ಕರೆದಾಗಲೆಲ್ಲ ಅಲ್ಲಿ ಮ್ಯಾಕೆ ಹಾಜರಿದ್ದು ಉದ್ಯಮದ ಪರ ವಾದಿಸುವ ವಕೀಲರಿಗೆ ತಕ್ಕ ಉತ್ತರ ನೀಡುತ್ತಿದ್ದಳು.

ಹಾಂಗ್ ಕಾಂಗ್ ಸರ್ಕಾರ ಧೂಮಪಾನ ಹಾಗೂ ಆರೋಗ್ಯ ಮಂಡಳಿಯ ಸ್ಥಾಪಕ ನಿರ್ದೇಶಕಿಯಾಗಿ ಮ್ಯಾಕೆಯನ್ನು ನೇಮಿಸಿತು. ಧೂಮಪಾನದ ಅಪಾಯಗಳ ಬಗ್ಗೆ ಸಾರ್ವಜನಿಕ ಶಿಕ್ಷಣವನ್ನು ಹೆಚ್ಚುಗೊಳಿಸಲು ಹಾಗೂ ಧೂಮಪಾನದ ವಿರುದ್ಧ ಕಠಿಣ ಕಾನೂನುಗಳು ಬೇಕು ಎಂದು ಹೋರಾಡಲು ಆವಳ ಹುದ್ದೆ ಆವಳಿಗೆ ನೆರವಾಯಿತು. ಶಾಲೆಗಳಿಗೆ ಭೇಟಿ ನೀಡಿ ಮಕ್ಕಳೊಡನೆ ಸಲ್ಲಾಪಿಸಿದಳು. ಚರ್ಚ್ ಪ್ರಾರ್ಥನಾ ಸಭೆಗಳಿಗೆ ತೆರಳಿ ನೆರೆದವರಿಗೆ ಬೋಧಿಸಿದಳು. ವೃತ್ತಪತ್ರಿಕೆಗಳಿಗೆ ನಿರಂತರ ಪತ್ರ ಬರೆದಳು. ಸಂತೆಗಳಿಗೆ ಮಾರುಕಟ್ಟೆ ಪ್ರದರ್ಶನಗಳಿಗೆ ಕರೆಯದಿದ್ದರೂ ಹೋಗಿ ತನ್ನ ವಾದವನ್ನು ಮಂಡಿಸುತ್ತಿದ್ದಳು.

ಉದ್ಯಮದವರು ಸೋಲತೊಡಗಿದರು. ಸಿಗರೇಟ್ ಪ್ಯಾಕ್‌ಗಳ ಮೇಲೆ ಆರೋಗ್ಯ ಎಚ್ಚರಿಕೆಯನ್ನು ಮುದ್ರಿಸಬೇಕಾಯಿತು. ಟೆಲಿವಿಷನ್ ಮತ್ತು ರೇಡಿಯೋಗಳಲ್ಲಿ ಜಾಹಿರಾತು ನೀಡಿಕೆಗೂ ನಿಷೇಧ ಬಂದಿತು.

ಉದ್ಯಮದವರು ಇನ್ನೊಂದು ದೊಡ್ಡ ಸಮರಕ್ಕೆ ಸಜ್ಜಾದರು. ಬಿಟ್ಟ ಹೊಗೆಯ ಸಮರ. ಇದನ್ನು 'ಪರಿಸರ ತಂಬಾಕು ಹೊಗೆ' ಎನ್ನುತ್ತಾರೆ.

೧೯೮೭ ರಲ್ಲಿ ಆಸ್ಟ್ರೇಲಿಯಾದಲ್ಲಿ ಫಿಲಿಪ್ ಮಾರಿಸ್ ಕಂಪನಿ ಎಂಬ ಭಾರಿ ಸಿಗರೇಟ್ ಕಂಪನಿ ತನ್ನ ಉದ್ಯಮದ ಉನ್ನತ ಅಧಿಕಾರಿಗಳ ಸಭೆ ಕರೆಯಿತು. ತಂಬಾಕು ಸೇವನೆಯ ಪರ ವಾದಿಸಲು ವಿಜ್ಞಾನಿಗಳ ನೆರವು ಪಡೆಯಲು ನಿರ್ಣಯವಾಯಿತು. ತಮ್ಮ ಪರ ಇರುವ ವಿಜ್ಞಾನಿಗಳನ್ನು ಗುರ್ತಿಸಿ ನೇಮಿಸಿ ತರಬೇತಿ ನೀಡಲು ತೀರ್ಮಾನಿಸಿದರು.

ತಂಬಾಕು ಪಕ್ಷಪಾತಿ ಸಂಶೋಧಕ, ವಿಜ್ಞಾನಿಗಳನ್ನು "ಬಿಳಿ ಕೋಟುಗಳು" ಎಂದು ಕರೆಯತೊಡಗಿದರು. ಮ್ಯಾಕೆ ಮತ್ತು ಸಹಚರರನ್ನು "ಅಂಟಿ"ಗಳೆಂದರು. ಬಿಳಿಕೋಟುಗಳ ಕೆಲಸವೆಂದರೆ ಅಂಟಿಗಳನ್ನು ಹಾಸ್ಯಾಸ್ಪದಗೊಳಿಸುವಂತೆ ಲೇವಡಿಗೊಳಿಸುವಂತೆ ಆಧಾರಗಳನ್ನು ಸೃಷ್ಟಿಸಿ ಲೇಖನ ಬರೆಯುವುದು. ಇದೇ ೧೯೮೭ ರ ರಹಸ್ಯ ಸಭೆಯ ನಿಲುವಳಿ. "ಅಂಟಿಗಳನ್ನೂ ಧ್ವಂಸ ಮಾಡಿ ಅ ಲೇಡಿಗಳನ್ನು ಕೋರ್ಟಿಗೆ ಎಳೆಯಿರಿ".

ತಂಬಾಕು ಪಕ್ಷಪಾತಿ ವಿಜ್ಞಾನಿಗಳಿಗೆ ಅಪಾರ ಹಣ ಸಹಾಯ ಮಾಡಲಾಯಿತು. ಏಶಿಯ ಪರಿಸರ ತಂಬಾಕು ಹೊಗೆ ಸಲಹಾಕಾರ ಕಾರ್ಯಕ್ರಮದಿಂದ ನೀಡಿದ ಹಣ ಎಂಟು ಲಕ್ಷ ಡಾಲರ್‌ಗಳು. ಅಂದರೆ ಈಗಿನ ಲೆಕ್ಕದಲ್ಲಿ ಮೂರೂವರೆ ಕೋಟಿರೂಪಾಯಿಗಳು. ಈ ಸಮರದ ವ್ಯಾಪ್ತಿಯ ಅಗಾಧತೆಯ ಅರಿವು ಮ್ಯಾಕೆಗೆ ಇತ್ತು. ಆಕೆ ತಕ್ಷಣವೇ ತನ್ನ ಸರ್ಕಾರಿ ಹುದ್ದೆಗೆ ರಾಜೀನಾಮೆ ನೀಡಿ ತನ್ನದೇ ಆದ ಏಕ ಮಹಿಳಾ ಸಂಘಟನೆಯನ್ನು ಸ್ಥಾಪಿಸಿದಳು. ಅದರ ಹೆಸರು "ತಂಬಾಕು ನಿಯಂತ್ರಣದ ಏಶಿಯಾ ಸಲಹಾಕೂಟ".

ಸ್ವತಂತ್ರ ಸಲಹಾಗಾರಳಾದ ಅವಳಿಗೆ ಸರ್ಕಾರಿ ಧೋರಣೆಯು ಅಡೆತಡೆ ಇರಲಿಲ್ಲ. ಅವಳು ಯಾವುದೇ ವೇತನ ಪಡೆಯುಲಿಲ್ಲ. ನಿರ್ವಹಣೆಗೆ ಗಂಡನ ಆದಾಯುವೇ ಬೆಂಬಲ ವಾಗಿತ್ತು.

ಕಾನೂನು ನಿರ್ಮಾಪಕರಿಗೆ ಆಕೆ ಮನವಿ ನೀಡಿ ಅನೇಕ ಸಲಹೆಗಳನ್ನಿತ್ತಳು. ತಂಬಾಕು ಪಕ್ಷಪಾತಿಗಳಿಗೆ ಸವಾಲೆಸೆದಳು. ತಂಬಾಕು ಹಣದಿಂದ ಪೋಷಿತವಾದ ಕಾರ್ಯಕ್ರಮ ಗಳಲ್ಲಿ ಭಾಗವಹಿಸಿದವರನ್ನು ತರಾಟೆಗೆ ತೆಗೆದುಕೊಂಡಳು. ಇವಳು ತರಾಟೆಗೆ ತೆಗೆದುಕೊಂಡವರಲ್ಲಿ ಖ್ಯಾತನಟ ಪೀಟರ್ ಉಸ್ಟಿನೋವ್ ಹಾಗೂ ಚೈನಾ ಮತ್ತು ಹಾಂಗ್‌ಕಾಂಗ್ ಜನತೆಯು ಆರಾಧ್ಯ ದೈವ ವಾಗಿದ್ದ ಟೆನ್ನಿಸ್‌ಪಟು ಮೈಕೆಲ್ ಚಾಂಗ್ ಸಹ ಸೇರಿದ್ದರು. ತಂಬಾಕು ಉದ್ಯಮ ಪ್ರಕಟಿಸುತ್ತಿದ್ದ ಒಂದು ನಿಯತಕಾಲಿಕ ದಲ್ಲಿ "ಜಗತ್ತಿನ ಅತ್ಯಂತ ಅಪಾಯಕಾರಿ ಮೂರು ವ್ಯಕ್ತಿಗಳಲ್ಲಿ ಮ್ಯಾಕೆ ಒಬ್ಬಳು" ಎಂದು ಪ್ರಕಟವಾಯಿತು.

ಏಶಿಯಾದ ಆದ್ಯಂತ ಅನೇಕ ರಾಷ್ಟ್ರ ಗಳಿಂದ ಸಾರ್ವಜನಿಕ ಆರೋಗ್ಯ ಅಧಿಕಾರಿ ಗಳು ಹಾಗೂ ಧೂಮಪಾನ ವಿರೋಧಿ ಚಳುವಳಿಗಾರರಿಂದ ಅವಳಿಗೆ ಪ್ರೋತ್ಸಾಹ ಲಾರವನ್ನು ಬೇಡಿಕೆ ಆಹ್ವಾನಗಳು ಬರ ತೊಡಗಿದವು. ಕ್ರಮಕ್ರಮೇಣ ಅವಳ ಪಾಸ್‌ಪೋರ್ಟ್ ತುಂಬೆಲ್ಲ ದೂರದೂರ ನಾಡುಗಳ ಸುತ್ತಾಟದ ಗುರುತು ಗಳು ಮೂಡಿ ತುಂಬತೊಡಗಿದವು. ಕಾಂಬೋಡಿಯ, ಚೀನಾ, ಜಪಾನ್, ಕೊರಿಯ, ಲಾವೋಸ್, ಮಕಾವೊ, ಮಲೇಶಿಯ, ಫಿಲಿಪೈನ್ಸ್, ತೈವಾನ್ ಥೈಲ್ಯಾಂಡ್, ಟಿಬೆಟ್ ಮತ್ತು ವಿಯಟ್ನಾಂ. ಅತ್ಯಂತ ಬಲವತ್ತರ ಸಾರ್ವ ಜನಿಕ ಆರೋಗ್ಯ ಕ್ರಮಗಳುಳ್ಳ ಸಿಂಗಪುರ ದಲ್ಲಿ ಈಕೆಗೆ ಪ್ರತಿಸ್ಪಂದನ ಸ್ಫುಟವಾಗಿ ದೊರೆಯಿತು. ಆದರೆ ಮಂಗೋಲಿಯ ದಂತಹ ಒಳದೇಶಗಳಲ್ಲಿ ಆಕೆ ಧೂಮಪಾನ ಕೆಡುಕುಗಳ ಬಗ್ಗೆ ಮೂಲಶಿಕ್ಷಣದಿಂದ ಆರಂಭಿಸಬೇಕಾಯಿತು.

೧೯೮೦ರ ದಶಕದ ಮಧ್ಯದಲ್ಲಿ ಮ್ಯಾಕೆ ತನ್ನ ಚಳವಳಿಯನ್ನು ತೀವ್ರಾಸಕ್ತಿಯಿಂದ ಮಾಡುತ್ತಿದ್ದಾಗ ಏಶಿಯಾದ ಯಾವ ರಾಷ್ಟ್ರವೂ ತಂಬಾಕಿನ ವಿರುದ್ಧ ಯಾವುದೇ ಕ್ರಮ ಕೈಗೊಂಡಿರಲಿಲ್ಲ. ಈಗ ಏಶಿಯಾ ಖಂಡದ ಪ್ರತಿಯೊಂದು ರಾಷ್ಟ್ರವೂ ಕಾನೂನು ರೂಪಿಸಿವೆ. ಇಂದೂ ಕೂಡ ಮ್ಯಾಕೆ ಏಶಿಯಾದಲ್ಲಿ ತನ್ನ ಹೋರಾಟ ಮುಂದುವರಿಸಿದ್ದಾಳೆ. ಆದರೆ ಆಕೆ ಪದೇ ಪದೇ ಜಿನೀವಾಕ್ಕೆ ಹೋಗಬೇಕಾಗಿದೆ. ಆಕೆ ಜಾಗತಿಕ ಆರೋಗ್ಯ ಸಂಘಟನೆಯ ತಂಬಾಕು ಮುಕ್ತ ಪರಿಸರದ ಸಲಹಾ ಸಮಿತಿಯ ಅಧ್ಯಕ್ಷೆಯಾಗಿದ್ದಾಳೆ.

ಹಾಂಗ್‌ಕಾಂಗ್ ಸರ್ಕಾರದ ಆರೋಗ್ಯ ಇಲಾಖೆಯ ನಿರ್ದೇಶಕ ಡಾ. ಮಾರ್ಗರೇಟ್ ಜಾನ್‌ಳ ಪ್ರಕಾರ "ತಂಬಾಕು ಉದ್ಯಮ ಅತ್ಯಂತ ಬಲಿಷ್ಠ ಉದ್ಯಮ. ಇದರ ವಿರುದ್ಧ ಜುಡಿತ್ ಮ್ಯಾಕೆ ಒಬ್ಬಳೇ ನಿಜವಾಗಿಯೂ ಹೋರಾಟ ಆರಂಭಿಸಿದ ಮೊದಲಿಗಳು. ತನ್ನ ಎಲ್ಲ ಕಾಲ ಹಾಗೂ ಶಕ್ತಿಯನ್ನು ಧೂಮಪಾನ ವಿರುದ್ಧ ಚಳುವಳಿಗೆ ವ್ಯಯಿ ಸಿದವಳು. ಅವಳಿಗೆ ನಾವು ಯಾವಾಗಲೂ ಚಿರಋಣಿಗಳು.

# ವಿರುಪೇರು !

ಡಾ|| ಶ್ರೀವೆಂಕಟರಮಣ
ಪ್ರಾಧ್ಯಾಪಕರು
ಸಂಖ್ಯಾಕಲನ ವಿಜ್ಞಾನ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು ೫೬೦೦೫೬

ನಮ್ಮ ಮನೆಯಲ್ಲಿ ನಾನೇ ಯಜಮಾನ; ಅಭಿಷಿಕ್ತ ದೊರೆ. ಹೀಗಾಗಿ ಎಲ್ಲ ಪ್ರಾಮುಖ್ಯ ನನಗೆ ಸಲ್ಲಬೇಕು. ಉದಾಹರಣೆಗೆ, ಮನೆಗೆ ಬರುವ ಹೆಚ್ಚಿನ ದೂರವಾಣಿ ಕರೆಗಳು ನನಗೆ ಮೀಸಲು. ಎಳೆಂಟು ವರ್ಷಗಳ ಹಿಂದೆ ಈ ಸೌಲಭ್ಯ ದೊರಕಿದ ಹೊಸತರಲ್ಲಿ ಕರೆಗಳೆಲ್ಲ ನನಗಾಗಿಯೇ ಬರುತ್ತಿದ್ದುವು. ರಿಸೀವರ್ (ಅಭಿಗ್ರಾಹಕ) ದನಿಸಿದ ಕೂಡಲೇ ಮನೆಯ ಪುಟಾಣಿಗಳು 'ನಾ ಮುಂದು, ತಾ ಮುಂದು' ಎಂದು ಪುಟಿಯುತ್ತಿದ್ದುವು. ಅಷ್ಟೇ ಪರವಾಗಿ ಕರೆಗಳಿಗೆ ಸ್ವಾಗತ ಬಯಸುವ ತರಾತುರಿಯಲ್ಲಿ. ಬಂದಿರುವ ಕರೆ ನನಗೆಂದು ಖಾತ್ರಿಯಿದ್ದುದರಿಂದ, ಸ್ಥೂಲಗಾತ್ರದ ನಾನು ನಿಧಾನಕ್ಕೆದ್ದು ಅಭಿಗ್ರಾಹಕದ ಕಡೆಗೆ ಚಲಿಸುತ್ತಿದ್ದೆ, ಕರೆಯ, ಕುರಿತು ಸರ್ವಾಧಿಕಾರ ವಹಿಸಲು. ಇತರರಿಗೆ ಸ್ವಾಗತಕಾರ್ಯ ಮಾತ್ರ.

ಹಿಂದಿನ ದಿನಗಳಲ್ಲಿ ದೂರವಾಣಿಯನ್ನು ಮುಖ್ಯ ಮತ್ತು ಅತಿಮುಖ್ಯ ವಿಚಾರ ವಿನಿಮಯಕ್ಕಾಗಿ ಬಳಸುವುದು ವಾಡಿಕೆಯಾಗಿತ್ತು. ಅಮುಖ್ಯ ವಿಷಯಕ್ಕೆ ಆಸ್ಪದವಿರಲಿಲ್ಲ. ನಮ್ಮ ಮನೆಯಲ್ಲಂತೂ ನನಗೆ ಬರುತ್ತಿದ್ದ ಕರೆಗಳೆಂದಮೇಲೆ ಅವು ಮುಖ್ಯವಾಗಿದ್ದಿರಲೇ ಬೇಕಲ್ಲ! ಅಪರೂಪಕ್ಕೊಮ್ಮೆ ಪಕ್ಕದ ಮನೆಯ ಲಕ್ಷ್ಮೀ ತಾತಾಚಾರ್ಯರಿಗೆ ಹೇಳಿಕಳುಹಿಸಿರೆಂಬ ಬಿನ್ನಹವನ್ನು ಹೊರತು ಉಳಿದ ಕರೆಗಳೆಲ್ಲ ನನ್ನ ವ್ಯವಹಾರ ಪ್ರಪಂಚಕ್ಕೆ ಸಂಬಂಧಿಸಿರುತ್ತಿದ್ದುವು.

ಈಗ ಕಾಲ ಬದಲಿದೆ ಅಷ್ಟೆ. ಮಿತ್ರರ ಸಾಕುನಾಯಿಯ ಆರೋಗ್ಯ ಹೇಗಿದೆಯೆಂದು ವಿಚಾರಿಸಲೆಂದೇ ದನಿಸುವ ಕರೆಗಳಿವೆ. ಮಾತು ಶುರುವಾದ ಬಳಿಕ ಅದು ಕತೆಯಾಗಿ ಮುಂದುವರಿಯಲು ಇನ್ನೆಷ್ಟು ಸಮಯ ಬೇಕು? ಸರಿ, ಮನೆಯ ಅತ್ತೆಮ್ಮ ಮಾತನಾಡುತ್ತಿದ್ದರೆ. ಬಂಗಾರವೆಂದು ತಿಳಿದು ಮನೆತುಂಬಿಸಿಕೊಂಡಿದ್ದ ತನ್ನ ಸೊಸೆ ಈಗ ಗಿಲೀಟು ಬಂಗಾರವಾಗಿರುವ ಪುರಾಣವನ್ನು ಸಮಾನಸ್ಥಿತಿಯವರಿಗೆ ಒದಗಿಸುವುದು. ಕಾವೇರಿನೀರಿನ ಸರಬರಾಜಿನ ಅವ್ಯವಸ್ಥೆ, ಇಂದಿನ ಜೀವನದ ಗೊಂದಲ ಇತ್ಯಾದಿಗಳ ವಿವರ ಒಂದೊಂದಾಗಿ ಶಬ್ದರೂಪದಲ್ಲಿ ಹೊರಬರುತ್ತದೆ. ಇನ್ನೊಂದು ಸಂಗತಿ. ಅಧ್ಯಾಪಕರು ಆಜ್ಞಾಪಿಸಿದ ಮನೆಗೆಲಸವನ್ನು ಪೂರೈಸಲು ಬೇಕಾಗುವ ಪಾಂಡಿತ್ಯವನ್ನು ಶಾಲಾ ಮಕ್ಕಳು ಹಂಚಿಕೊಳ್ಳುವುದು ಈಗೀಗ ದೂರವಾಣಿಯ ಮೂಲಕವೇ. ಮದುವೆಗೆ ಬನ್ನಿ ಎಂದೋ, ಕಛೇರಿಗೆ ಬರುತ್ತಿಲ್ಲವೆಂದೋ ಮಾಹಿತಿ ವಿನಿಮಯಕ್ಕೂ ದೂರವಾಣಿಯ ಬಳಕೆ ಸಾಮಾನ್ಯ. ಚಹ ಕಾಫಿ ಸತ್ಕಾರವಿಲ್ಲದೆ, ಮುಖಾಮುಖಿ ಭೇಟಿಯಿಲ್ಲದೆ ವ್ಯವಹಾರ ಇಲ್ಲಿ ಕುದುರು

ತ್ತಿದೆ. ಇದರಿಂದ ಮನೆಯೊಡತಿಗೆ ಅನುಕೂಲವೇ, ಅನನುಕೂಲವೇ ಯಾ 'ಅತಿಥಿದೇವೋ ಭವ' ಎಂಬ ನಿಯಮದ ಆಚರಣೆಗೆ ಆಸ್ಪದ ಕಡಿಮೆಯಾಗಿದೆಯೇ ಎಂಬ ಚರ್ಚೆ ಇಲ್ಲಿ ಬೇಡ. ಒಟ್ಟಿನಲ್ಲಿ ದೂರಭಾಷಿತ್ವ ಅನಿರೀಕ್ಷಿತ ಬೆಳವಣಿಗೆಗಳನ್ನು ತಂದಿದೆಯೆನ್ನುವುದು ನಿರ್ವಿವಾದ. ಈಗ ನಾನು ವರದಿಸಹೊರಟಿರುವುದು ಇತ್ತೀಚಿಗಿನ ದಿನದ ದೂರವಾಣಿ ಕರೆಗಳನ್ನು ಕುರಿತ ನನ್ನ ಅನುಭವವನ್ನು. ಇದನ್ನು ತಿಳಿದು ನನ್ನ ಪ್ರಾಮುಖ್ಯದ ಇಂದಿನ ಸ್ಥಿತಿಯನ್ನು ಬುದ್ಧಿವಂತರಾದ ನೀವೇ ತೀರ್ಮಾನಿಸಿ.

ಅಂದು ಭಾನುವಾರ. ವಾರಪೂರ್ತಿ ಕೆಲಸಮಾಡಿದವರಿಗೆ? ಅರ್ಹವಾಗಿಯೇ ವಿಶ್ರಾಂತಿಯ ದಿನ. ವಿಶ್ರಾಂತಿಯೇ ಕೆಲಸವೆಂದು ಸದಾ ನಂಬಿ ಆಚರಿಸುವವರಿಗೆ ಬೇರೆ ರೀತಿಯ ವಿಶ್ರಾಂತಿಗೆ ಇಲ್ಲಿ ಆಸ್ಪದ. ನಾನಂತೂ ಮೊದಲ ಗುಂಪಿಗೆ ಸೇರಿದವನು. ಬೆಳಗ್ಗಿನ ೫–೬ರ ಸಮಯ. ದೂರವಾಣಿ ಯಂತ್ರ ಬಾರಿಸಿತು. ಆಗಲೇ ಎದ್ದು ಹಲ್ಲುಜ್ಜುತ್ತಿದ್ದ ನಾನು ಅಭಿಗ್ರಾಹಕದ ಬಳಿ ಸಾರ್ದು ಅದನ್ನೆತ್ತಿ ಕಿವಿಗೆ ಆನಿಸಿದೆ. 'ನಾನು ಶಿವರಾಮು ಅಂತ. ದೂರದ ಗುಲ್ಬರ್ಗಾದಿಂದ ಮಾತನಾಡುತ್ತಿದ್ದೇನೆ. ಇನ್ನೇನಿಲ್ಲ. ನಿಮ್ಮ ಎದುರು ಮಹಡಿಯಲ್ಲಿರುವ ಆಂಜನಪ್ಪನವರನ್ನು ಸ್ವಲ್ಪ ಕರೆಯುತ್ತೀರಾ? ಅರ್ಜೆಂಟಾಗಿ ಮಾತನಾಡಬೇಕಿತ್ತು' ಎಂಬ ಮಾತು ಕಿವಿಗೆ ಬಿತ್ತು. ಅಷ್ಟು ದೂರದ ಗುಲ್ಬರ್ಗಾದಿಂದ ಓಡಿಬಂದ ಒಸಗೆಯನ್ನು ಗೇಟುದಾಟಿ ಹೊರಬಂದು, ಎದುರಿನ ಮಹಡಿಯನ್ನೇರಿ, ಸಜ್ಜನರನ್ನು ಕಂಡಾಗ ಮಾತ್ರ ಬೊಗಳುವ ಟಾಮಿಯ ಪ್ರತಿರೋಧವನ್ನು ನಿರ್ಲಕ್ಷಿಸಿ ಆಂಜನಪ್ಪನವರ ನಿದ್ರಾಭಂಗಕ್ಕೆ ಕಾರಣವಾಗುವುದೇನು ಮಹಾ? ದಿನದ ಮೊದಲ ಸೇವೆಯಾಗಿ ಇದನ್ನು ಮಾಡಿದ್ದಾಯಿತು. ಮುಂದಿನ ಕರೆ ಏಳುಗಂಟೆಯ ವೇಳೆಗೆ ಬಂತು. ಇದಂತೂ ನನಗಿರಲೇಬೇಕು. ನನ್ನ ಸಂಶೋಧನಾ ವಿದ್ಯಾರ್ಥಿಗಳಲ್ಲಿ ಯಾರೋ ಒಬ್ಬ "ಡಿಸ್ಕಶನ್‌ಗೆ ಎಷ್ಟು ಹೊತ್ತಿಗೆ ಬರಲಿ ಸರ್?" ಎಂಬ ಅಣತಿಗಾಗಿ ಕರೆಯೆಂದು ನಿರೀಕ್ಷಿಸಿ ಅಭಿಗ್ರಾಹಕವನ್ನೆತ್ತಿದೆ. "ಅಂಕಲ್, ರಜನಿ ಇದ್ದಾಳ? ಒಂದು ಹೋಂವರ್ಕ್ ಮಾಡಲಾಗುತ್ತಿಲ್ಲ" ಎಂದು ಕುಮಾರಿಯೊಂದು ಬಿನ್ನವಿಸಿತು, ಗಣಿತ ಸೇವೆಗೆ ಬೇಕಾಗಿದ್ದ ಪ್ರಾವೀಣ್ಯವನ್ನು ನನ್ನ ಕಿರಿಯ ಮಗಳಿಂದ ಪಡೆಯುವ ಹುನ್ನಾರದಲ್ಲಿ. ಅಂತೂ ನನ್ನ ಮಹತ್ವಕ್ಕೆ ಮತ್ತೆ ನಿರಾಸೆ. ಇನ್ನೆರಡು ಗಂಟೆ ಕಳೆದಾಗ ಉಪಕರಣಕ್ಕೆ ಮತ್ತೆ ದನಿ ತುಂಬಿತು. ಹಟಬಿಡದ ತ್ರಿವಿಕ್ರಮನಂತೆ ಕರೆಗೆ ಉತ್ತರಿಸಲು ನಾನು ಅಣಿಯಾದೆ. "ಸರ್, ಅದು ಜಯನಗರ ಪೊಲೀಸ್ ಸ್ಟೇಶನಾ? ಇಲ್ಲಿ ಚಳಿಯನ್ ಸಿಕ್ಕಾಪಟ್ಟೆ ಗಲಾಟೆ ಮಾಡುತ್ತಿದ್ದಾನೆ" ಎಂಬ ದೂರುಬಂತು. ದೂರವಾಣಿ ಸಂಖ್ಯೆಯನ್ನು ಅನಾಮತ್ತಾಗಿ ಒತ್ತಿದ್ದರಿಂದಲೋ, ಜನರಿಗೆ ಖಾಕಿಯವರ ಮೇಲಿನ ನಂಬಿಕೆ ಕಡಿಮೆಯಾಗಿರುವುದರಿಂದಲೋ ಠಾಣೆಗೆ ಮಾಡಿದ ಕರೆ ನಮ್ಮಲ್ಲಿಗೆ ನುಗ್ಗಿತ್ತು! ಅದರೊಂದಿಗೆ ನನ್ನ ಪ್ರಾಧಾನ್ಯ ಮತ್ತೆ ತಗ್ಗಿತ್ತು.

ಇಷ್ಟಾದರೂ ನನ್ನ ಪ್ರಾಮುಖ್ಯದ ಬಲೂನಿನಲ್ಲಿ ಇನ್ನೂ ಸ್ವಲ್ಪ ಗಾಳಿ

ಮುಕ್ಕಿತ್ತು. ಸರಿಸುಮಾರು ಹತ್ತು ಗಂಟೆಗೆ ಮಗುದೊಮ್ಮೆ ದೂರವಾಣಿಯ ಸಂಕೇತ, ಚಹ ಸವಿಯುತ್ತಿದ್ದ ನಾನು ನೆಟ್ಟಗಾದೆ. ಆ ಹೊತ್ತಿಗೆ ಸಾಮಾನ್ಯವಾಗಿ ಕರೆಯುತ್ತಿದ್ದವ ನನ್ನ ಪರಮಮಿತ್ರ ಶೇಷಗಿರಿ. ಜಯನಗರದ ಕಾಲೇಜಿನಲ್ಲಿ ಗಣಿತದ ಉಪನ್ಯಾಸಕ ಹಾಗೂ ನನಗೆ ಸಮಾನ ಮನಸ್ಕ. ಕಷ್ಟಸುಖಗಳ ವಾರದ ವರದಿಯನ್ನು ವಿನಿಮಯಿಸುವ ಸಮಯವದು. ರಜನಿ ಜಿಗಿದು ಅಭಿಗ್ರಾಹಕದ ಬಳಿಗೆ ಓಡಿ 'ಹಲೋ' ಎಂದಳು, ನನ್ನ ಕಿವಿಗಳು ನಿಮಿರಿದುವು. 'ಅಪ್ಪ, ನಿಮಗೆ. ಶೇಷಗಿರಿ ಅಂಕಲ್ ಅವರದ್ದು' ಎಂಬ ಅವಳಮಾತಿಗಾಗಿ ಕಾದೆ. ಆದರೆ ಅಂದಿನ ಕತೆಯೇ ಬೇರೆ. 'ಮಮ್ಮಿ, ಮಮ್ಮಿ! ಸಾವಿತ್ರಿ ಆಂಟಿ' ಎಂದಳು ರಜನಿ. ಒಳಗಿಂದ ಮನೆಯೊಡತಿ ತನ್ನ ಗೆಳತಿಯೊಡನೆ ದೂರ ಸಂಭಾಷಣೆಗೆ ತ್ವರಿಸಿಬಂದಳು. ಮುಂದಿನ ಅರ್ಧಗಂಟೆ ಇತರರಿಗೆ ನಮ್ಮ ದೂರವಾಣಿ ಯಂತ್ರದಿಂದ 'ಎಂಗೇಜ್ಡ್' ಪ್ರತಿಕ್ರಿಯೆ ಖಚಿತವಾಗಿತ್ತು!

ಇಷ್ಟಾಗುವಾಗ ನನ್ನ ಚೇತನ ಪತನದತ್ತ ಸಾಗುತ್ತಿದ್ದುದು ಸ್ಪಷ್ಟವಾದಂತಿತ್ತು. ಹಳೆಯ ಎಲೆ ಹೊಸ ಚಿಗುರಿಗೆ ಜಾಗ ಖಾಲಿ ಮಾಡುವುದಿಲ್ಲವೇ? ಆದರೂ ನಾನು ಸೋಲೊಪ್ಪಲು ಸಿದ್ಧನಿರಲಿಲ್ಲ. ಭಾನುವಾರ ಇನ್ನೂ ಮುಗಿದಿರಲಿಲ್ಲವಲ್ಲ! ಅಪರಾಹ್ಣದ ನಾಲ್ಕು ಗಂಟೆಗೆ ಮಗುದೊಮ್ಮೆ ದೂರವಾಣಿಯ ಕರೆ. ಈ ಮಧ್ಯೆ ಮನೆಯ ಇತರರು ನಾಲ್ಕಾರು ಕರೆಗಳನ್ನು ಮಾಡಿಯಾಗಿತ್ತು, ಅವರವರ ದರುಶನಕೆ ಅನುಗುಣವಾಗಿ ಅವರವರ ವ್ಯವಹಾರ ಪ್ರಪಂಚದ ಆಟಗಾರ ಶಿವಂದಿರಿಗೆ ಅಪರಾಹ್ಣದ ಮೇಲಿನ ಈ ವೇಳೆಯ ಕರೆ ಸಾಮಾನ್ಯವಾಗಿ ಹಿರಿಯ ಶಾಮಣ್ಣನವರದ್ದು—ಸಂಜೆಯ ಗೀತಾ ಪ್ರವಚನ ಕೇಳಲು 'ಇಂಥಲ್ಲಿಗೆ ಬಾ' ಎಂಬ ಸಂದೇಶ. ನಾನು ಉತ್ಸುಕನಾದೆ. ರಜನಿಯ ಚುರುಕು ಕೈ ಅಭಿಗ್ರಾಹಕವನ್ನು ಹಿಡಿದೇಬಿಟ್ಟಿತು! 'ಶಾಮಣ್ಣನವರದ್ದಲ್ಲವೇ?'—ಇದು ನನ್ನ ಖಚಿತ ಪ್ರಶ್ನೆ. ಇದಕ್ಕೆ 'ಊಹುಂ' ಎನ್ನುವ ಪ್ರಮೇಯವೇ ಇಲ್ಲವೆಂದು ನಂಬಿದ್ದವ ನಾನು. ಅಂದಿನ ಅನುತ್ತೇಜಕ ಅನುಭವದಿಂದಾಗಿ ಮಾತ್ರ ನಿರಾಸೆಯ ಛಾಯೆ. ಹೀಗಾಗಿ ನನ್ನ ಉತ್ಸಾಹದ ಬುಗ್ಗೆ ತನ್ನಲ್ಲಿದ್ದ ಚೂರುಪಾರು ಗಾಳಿಯನ್ನೂ ಕಳೆದುಕೊಳ್ಳಲು ಸಿದ್ಧವಾಯಿತು. ಅಷ್ಟರಲ್ಲಿ ರಜನಿ 'ಡ್ಯಾಡಿ, ಈ ಬಾರಿ ನಿಮಗೆ' ಎಂದಾಗ ನನಗಾದ ಸಂತೋಷ ಅಷ್ಟಿಷ್ಟಲ್ಲ. ನಾನು ಜಿಗಿದು ಅಭಿಗ್ರಾಹಕವನ್ನು ಕಿವಿಗಂಟಿಸಿದೆ. ಇನ್ನೊಂದು ತುದಿಯಿಂದ ಶಾಮಣ್ಣನವರಲ್ಲ, ಪುಟ್ಟಯ್ಯ ಮಾತನಾಡಿದ. ಆತನ ದನಿ ಮೆದುವಾಗಿದ್ದರೂ ಮಾತು ಹಿತಕರವಾಗಿರಲಿಲ್ಲ. ಪುಟ್ಟಯ್ಯನಿಗೆ ತುರ್ತಾಗಿ ಹತ್ತು ಸಾವಿರ ರೂಪಾಯಿ ಸಾಲಬೇಕಿತ್ತು—ಮೂರು ದಿನದೊಳಗೆ. ನಾನಲ್ಲದೆ ಬೇರೆ ಯಾರೂ ಆಧಾರಕರೂ ಆರಾಧಕರೂ ಇಲ್ಲವಂತೆ. ಸಾಲಕ್ಕಾಗುವಾಗ ಎಲ್ಲರಿಗೂ ನನ್ನ ನೆನಪೇ ಮೊದಲು! ನಂಬಿಕೆಟ್ಟವರಿಲ್ಲವೋ! ಅದೇನೇ ಇರಲಿ. ಇಷ್ಟದ್ದೋ ಕಷ್ಟದ್ದೋ ಕೊನೆಗೂ ನನಗೊಂದು ಕರೆ ಬಂತು. ಅದೇ ನನಗೆ ತೃಪ್ತಿ. ಆದರೆ ಒಳಗೊಳಗೆ ಮನಸ್ಸಿನಲ್ಲಿ

ಕಳವಳ ತುಂಬಿತು. ದೂರವಾಣಿಯು ಕೋರಿಬರುತ್ತಿತ್ತು! ಕಾಲಾಯ ತಸ್ಮೈ ಸಾಹೇಬರ ಸ್ಥಾನಮಾನದಿಂದ ಸ್ವಾಗತ ನಮಃ! ಅತ್ತೆಗೊಂದು ಕಾಲ, ಸೊಸೆ ಕಾರ್ಯದ ಜಾಗಕ್ಕೆ ನಾನು ಸರಿಯುು ಗೊಂದು ಕಾಲ, ಕೊನೆ ಕತ್ತೆಗೂ ಒಂದು ತ್ತಿದ್ದುದು ಬೇಡವೆಂದರೂ ಸ್ಪಷ್ಟವಾಗಿ ಕಾಲವಿದೆಯಲ್ಲವೇ ?

---



## ಅಸ್ಪೃಶ್ಯತೆ

ಅಸ್ಪೃಶ್ಯತೆ ಅತಿಘೋರವಾದ ಅನೇಕ ತಲೆಗಳ ಸರ್ಪದಂತೆ
ಮತ್ತೊಬ್ಬ ಮನುಷ್ಯನನ್ನ ಅಸ್ಪೃಶ್ಯನೆಂದು ಪರಿಗಣಿಸಲು ದೇವರು ಮನುಷ್ಯನನ್ನ ಸೃಷ್ಟಿಸಲಿಲ್ಲ.

ಎಲ್ಲಿಯವರೆವಿಗೂ ಅಸ್ಪೃಶ್ಯತೆ ಇರುತ್ತದೋ ಅಲ್ಲಿಯವರೆವಿಗೆ ಹಿಂದೂ ಧರ್ಮ ಸತ್ತಂತೆ.

ಅಸ್ಪೃಶ್ಯತೆ ಬದುಕಿದರೆ, ಹಿಂದೂ ಧರ್ಮ ಸಾಯಲೇಬೇಕು.

ರಾವಣ ಒಬ್ಬ ರಾಕ್ಷಸ. ಅಸ್ಪೃಶ್ಯತೆ ಎಂಬ ರಾಕ್ಷಸ ರಾವಣನಿಗಿಂತಲೂ ಕ್ರೂರ.

ಅಸ್ಪೃಶ್ಯತೆ ಬದುಕಿದರೆ ಹಿಂದೂ ಧರ್ಮದ ನಾಶ. ಅದು ಭಾರತದ ನಾಶವೂ ಹೌದು. ಆದರೆ ಹಿಂದೂವಿನ ಹೃದಯ ಮೂಲದಿಂದ ಅಸ್ಪೃಶ್ಯತೆ ಅಳಿಸಿ ಹೋದರೆ. ಹಿಂದೂ ಧರ್ಮ ಪ್ರಪಂಚಕ್ಕೆ ಉತ್ತಮ ಸಂದೇಶ ನೀಡಬಹುದು.

ಗಾಂಧೀಜಿ

# ದೇವರು ರುಜು ಮಾಡಿದನು

ಎ. ಪಿ. ಗೌರೀಶಂಕರ
'ಶ್ರೀಶೈಲ' ಪಿಂಟೋಲೇನ್ ಕ್ರಾಸ್
(ವಿನಯ ಕ್ಲಿನಿಕ್ ಎದುರು)
ಕರಂಗಲ್ಪಾಡಿ, ಮಂಗಳೂರು–೫೭೫ ೦೦೩

ಅಹಮ್ಮದಾಬಾದ್ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ. ೧೯೨೨ ಮಾರ್ಚ್ ೧೮ ರ ಪೂರ್ವಾಹ್ನ ಹನ್ನೊಂದು ಗಂಟೆ. ನ್ಯಾಯಾಲಯದ ಸುತ್ತ ಪೋಲೀಸು ಬಿಗು ಪಹರೆ; ಒಳಗೆ ವಕೀಲರ, ಪಕ್ಷಗಾರರ, ಪ್ರೇಕ್ಷಕರ ದಟ್ಟ ಸಂದಣಿ, ಜನರ ಬಿಸುಸುಯ್ಲು ಪಿಸುದನಿ, ಪೋಲೀಸರ ಬೂಟುಗಾಲಿನ ಸದ್ದು, ಗುಮಾಸ್ತರ ಅವಸರದ ಓಡಾಟ, ಉಸಿರುಗಟ್ಟಿಸುವ ವಾತಾವರಣ. ಉಕ್ಕಿನ ಬಲೆಯಾವರಿತ ಪೋಲೀಸು ವಾಹನ ನ್ಯಾಯಾಲಯದ ದ್ವಾರದಲ್ಲಿ ಬಂದು ನಿಂತಿತು. ಪಹರೆ ಪೋಲೀಸರ ಕಟ್ಟೆಚ್ಚರದಲ್ಲಿ ಇಬ್ಬರು ಕೈದಿಗಳನ್ನು ನ್ಯಾಯಾಲಯದೊಳಕ್ಕೆ ಕರೆತಂದರು: ಮಧ್ಯವಯಸ್ಕ, ನಡುಎತ್ತರದ, ಬಡಕಲು ದೇಹದ ಸಾಣೆ ತಲೆಯ ಅರೆನಗ್ನ ವ್ಯಕ್ತಿ ಮತ್ತು ಆತನ ಸಂಗಾತಿ. ನ್ಯಾಯಾಲಯದ ದಟ್ಟಣಿಸಿದ ಜನಸಂದಣಿ ಸ್ವಯಂಪ್ರೇರಿತವಾಗಿ, ಕೇವಲ ಸ್ವಾಭಾವಿಕ ಎಂಬಂತೆ ಅರೆನಗ್ನ ಅಪರಾಧಿಗೆ ಗೌರವಪೂರ್ವಕವಾಗಿ ಅಭಿವಂದಿಸಿ, ಎದ್ದು ನಿಂತಿತು. ಇಂಗ್ಲೆಂಡಿನ ಮಹಾಪ್ರಧಾನಿ ಅರೆನಗ್ನ ಫಕೀರನೆಂದು ಗೇಲಿ ಮಾಡಿದ್ದ ಭಾರತದ ಜನಕೋಟಿಯ ಬಂಧು ಮಹಾತ್ಮ ಕಾನೂನಿನ ದೃಷ್ಟಿಯಲ್ಲಿ ರಾಷ್ಟ್ರದ್ರೋಹಿ ಅಪರಾಧಿ, ತಮ್ಮ ಸ್ವಭಾವ ಸಹಜ ಮಂದಹಾಸ ಬೀರುತ್ತ, ಸಂಗಾತಿ, ಸಹಅಪರಾಧಿ ಶಂಕರ್ ಲಾಲ್ ಬ್ಯಾಂಕರ್ ಜತೆ ಅಪರಾಧಿ ಕಟಕಟೆಯನ್ನು ಸೇರಿದರು.

ಕೃಪೆ: ನವಜೀವನ ಟ್ರಸ್ಟ್

ತಮ್ಮ ಅಸಹಕಾರ ಆಂದೋಲನದಲ್ಲಿ ಸಹಭಾಗಿಗಳಾದ ಸುಪರಿಚಿತ ಮಿತ್ರರನ್ನೆಲ್ಲಾ ನೋಡುತ್ತಾ ಮೃದುವಾಗಿ ಅಭಿನಂದಿಸಿದರು.

ಕೈದಿಗಳ ಅಪರಾಧಗಳೇನು? ಅವರು ನಡೆಸುತ್ತಿದ್ದ ಯಂಗ್ ಇಂಡಿಯಾ ಮಾಸ ಪತ್ರಿಕೆಯಲ್ಲಿ "ರಾಜ ನಿಷ್ಠೆಗೆ ಆತಂಕ" "ಸಮಸ್ಯೆಯ ಪರಿಹಾರ" ಮತ್ತು "ಕೇಸರದ ಕುಲುಗಾಟ" ಎಂಬ ಲೇಖನಗಳನ್ನು ಬರೆದು ಪ್ರಕಟಿಸಿದ್ದರು. ಆ ಲೇಖನಗಳಲ್ಲಿ—ಕಾನೂನು ಪ್ರಕಾರ ಭಾರತದಲ್ಲಿ ಸ್ಥಾಪನೆಗೊಂಡ ಸರಕಾರದ ಸಾರ್ವಭೌಮತೆ ನಿರಾಕರಿಸುವ ಮತ್ತು ಅನಾದರಿಸುವ ಪ್ರಚಾರ ಮಾಡಿ, ರಾಜದ್ರೋಹ ಅಪರಾಧ ಮಾಡಿದ್ದಾರೆಂಬುದು ಆಪಾದನೆ. ಶಂಕರ್ ಲಾಲ್ ಬ್ಯಾಂಕರ್ 'ಯಂಗ್ ಇಂಡಿಯಾ'ದ ಪ್ರಕಾಶಕರು—ಹಾಗಾಗಿ ಸಹ ಅಪರಾಧಿ. ಈ ಆಪಾದನೆಗಳ ಕುರಿತು ಬ್ರಿಟಿಷ್ ಸರಕಾರ ಸ್ಥಾಪಿಸಿದ, ನ್ಯಾಯಾಲಯದಲ್ಲಿ ಬ್ರಿಟಿಷ್ ನ್ಯಾಯಾಧೀಶರ ಸಮ್ಮುಖದಲ್ಲಿ ವಿಚಾರಣೆ. ಫಿರ್ಯಾದಿದಾರರ ಪರವಾದ ವಕೀಲರೂ ಬ್ರಿಟಿಷ್ ಪ್ರಜೆ.

ಈ ಐತಿಹಾಸಿಕ ಪ್ರಸಿದ್ಧ ನ್ಯಾಯ ತೀರ್ಮಾನದ ವೈಶಿಷ್ಟ್ಯಕ್ಕೆ ಒಪ್ಪಕೊಡುವಂತೆ ನ್ಯಾಯಾಧೀಶ: ಐ.ಸಿ.ಯಸ್. ಪದವಿ ವಿಜೇತ ಪ್ರಾಜ್ಞ ಉದಾರ ವಿನೀತ, ಕರ್ತವ್ಯನಿಷ್ಠ ಅಪರಾಧಿಯ ಶ್ರೇಷ್ಠತೆಯನ್ನು ಸಹೃದಯತೆಯಲ್ಲಿ ಅರಿತಿದ್ದ

ಅಂದಿನ ಭಾರತದ ನ್ಯಾಯಾಧೀಶರಲ್ಲಿ ಬಹು ಗೌರವಸ್ಥ–ಬ್ರೂಮ್‌ಫೀಲ್ಡ್. ನ್ಯಾಯಾಧೀಶರು ತಮ್ಮ ಆಸನಕ್ಕೇರಿದಂತೆಯೇ ಲಗುಬಗೆಯಲ್ಲಿ ವಿಚಾರಣೆ ಪ್ರಾರಂಭಿಸಿದರು. ಆಪಾದನೆಗಳನ್ನು ಓದಿ ಹೇಳಿದಾಗ ಅಪಾದಿತರು ಒಪ್ಪಿಕೊಂಡರು. ಹಾಗಿದ್ದರೂ ಸರಕಾರಿ ಪರ ವಕೀಲರು ಸರ್ ಸ್ಟ್ರ್ಯಾಂಗ್‌ಮೇನ್‌ರವರು, ವಿಚಾರಣೆಯು ಕಾನೂನಿನ ನಿಯಮಗಳ ಪ್ರಕಾರ, ಸಂಪೂರ್ಣ ನಡವಳಿಕೆಯಲ್ಲಿ ಏನನ್ನೂ ಹ್ರಸ್ವಗೊಳಿಸದೆ ಜರಗಿಸತಕ್ಕದ್ದೆಂದು ಸರಕಾರ ಇಚ್ಛಿಸುತ್ತದೆಂದು ವಿಜ್ಞಾಪಿಸಿದರು. ಆದರಂತೆ, ಅವರ ಪ್ರಾರಂಭಿಕ ವಾದ ಮಂಡನೆಯಾಯ್ತು. 'ಯಂಗ್ ಇಂಡಿಯಾ'ದಲ್ಲಿ ಪ್ರಕಟಗೊಂಡ ಲೇಖನಗಳಲ್ಲಿ ಸರಕಾರದ ವಿರೋಧ ಜನಗಳನ್ನು ಎತ್ತಿಕಟ್ಟಿ ಪ್ರಚಾರ ಮಾಡುವ ರಾಜದ್ರೋಹಿ ಕೆಲಸ ಮಾಡಿರುವುದು ಸಂಪೂರ್ಣ ರುಜುವಾತಾಗಿರುವುದರಿಂದ ಗರಿಷ್ಠತಮ ಶಿಕ್ಷೆ ವಿಧಿಸಬೇಕೆಂದು ವಿನಂತಿಸಿದರು. ಆಪಾದಿತರುಗಳಿಗೆ ತಮ್ಮನ್ನು ಸಮರ್ಥಿಸಿಕೊಳ್ಳಲು ಅವಕಾಶ ನೀಡಲಾಯಿತು.

ಆಪಾದನೆಗಳಿಗೆ ಸಂಬಂಧಿಸಿದ ಲೇಖನಗಳನ್ನು ಮತ್ತು ಅವುಗಳಲ್ಲಿ ಮಂಡಿಸಿದ ವಾದಗಳನ್ನು ಸಮರ್ಥಿಸುವ ಹೇಳಿಕೆಯನ್ನು ಮಹಾತ್ಮಾ ಗಾಂಧಿಯವರು ಓದಿ ಹೇಳಿದರು. ಅವರ ಹೇಳಿಕೆಯ ಸಂಗ್ರಹಿತ ರೂಪ ಹೀಗಿದೆ. ಮಾನ್ಯ ಸರಕಾರಿಪರ ವಕೀಲರು ಮಾಡಿರುವ ಆಪಾದನೆಗಳೆಲ್ಲವೂ ಸತ್ಯ. ಈಗ ಅಧಿಕಾರಾರೂಢ ಸರಕಾರದ ವಿರೋಧ ಅವಿಶ್ವಾಸ ಹಾಗೂ ಅತೃಪ್ತಿ ಸಾರ್ವಜನಿಕವಾಗಿ ವ್ಯಕ್ತಪಡಿಸಿ ಪ್ರಚಾರ ಮಾಡುವುದು ನನ್ನ ಸ್ವಭಾವ ಸಿದ್ಧ ಹವ್ಯಾಸವಾಗಿದೆ. ಈ ಕುರಿತು ಸಾಕಷ್ಟು ಪ್ರಚಾರವನ್ನು ಮಾಡಿದ್ದೇನೆ. ಈ ಪ್ರಚಾರದ ಪರಿಣಾಮವನ್ನು ಮತ್ತು ಅದರ ಜವಾಬ್ದಾರಿಕೆಯನ್ನು ಸಂಪೂರ್ಣ ಅರಿತಿದ್ದು, ಸರಕಾರದ ವಿರೋಧ ಪ್ರಚಾರ ಮಾಡಿದ್ದೇನೆ. ಈ ಕುರಿತು ಯಾರ ಕ್ಷಮೆಯನ್ನೂ ಯಾಚಿಸುವುದಿಲ್ಲ. ಆದರೆ ಅಹಿಂಸೆ ನನ್ನ ಧೋರಣೆಯ ಅಡಿಗಟ್ಟು. ಅದು ನನ್ನ ಬೋಧನೆಯ ಪ್ರಥಮಾಕ್ಷರ ಹಾಗೂ ಕೊನೆಯದು. ಸರಕಾರೀ ವಕೀಲರ ವಾದದಲ್ಲಿ ಹೇಳಿರುವಂತೆ, ಮುಂಬಯಿಯಲ್ಲಿ, ಮದರಾಸಿನಲ್ಲಿ, ಹಾಗೂ ಚೌರೀಚಾರದಲ್ಲಿ ಭುಗಿಲೆದ್ದ, ಹಿಂಸೆಗಳಿಗೆ ಅಸಹಕಾರಿ ಚಳವಳಿ ಕಾರಣವೆಂಬುದನ್ನು ಅತಿ ದುಃಖದಲ್ಲಿ ಒಪ್ಪಿಕೊಳ್ಳುತ್ತೇನೆ. ಸಾಕಷ್ಟು ವಿದ್ಯಾವಂತನಾಗಿದ್ದು, ಲೋಕಾನುಭವ ಸಾಕಷ್ಟು ಇರುತ್ತಿದ್ದು ಚಳವಳಿಯ ಪರಿಣಾಮ ಏನಾಗಬಹುದೆಂಬ ತಿಳುವಳಿಕೆ ನನಗಿರಬೇಕಿತ್ತು. ಅದರ ಜವಾಬ್ದಾರಿಕೆಯ ಅರಿವಿರಬೇಕಿತ್ತು–ಎಂದು ಸರಕಾರಿ ವಕೀಲರು ಆಪಾದಿಸಿರುವುದು ಸರಿ. ಬೆಂಕಿಯೊಡನೆ ಆಟವಾಡಿದರೇನಾಗುತ್ತದೆಂಬ ಅರಿವಿದ್ದೂ ಅಸಹಕಾರಿ ಚಳವಳಿಯ ಪರಿಣಾಮಕ್ಕೆ ಸಿದ್ಧನಾಗಿದ್ದೆ. ತಾವು ನನ್ನನ್ನು ಬಂಧಮುಕ್ತಗೊಳಿಸಿದರೆ, ಪುನಃ ಅದನ್ನೇ ಮಾಡಲಿಚ್ಛಿಸುತ್ತೇನೆ. ನನ್ನೆದುರಿಗಿರುವ ಆಯ್ಕೆಗಳು ಕೇವಲ ಎರಡು: ನಮ್ಮ ದೇಶಕ್ಕೆ ಅಪಾರ ಹಾನಿ ಮಾಡಿದ ಈ ಸರಕಾರೀ ವ್ಯವಸ್ಥೆಯನ್ನು ಒಪ್ಪಿಕೊಂಡು ಸಹಕರಿಸಿ ನಡೆದುಕೊಳ್ಳುವುದು; ಅಥವಾ, ಈ ಸರಕಾರದ ಎದುರು ನಾನು ಮಾಡುವ

ಪ್ರಚಾರದಿಂದ ಸತ್ಯ ತಿಳಿದ ಜನ ಸಮುದಾಯದ ಕೋಪದ ಆಸ್ಫೋಟನೆಯನ್ನು ಎದುರಿಸುವುದು. ನಮ್ಮ ಜನರು ಕೆಲವು ಸಂದರ್ಭಗಳಲ್ಲಿ ರೊಚ್ಚಿಗೆದ್ದು ಮಿತಿಗೆಟ್ಟು ನಡೆದುಕೊಳ್ಳುತ್ತಾರೆಂಬುದು ಸತ್ಯ. ಇದು ಖೇದಕರ. ನನ್ನ ಪ್ರಚಾರಗಳ ಪರಿಣಾಮಗಳನ್ನು ಅರಿತಿದ್ದೂ, ಮಾಡಿದ ಈ ಅಪರಾಧಗಳಿಗೆ ತಕ್ಕ ಶಿಕ್ಷೆ ವಿಧಿಸಬೇಕೆಂದು ವಿನಂತಿಸುತ್ತೇನೆ. ಮೌನವಾಗಿರುವುದರಿಂದ ಹೀಗೆ ವಿನಂತಿಸುವುದು ನನ್ನ ಕರ್ತವ್ಯವೂ ಆಗಿದೆ. ತಾವು ನ್ಯಾಯಾಧೀಶರು ತಮ್ಮೆದುರು ಎರಡು ಆಯ್ಕೆಗಳಿವೆ ಎಂದು ನನಗನಿಸುತ್ತದೆ: ಮೊದಲನೆಯದು, ತಮ್ಮ ಹುದ್ದೆಗೆ ರಾಜೀನಾಮೆ ಕೊಡುವುದು. ಅಥವಾ ಈ ಕಾನೂನು ಹಾಗೂ ಆಡಳಿತ ವ್ಯವಸ್ಥೆ ಈ ದೇಶದ ಜನರಿಗೆ ಹಿತಕರವೆಂದು ತಾವು ನಿಜಕ್ಕೂ ಪರಿಗ್ರಹಿಸಿದ್ದರೆ, ನನಗೆ ಗರಿಷ್ಠ ಶಿಕ್ಷೆ ವಿಧಿಸುವುದು. ಆದು ಹೇಗಿದ್ದರೂ ತಮ್ಮ ನಿಲುವನ್ನು ಬದಲಿಸಿ ನನ್ನ ಅಭಿಪ್ರಾಯ ತಾವು ಸ್ವೀಕರಿಸುವ ನಿರೀಕ್ಷೆ ನನಗಿಲ್ಲ. ಪ್ರಾರಂಭದಲ್ಲಿ ಬ್ರಿಟಿಷ್ ಸರಕಾರದ ನಿಷ್ಠೆಯ ಭಕ್ತನಾಗಿದ್ದವನು ಈಗ ಅದರ ಕಡು ವಿರೋಧಿ ಮತ್ತು ಅಸಹಕಾರಿಯಾಗಲು ಕಾರಣವೇನೆಂಬುದರ ಕುರಿತು ಇಂಗ್ಲೆಂಡಿನ ಜನತೆಗೂ, ಭಾರತದಲ್ಲಿ ಸರಕಾರ ಪರ ಜನರಿಗೂ ತಿಳಿಯಬಯಸುವೆನು.

ದಕ್ಷಿಣ ಆಫ್ರಿಕದಲ್ಲಿ ೧೮೯೩ ರಲ್ಲಿ ಬಹಳ ಪ್ರತಿಕೂಲ ರಾಜಕೀಯ ಪರಿಸ್ಥಿತಿಯಲ್ಲಿ ನನ್ನ ಸಾರ್ವಜನಿಕ ಜೀವನ ಪ್ರಾರಂಭವಾಯಿತು. ಆಗ ಬ್ರಿಟಿಷ್ ಅಧಿಕಾರಿಗಳೊಡನೆ ಸಂಪರ್ಕ ಬಹಳ ಕ್ಲೇಶದಾಯಕವಾಗಿರುತ್ತಿತ್ತು. ಒಬ್ಬ ವ್ಯಕ್ತಿಯಾಗಿ, ಅದರಲ್ಲೂ ಭಾರತೀಯನಾಗಿ ಯಾವುದೇ ಹಕ್ಕು ನನಗಿರಲಿಲ್ಲ. ಅಥವಾ ನಾನು ಭಾರತೀಯನಾಗಿದ್ದ ಕಾರಣಕ್ಕಾಗಿಯೇ ಹಕ್ಕುಗಳನ್ನು ನಿರಾಕರಿಸಲಾಗಿದೆ ಎಂಬುದನ್ನೂ ಕಂಡುಕೊಂಡೆ. ಹಾಗಿದ್ದರೂ, ಅಪ್ರತಿಭನಾಗದೆ, ಮೂಲತಃ ಬ್ರಿಟಿಷ್ ಸರಕಾರ ಹಾಗೂ ಆಡಳಿತ ವ್ಯವಸ್ಥೆ ಒಳ್ಳೆಯದಿದೆ ಎಂಬುದಾಗಿ ನಂಬಿದ್ದೆ. ಭಾರತೀಯರನ್ನು ನಿಕೃಷ್ಟವಾಗಿ ನಡೆಯಿಸಿಕೊಳ್ಳುವ ಆಡಳಿತ ಧೋರಣೆಯು ಮೂಲತಃ ಆರೋಗ್ಯಕರ ಹಾಗೂ ಒಳ್ಳೆಯ ಆಡಳಿತದ ಮೇಲೆ ಅಸ್ವಾಭಾವಿಕವಾಗಿ ಬೆಳೆದ ತಾತ್ಕಾಲಿಕ ಮತ್ತು ಗುಣಪಡಿಸಬಹುದಾದ ಮೇಲ್ಪದರದ ಗಾವು ಎಂದು ಭಾವಿಸಿ ಸರಕಾರಕ್ಕೆ ಹೃತ್ಪೂರ್ವಕ ಸಹಕಾರ ನೀಡಿದೆ. ಸರಕಾರದ ತಪ್ಪುಗಳನ್ನು ನಿರ್ಭಯವಾಗಿ ಟೀಕಿಸುತ್ತಿದ್ದರೂ, ಅದನ್ನು ಅಸ್ಥಿರಗೊಳಿಸುವ ಉದ್ದೇಶವಿರಲಿಲ್ಲ. ಬೋವರ್ ಯುದ್ಧದ ಪರಿಣಾಮವಾಗಿ ೧೮೯೯ ರಲ್ಲಿ ಸರಕಾರ ಅಸ್ಥಿರಗೊಂಡಾಗ ಅದರ ಸೇವೆಗೆ ಮುಂದಾದೆ. ಯುದ್ಧದಲ್ಲಿ ಗಾಯಗೊಂಡವರ ಶುಶ್ರೂಷೆ ಮತ್ತು ಚಿಕಿತ್ಸೆಗೆ ಸ್ವಯಂ ಸೇವಕ ದಳ ಸಂಕಲಿಸಿದೆ. ಅನಂತರ ೧೯೦೬ ರಲ್ಲಿ ಜೂಲೂ ದಂಗೆ ಸಂಭವಿಸಿದಾಗ, ಪುನಃ ಗಾಯಾಳುಗಳ ಶುಶ್ರೂಷೆಗೆ ಏರ್ಪಾಡು ಮಾಡಲು ಮನಃಪೂರ್ವಕ ಸಹಕರಿಸಿ ದುಡಿದಿದ್ದೆ. ಸರಕಾರ ಆ ಕಾರಣಕ್ಕಾಗಿ ನನ್ನನ್ನು ಅಭಿನಂದಿಸಿ ಪ್ರಶಸ್ತಿ ಪದಕಗಳನ್ನು ನೀಡಿತ್ತು. ನನ್ನ ಸೇವೆಯ ಕುರಿತು ಸರಕಾರದ ದಾಖಲೆ ಪತ್ರಗಳಲ್ಲಿ ವಿಶೇಷ ಹೊಗಳಿಕೆಯ ಉಲ್ಲೇಖಗಳಿದ್ದುವು. ಲಾರ್ಡ್ ಹಾರ್ಡಿಂಗ್‌ರವರು

ನನ್ನ ಸೇವೆಯನ್ನು ಗುರುತಿಸಿ ಕೈಸರ್-ಇ-ಹಿಂದ್ ಪ್ರಶಸ್ತಿ ಪದಕ ನೀಡಿದರು. ಇಂಗ್ಲೆಂಡ್ ಮತ್ತು ಜರ್ಮನಿ ನಡುವೆ ೧೯೧೪ರಲ್ಲಿ ಯುದ್ಧ ನಡೆದಾಗ ಮುಖ್ಯವಾಗಿ ಭಾರತೀಯ ವಿದ್ಯಾರ್ಥಿಗಳಿಂದ ಕೂಡಿದ ಗಾಯಾಳು ಚಿಕಿತ್ಸಾ ಸ್ವಯಂ ಸೇವಕ ದಳಗಳನ್ನು ಲಂಡನ್ ನಗರದಲ್ಲಿ ರಚಿಸಿದೆ. ಅವರ ಸೇವೆಯನ್ನು ಸರಕಾರ ಸ್ಮರಿಸಿ ಪ್ರಶಂಸಿರುತ್ತದೆ. ಕೊನೆಯದಾಗಿ ೧೯೧೮ರಲ್ಲಿ ದಿಲ್ಲಿಯಲ್ಲಿ ಜರುಗಿದ ಯುದ್ಧ ಕುರಿತಾದ ಸಮಾವೇಶದಲ್ಲಿ ಲಾರ್ಡ್ ಚೆಮ್ಸ್‌ಫರ್ಡ್‌ರು ಸೈನಿಕ ನೇಮಕಾತಿಗೆ ಕರೆಕೊಟ್ಟಾಗ, ನನ್ನ ಅನಾರೋಗ್ಯ ಸ್ಥಿತಿಯನ್ನು ಗಣಿಸದೆ ಸೈನಿಕರ ಪಡೆ ಸೇರಲು ಖೇಡಾದಲ್ಲಿ ಅವಿರತ ಶ್ರಮಿಸಿದೆನು. ಈ ಎಲ್ಲ ಸೇವೆಗಳಲ್ಲಿ ನಿರತನಾಗಿರುತ್ತಿದ್ದಾಗ, ಬ್ರಿಟಿಷ್ ಸಾಮ್ರಾಜ್ಯದಲ್ಲಿ ಭಾರತೀಯರಿಗೆ ಸರ್ವ ಸಮಾನ ಹಾಗೂ ಗೌರವದ ಸ್ಥಾನ ಸಿಗುವಂತಾಗಬಹುದೆಂದು ಯೋಜಿಸಿದ್ದೆ.

ಭಾರತೀಯರ ಸ್ವಾತಂತ್ರ್ಯವನ್ನು ಸಂಪೂರ್ಣ ರದ್ದುಪಡಿಸುವ ಉದ್ದೇಶದಲ್ಲಿ ರೂಪಿಸಿದ ರಾಲತ್ ಕಾಯದೆ ಜಾರಿಗೆ ಬಂದಾಗ ಮೊದಲ ಅಘಾತವಾಯ್ತು. ಆ ಕಾಯದೆ ವಿರೋಧ ತೀವ್ರ ಚಳವಳಿಯ ನೇತೃತ್ವ ವಹಿಸಬೇಕೆಂದೆನಿಸಿತು. ಅನಂತರ ಜಾಲಿಯಾನವಾಲಾಭಾಗ್ ಹತ್ಯೆಯಿಂದ ಪ್ರಾರಂಭಿಸಿದ, ಪಂಜಾಬಿನ ಭೀಕರ ದುರಾಡಳಿತ ಕೃತ್ಯಗಳು, ಭಾರತೀಯರು ರಸ್ತೆಯಲ್ಲಿ ತೆವಳಿ ಚಲಿಸಬೇಕೆಂಬ ಕಟ್ಟಾದೇಶ, ಸಾರ್ವಜನಿಕವಾಗಿ ಚಡಿ ಏಟು ಅಲ್ಲದೆ ವಿವರಣೆಗೆ ಮೀರಿದ ಇತರ ಅಪಮಾನಕರ ದುಷ್ಟ ಆದೇಶಗಳು ನನ್ನನ್ನು ದಂಗು ಬಡಿಸಿದುವು. ಅಷ್ಟಲ್ಲದೆ, ಟರ್ಕಿ ದೇಶದ ಸಮಗ್ರತೆ ಮತ್ತು ಇಸ್ಲಾಮಿನ ಪವಿತ್ರ ಸ್ಥಳಗಳ ಕುರಿತಾಗಿ ಬ್ರಿಟಿಷ್ ಮಹಾ ಪ್ರಧಾನಿ ಭಾರತದ ಮುಸಾಲ್ಮಾನರಿಗೆ ನೀಡಿದ್ದ ಆಶ್ವಾಸನೆಯನ್ನು ಪೂರೈಸುವ ಇರಾದೆ ಅವರಿಗೆ ಇರುವುದಿಲ್ಲವೆಂದು ನನಗೆ ಕಂಡುಬಂತು. ಇವೆಲ್ಲಾ ಕೆಟ್ಟ ಭವಿಷ್ಯದ ಸೂಚನೆ ಇರುತ್ತಿದ್ದಾಗಲೂ ಮತ್ತು ೧೯೧೯ರಲ್ಲಿ ಅಮೃತಸರ ಕಾಂಗ್ರೆಸ್ ಅಧಿವೇಶನದಲ್ಲಿ ನನ್ನ ಸ್ನೇಹಿತರು ಜಾಗ್ರತೆಯ ಎಚ್ಚರಿಕೆ ನೀಡಿದ್ದರೂ, ಮಾಂಟೆಗ್ಯೂ ಚೆಮ್ಸ್‌ಫರ್ಡ್ ಸುಧಾರಣೆಗಳನ್ನು ಕಾರ್ಯರೂಪಕ್ಕೆ ತರಲು ಸರಕಾರದೊಡನೆ ಸಹಕರಿಸಿ ಕೆಲಸ ಮಾಡಿದೆ. ಬ್ರಿಟಿಷ್ ಪ್ರಧಾನಿ ಮುಸಲ್ಮಾನರಿಗೆ ನೀಡಿದ್ದ ಆಶ್ವಾಸನೆಯನ್ನು ಪೂರೈಸುವರೆಂದು ನಂಬಿ ಸಹಕರಿಸಿದ್ದೆ. ಪಂಜಾಬ್ ಅಘಾತದ ನೋವು ಶಮನವಾಗಬಹುದೆಂದು ನಂಬಿದ್ದೆ. ಮಾಂಟೆಗ್ಯೂ ಚೆಮ್ಸ್‌ಫರ್ಡ್ ಸುಧಾರಣೆಗಳು ತೃಪ್ತಿಕರವಾಗಿಲ್ಲವಾದರೂ, ಭಾರತದ ಜನಜೀವನದಲ್ಲಿ ಶುಭ ಕಾಲೋದಯವಾಗಬಹುದೆಂದು ಭ್ರಮಿಸಿದೆ. ಆದರೆ ನನ್ನ ಶುಭ ನಿರೀಕ್ಷೆಗಳೂ ನಾಶವಾದುವು. ಖಿಲಾಫತ್ ಆಶ್ವಾಸನೆಯನ್ನು ಮುರಿಯಲಾಯಿತು. ಪಂಜಾಬಿನ ದುರಾಡಳಿತದಲ್ಲಿ ಸಂಭವಿಸಿದ ಘೋರ ಅಪರಾಧಗಳನ್ನು ಮುಚ್ಚಿಹಾಕಲಾಯಿತು. ಹೆಚ್ಚಿನ ಅಪರಾಧಿಗಳು ಶಿಕ್ಷೆಗೆ ಗುರಿಯಾಗದೇ ಪಾರಾದರು. ಕೆಲವು ಅಪರಾಧಿಗಳು ಸೇವೆಯಿಂದ ನಿವೃತ್ತಿಹೊಂದಿ ಭಾರತದ ಬೊಕ್ಕಸದಿಂದ ನಿವೃತ್ತಿ ವೇತನ ಪಡೆದು ವಿಶ್ರಮಿಸುವ ಅನುಕೂಲತೆ ಪಡೆದರು. ಇನ್ನೂ ಕೆಲವು ಅಪರಾಧಿಗಳಿಗೆ

ವಿಶೇಷ ಬಹುಮಾನ ನೀಡಿ ಗೌರವಿಸಲಾಯಿತು. ಸರಕಾರ ಘೋಷಿಸಿದ ಸುಧಾರಣೆಗಳು ನಿಜವಾದ ಸುಧಾರಣೆಗಳಲ್ಲಿ ಸರಕಾರದ ವರಿಷ್ಠರ ಹೃದಯ ಪರಿವರ್ತನೆಯಾಗಿಲ್ಲವೆಂಬುದು ಇವೆಲ್ಲವುಗಳಿಂದ ಸ್ಪಷ್ಟವಾಗಿ ಗೋಚರವಾಯಿತು. ಭಾರತದ ಸಂಪತ್ತನ್ನು ಬಲಾತ್ಕಾರವಾಗಿ ಹೀರುವ ಮತ್ತು ಭಾರತೀಯರ ದಾಸ್ಯವನ್ನು ಅನಿರ್ದಿಷ್ಟವಾಗಿ ಮುಂದುವರಿಸುವ ದುಷ್ಟ ಯೋಜನೆಯೆಂಬುದು ಸನಗರಿವಾಯಿತು.

ಬ್ರಿಟಿಷ್ ಸಂಪರ್ಕದಿಂದಾಗಿ ಭಾರತ ಆರ್ಥಿಕವಾಗಿಯೂ, ರಾಜಕೀಯವಾಗಿಯೂ ಹಿಂದೆಂದಿಗಿಂತಲೂ ನಿಶ್ಯಕ್ತವಾಗಿದೆ. ಭಾರತ ಯಾವುದೇ ಆಯುಧಸನ್ನದ್ಧವಿಲ್ಲವಾಗಿದ್ದು ಬಾಹ್ಯಾಕ್ರಮಣವಾದರೆ ಎದುರಿಸಲು ನಿಶ್ಯಕ್ತವಾಗಿದೆ. ಆ ಕಾರಣಕ್ಕಾಗಿಯೇ, ಡೊಮಿನಿಯನ್ ಸ್ಟೇಟಸ್ ಹೊಂದುವಷ್ಟು ರಾಜಕೀಯ ಪ್ರಗತಿ ಸಾಧಿಸಲು ತಲೆಮಾರುಗಳ ಕಾಲಾವಧಿ ಬೇಕೆಂದು ಕೆಲವು ಪ್ರಾಜ್ಞರ ಅಭಿಪ್ರಾಯವಿದೆ. ಕಡು ಬಡತನವಿರುವುದರಿಂದ ಕ್ಷಾಮ ನಿಭಾಯಿಸಲು ಅದಕ್ಕೆ ಸಾಧ್ಯವಿಲ್ಲದಾಗಿದೆ. ಬ್ರಿಟಿಷರು ಭಾರತದಲ್ಲಿ ಕಾಲಿಡುವ ಮೊದಲು, ಕೋಟಿಗಟ್ಟಲೆ ಗುಡಿಸಲುಗಳಲ್ಲಿ ಬಟ್ಟೆ ನೇಯ್ಗೆಯು ಕೃಷಿ ಆದಾಯಕ್ಕೆ ಪೂರಕವಾಗಿರುತ್ತಿತ್ತು. ಬ್ರಿಟಿಷ್ ಆಡಳಿತ ಭಾರತದ ಗುಡಿ ಕೈಗಾರಿಕೆಗಳನ್ನು, ಇಂಗ್ಲೀಷ್ ಸಾಕ್ಷಿಗಳೇ ಹೇಳಿರುವಂತೆ, ನಂಬಲು ಸಾಧ್ಯವಾಗದ ನಿರ್ದಯ ಹಾಗೂ ಅಮಾನುಷ ಕ್ರಮಗಳೆಲ್ಲ ನಾಶಪಡಿಸಿರುತ್ತದೆ. ಹಳ್ಳಿ ನಿವಾಸಿ, ಅರೆಹೊಟ್ಟೆಯ ಬಡಜನರು ದಿನೇ ದಿನೇ ನಿಶ್ಯಕ್ತ ಶವಗಳಾಗುತ್ತಿದ್ದಾರೆಂಬುದು ನಗರವಾಸಿಗಳಿಗೆ ತಿಳಿಯದು ಪರದೇಶಿ ಶೋಷಣೆಗಾರ ಕೊಡುವ ದಲ್ಲಾಲಿ ವೇತನದಲ್ಲಿ ನಗರವಾಸಿಗಳು ವಿಲಾಸ ಜೀವನ ನಡೆಸುತ್ತಿದ್ದಾರೆ. ತಾವು ಪಡೆಯುವ ದಲ್ಲಾಲೀ ವೇತನ ಬಡಜನರ ರಕ್ತಹೀರಿ ಸಂಗ್ರಹಿಸಲಾಗಿದೆ ಎಂಬುದೂ ಅವರಿಗೆ ತಿಳಿಯದು. ಕಾಯಿದೆ ಪ್ರಕಾರ ಸ್ಥಾಪನೆಯಾದ ಬ್ರಿಟಿಷ್ ಸರಕಾರ ಜನಸಾಮಾನ್ಯರ ಶೋಷಣೆಗಾಗಿಯೇ ಉಳಿದಿದೆ ಎಂಬುದನ್ನು ಅವರು ಕಾಣಲಾರರು. ಗ್ರಾಮೀಣ ಪ್ರದೇಶಗಳ ಅಲೆದಾಡುವ ಅಸ್ಥಿಪಂಜರಗಳ ಸಾಕ್ಷ್ಯವನ್ನು ಬರಿಯ ಅಂಕೆ ಸಂಖ್ಯೆಗಳ ತಂತ್ರಾಧಾರಿತ ನಾಜೂಕುವಾದ ಅಳಿಸಿ ಹಾಕಲಾರದು.

ಇಂಗ್ಲೆಂಡಿನ ಜನತೆ ಮತ್ತು ನಮ್ಮ ದೇಶದ ನಗರ ನಿವಾಸಿಗಳು ಈ ಪ್ರಕಾರ ಮಾನವ ಕುಲಕ್ಕೇನೆ ಮಹಾಪರಾಧ ಮಾಡಿರುತ್ತಾರೆ. ಚರಿತ್ರೆಯಲ್ಲಿ ಇದಕ್ಕೆ ಸರಿದೂಗುವ ಅಪರಾಧ ಇರಲಾರದು. ಪರದೇಶಿ ಶೋಷಣೆಗಾರರ ಅನುಕೂಲಕ್ಕಾಗಿಯೇ ಕಾಯಿದೆಯ ದುರುಪಯೋಗವಾಗುತ್ತಿದೆ. ನಿಷ್ಪಕ್ಷಪಾತವಾಗಿ ಪಂಜಾಬ್‌ನಲ್ಲಿ ಮಾರ್ಷಲ್ ಕಾಯಿದೆ ಆಡಳಿತೆಯನ್ನು ಪರಾಮರ್ಶೆ ಮಾಡಿ ನಾನು ತಿಳಿದಿರುವಂತೆ ಸಾಧಾರಣ ಶೇಕಡಾ ೯೫ ಕ್ರಿಮಿನಲ್ ಮೊಕದ್ದಮೆಗಳಲ್ಲಿ ನಿರ್ದೋಷಿಗಳನ್ನು ಅವರ ದೇಶಭಕ್ತಿಗಾಗಿ ಶಿಕ್ಷಿಸಲಾಗಿದೆ. ಭಾರತೀಯರು ಮತ್ತು ಐರೋಪ್ಯರ ನಡುವಿನ ದಾವೆಗಳಲ್ಲಿ ಶೇಕಡಾ ೯೯ ಭಾರತೀಯರಿಗೆ ನ್ಯಾಯ ದೊರಕಲಿಲ್ಲ. ಇದು ಅತಿಶಯೋಕ್ತಿಯಲ್ಲ. ಅಂಥಾ ದಾವೆಗಳನ್ನು ಕೂಲಂಕಷವಾಗಿ ಅಭ್ಯಸಿಸುವ ಯಾವನೊಬ್ಬನೂ ಇದೇ ಅಭಿಪ್ರಾಯಕ್ಕೆ ಬರುತ್ತಾನೆ.

ಇಂಗ್ಲೀಷರು ಮತ್ತು ಅಧಿಕಾರಾರೂಢ ಭಾರತೀಯರು ತಾವೂ ಅದರಲ್ಲಿ ಭಾಗಿಗಳೆಂದೂ ಜವಾಬ್ದಾರರೆಂಬುದನ್ನು ಅರಿಯರು. ಇದೊಂದು ದುರಂತ. ಬಹುಮಂದಿ ಇಂಗ್ಲೀಷರು ಹಾಗೂ ಭಾರತೀಯ ಅಧಿಕಾರಿಗಳು ಈ ಆಡಳಿತ ವ್ಯವಸ್ಥೆ ಪ್ರಪಂಚಾದ್ಯಂತ ಶ್ರೇಷ್ಠ ಮತ್ತು ಇದರ ಪರಿಣಾಮವಾಗಿ ಭಾರತ ಅಭಿವೃದ್ಧಿ ಪಥದಲ್ಲಿದೆಯೆಂದೂ ನಿಜಕ್ಕೂ ನಂಬಿದ್ದಾರೆ. ಬಹಳ ನವುರಾಗಿ ಪರಿಣಾಮಕಾರಿ ಭಯೋತ್ಪಾದನಾ ವ್ಯವಸ್ಥೆ ಮತ್ತು ಸಂಘಟಿತ ಬಲ ಪ್ರಯೋಗ ಒತ್ತಟ್ಟಿನಲ್ಲಿ, ಪ್ರತಿಭಟಿಸಲು ಮತ್ತು ಸ್ವರಕ್ಷಣೆಗೆ ಅಗತ್ಯವಿರುವ ಹಕ್ಕುಗಳ ನಿರಾಕರಣೆ ಮತ್ತೊಂದು ಕಡೆಯಿಂದ–ಈ ತರದ ಇಕ್ಕೆಡೆಯ ಒತ್ತಡದಿಂದ ಭಾರತೀಯರು ನಿರ್ವೀರ್ಯರಾಗಿ, ತಮ್ಮನ್ನು ಶೋಷಿಸುವ ಮಂದಿಯನ್ನೇ ತಾವು ಅಂಧಾನುಕರಣೆ ಮಾಡುವುದು ತಮಗೆ ಅಭ್ಯಾಸವಾಗಿದೆಯೆಂಬುದನ್ನು ಕೂಡಾ ಅರಿಯರು. ಈ ತರದ ಅಂಧಾನುಕರಣೆ ಆತ್ಮವಂಚನೆಯನ್ನು ಹೆಚ್ಚಿಸಿದೆ.

ನನ್ನ ಮೇಲಿನ ಆರೋಪ, ರಾಷ್ಟ್ರದ್ರೋಹ, ಭಾರತದ ದಂಡಸಂಹಿತೆಯ ಪ್ರಕರಣ ೧೨೪ ಎ, ಪೌರ ಸ್ವಾತಂತ್ರ್ಯ ರದ್ದು ಪಡಿಸುವ ರಾಜಕೀಯ ಉದ್ದೇಶಿತ ಕಾಯಿದೆಗಳ ಪೈಕಿ ರಾಜಯೋಗ್ಯವಾದುದು: ಸರಕಾರಕ್ಕೆ ಅನಾದರಣೆ ತೋರುವುದು ಅಥವಾ ಆ ಕುರಿತು ಪ್ರಚಾರ ಮಾಡುವುದು ಇದರಡಿಯಲ್ಲಿ ಕಠಿಣ ಶಿಕ್ಷಾರ್ಹ ಅಪರಾಧ; ತಾವು ಚೆನ್ನಾಗಿ ಅರಿತಿರುವಂತೆ, ಆದರಣೆ ಎಂಬ ಸದ್ಗುಣ ಕೃತಕ ಸೃಷ್ಟಿಗೆ ಅಥವಾ ಕಾಯಿದೆಯ ನಿಯಂತ್ರಣಕ್ಕೆ ಸಿಲುಕಲಾರದು. ಯಾವನೊಬ್ಬ ವ್ಯಕ್ತಿಗೆ ಇನ್ನೊಬ್ಬನಲ್ಲಿ ಅಥವಾ ಆಡಳಿತ ವ್ಯವಸ್ಥೆಯಲ್ಲಿ ಆದರಣೆ ಇಲ್ಲವಾದರೆ ಹಿಂಸಾಕೃತ್ಯಗಳಿಗೆ ಪ್ರಚೋದಿಸದೆ, ಪ್ರಕಟಿಸುವ ಸ್ವಾತಂತ್ರ್ಯ ಅವನಿಗಿರತಕ್ಕದ್ದು. ಆದರೆ ಈ ಪ್ರಕರಣದಡಿಯಲ್ಲಿ ಆಡಳಿತ ವ್ಯವಸ್ಥೆ ಕುರಿತು ಅನಾದರಣೆ ವ್ಯಕ್ತಪಡಿಸಿ, ಜನರನ್ನು ಉತ್ತೇಜಿಸುವುದು ಅಪರಾಧ. ಈ ದೇಶದ ಮಹಾಜನರ ಅಭಿಮಾನಿ ದೇಶಭಕ್ತರೂ ಈ ಪ್ರಕರಣದಡಿಯಲ್ಲಿ ಆರೋಪಿಗಳು. ಹಾಗೆಂದೇ ನಮ್ಮಿಬ್ಬರನ್ನೂ ಇದರಡಿಯಲ್ಲಿ ಆರೋಪಿಸಿ ಗೌರವಿಸಿರುವುದು ಬಹಳ ಸಂತೋಷ. ಈ ಸರಕಾರದ ವಿರೋಧ ನನ್ನ ಅನಾದರಣೆಯ ಸ್ಥೂಲ ರೂಪರೇಷೆಗಳನ್ನು ತಮ್ಮ ಸಮಕ್ಷಮ ಮಂಡಿಸಿದ್ದೇನೆ. ಯಾವನೊಬ್ಬ ಅಧಿಕಾರಿಯ ಎದುರೂ ವೈಯಕ್ತಿಕ ಅಸಮಾಧಾನ ನನಗಿಲ್ಲ ರಾಜನ ಕುರಿತು ನನಗೆ ಸ್ವಲ್ಪವೂ ಅನಾದರಣೆ ಇರುವುದಿಲ್ಲ. ಆದರೆ ಈ ಸರಕಾರದ ಕುರಿತು ಅನಾದರಣೆ ಇರುವುದು ಸದ್ಗುಣವೆಂದೇ ಭಾವಿಸುತ್ತೇನೆ. ಈವರೆಗಿನ ಎಲ್ಲ ಸರಕಾರಗಳಿಗಿಂತಲೂ ಹೆಚ್ಚಿಗೆ ಈ ಸರಕಾರ ಒಟ್ಟಿನಲ್ಲಿ ಭಾರತಕ್ಕೆ ಹಾನಿ ಮಾಡಿದೆ. ಈ ಹಿಂದಿನ ಯಾವುದೇ ಸರಕಾರಾಡಳಿತಗಿಂತ ಈ ಸರಕಾರದಡಿಯಲ್ಲಿ ಭಾರತೀಯರು ನಿರ್ವೀರ್ಯರಾಗಿದ್ದಾರೆ. ಇಂಥ ಸರಕಾರದ ಕುರಿತು ಆದರಣೆ ತೋರುವುದು ಮಹಾಪಾಪ. ಹಲವಾರು ಲೇಖನಗಳಲ್ಲಿ ಈ ಮಾತು ಹೇಳಲವಕಾಶ ಸಿಕ್ಕಿರುವುದು ನಿಜಕ್ಕೂ ಸುಯೋಗ.

ಈಗಿರುವ ತೀರ ಅಸ್ವಾಭಾವಿಕ ಸ್ಥಿತಿಯಿಂದ ಪಾರುಗೊಳ್ಳಲು ಅಸಹಕಾರಿ

ಚಳುವಳಿಯೊಂದೇ ಯೋಗ್ಯ ಮಾರ್ಗವೆಂದು ತೋರಿಸಿಕೊಟ್ಟು ಭಾರತಕ್ಕೂ ಇಂಗ್ಲೆಂಡಿಗೂ ಅಮೂಲ್ಯ ಸೇವೆಗೈದಿದ್ದೇನೆ. ಕೆಡುಕಿನೊಡನೆ ಅಸಹಕರಿಸುವುದು ಒಳಿತಿನೊಡನೆ ಸಹಕರಿಸುವುದಷ್ಟೇ ಕರ್ತವ್ಯ. ಆದರೆ ಈ ಹಿಂದೆ ಕೇಡೆಸಗಿದವನನ್ನು ಹಿಂಸಿಸಿ ಅಸಹಕಾರ ವ್ಯಕ್ತವಾಗುತ್ತಿತ್ತು, ಹಿಂಸಾತ್ಮಕ ಅಸಹಕಾರ ಕೇಡಿನ ಅಭಿವರ್ಧನೆಗೆ ಸಹಕಾರಿ; ಹಿಂಸೆಯಿಂದ ಕೇಡಿನ ಸಂವರ್ಧನೆ; ಹಿಂಸೆಯ ಸಂಪೂರ್ಣ ವರ್ಜನೆಯಿಂದ ಮಾತ್ರ ಕೇಡಿಗೆ ಪ್ರಚೋದನೆ ಇಲ್ಲವಾದೀತು—ಈ ಸಂದೇಶ ನನ್ನ ದೇಶಬಾಂಧವರಿಗೆ ಮನವರಿಕೆ ಮಾಡಲು ಸತತ ಪ್ರಯತ್ನಿಸುತ್ತಿರುತ್ತೇನೆ. ಕೆಡುಕಿನೊಡನೆ ಅಸಹಕರಿಸಿದ್ದರ ಪ್ರತಿಫಲವಾಗಿರುವ ದಂಡನೆಯನ್ನು ಸ್ವಾಗತಿಸುವುದು ಅಹಿಂಸೆ. ಉದ್ದೇಶಪೂರ್ವಕ ಮಾಡಿದ ಅಪರಾಧಕ್ಕೆ ಕಾನೂನಿನನ್ವಯ ತಕ್ಕುದಾದ ಶಿಕ್ಷೆ ವಿಧಿಸಬೇಕೆಂದು ತಮ್ಮಲ್ಲಿ ವಿಜ್ಞಾಪಿಸುತ್ತೇನೆ. ಪೌರನಾಗಿ ಅದುವೇ ನನ್ನ ಆದ್ಯ ಕರ್ತವ್ಯ. ಜ್ಯೂರಿ ಮಹಾಶಯರುಗಳು ಮತ್ತು ನ್ಯಾಯಾಧೀಶರೆದುರು ಈಗ ಕೇವಲ ಎರಡೇ ಮಾರ್ಗಗಳಿವೆ. ಈಗ ಪಾಲಿಸುವ ಕಾನೂನು ನ್ಯಾಯ ಸಮ್ಮತವಲ್ಲವೆಂದು ತಾವು ಭಾವಿಸುವಿರಾದರೆ, ಅದರೊಡನೆ ಸಹಕರಿಸದೆ ತಮ್ಮ ಸ್ಥಾನ ಹಾಗೂ ಹುದ್ದೆಗಳಿಗೆ ರಾಜೀನಾಮೆ ನೀಡುವುದು; ಅಥವಾ ನ್ಯಾಯದಾನ ವ್ಯವಸ್ಥೆ ಹಾಗೂ ಕಾನೂನು ನ್ಯಾಯಸಮ್ಮತವಿದೆ ಎಂಬುದು ತಮ್ಮ ಅಭಿಪ್ರಾಯವಾದರೆ, ನನ್ನ ಕಾರ್ಯಕ್ರಮ ಜನಹಿತಮಾರಕವೆಂದು ತೀರ್ಮಾನಿಸಿ ಗರಿಷ್ಠ ಶಿಕ್ಷೆ ವಿಧಿಸುವುದು.

ಮೇಲಿನ ಹೇಳಿಕೆಯನ್ನು ಮಹಾತ್ಮರು ಬಹಳ ನಮ್ರತೆಯಲ್ಲಿ ಗಂಭೀರವಾಗಿ ಓದಿ ಹೇಳಿದರು. ಅನಂತರ ತಮ್ಮ ಸಮಕ್ಷಮದಲ್ಲಿರುವ ಮಹಾತ್ಮರ ವ್ಯಕ್ತಿತ್ವಕ್ಕೊಪ್ಪುವಂತೆ ಗೌರವಪೂರ್ವಕವಾಗಿ ಹಾಗೂ ಸೌಜನ್ಯದಲ್ಲಿ ನ್ಯಾಯಾಧೀಶ ಶ್ರೀ ಬ್ರೂಮ್‌ಫೀಲ್ಡರು ತೀರ್ಪು ನೀಡಿದರು.

ಶ್ರೀಯುತ ಗಾಂಧೀಜಿಯವರೇ, ಆರೋಪಿತ ಅಪರಾಧ ಒಪ್ಪಿಕೊಂಡು ನನ್ನ ಕರ್ತವ್ಯ ಹಗುರಗೊಳಿಸಿದಿರಿ. ಹಾಗಿರುವುದಾದರೂ, ಈ ಅಪರಾಧಕ್ಕೆ ತಕ್ಕ ಶಿಕ್ಷೆ ವಿಧಿಸುವುದು ಬಹಳ ಕಷ್ಟ. ಕಾನೂನು ಎಲ್ಲ ವ್ಯಕ್ತಿಗಳನ್ನು ಸರಿಸಮಾನವೆಂದು ಪರಿಗಣಿಸುತ್ತದೆ. ವ್ಯಕ್ತಿಯೋಚಿತ ಗೌರವವೆಂಬುದು ಕಾನೂನಿಗೆ ಸರಿ ಹೊಂದುವುದಿಲ್ಲ. ಹಾಗಿರುವುದಾದರೂ, ಈ ತನಕ ನಾನು ತನಿಖೆಗೆ ಒಳಪಡಿಸಿದ, ಇನ್ನು ಮುಂದೆಯೂ ತನಿಖೆಗೊಳಪಡಿಸಬಹುದಾದ ಎಲ್ಲ ವ್ಯಕ್ತಿಗಳಿಗಿಂತ ತೀರ ವಿಭಿನ್ನ ಸ್ತರಗತಿಗೆ ತಾವು ಸೇರಿದವರೆಂಬ ಸತ್ಯ ಸ್ಥಿತಿಯನ್ನು ಸ್ಪಷ್ಟವಾಗಿ ಕಾಣದಿರಲು ಸಾಧ್ಯವಿಲ್ಲ. ಅಲ್ಲದೆ ಈ ಮಹಾ ದೇಶದ ಕೋಟ್ಯಾಂತರ ಪ್ರಜೆಗಳ ದೃಷ್ಟಿಯಲ್ಲಿ ತಾವು ಮಹಾನ್ ದೇಶಭಕ್ತರೆಂದೂ ಅದ್ವಿತೀಯ ನೇತಾರರೆಂಬುದನ್ನೂ ಅವಗಣಿಸಲು ಸಾಧ್ಯವಿಲ್ಲ. ರಾಜಕೀಯವಾಗಿ ತಮ್ಮೊಡನೆ ಸಹಕರಿಸದವರು ಕೂಡ ತಾವು ಅತ್ಯುನ್ನತ ಆದರ್ಶವಾದಿಗಳೆಂದೂ, ತಮ್ಮ ಜೀವನ ಕ್ರಮ ಬಹಳ ಗೌರವಾನ್ವಿತ ಹಾಗೂ ಸಂತರಂತೆ ಇರುವುದೆಂದೂ ತಿಳಿಯುತ್ತಾರೆ. ಆದರೆ ಪ್ರಸ್ತುತ ನನ್ನ ಕರ್ತವ್ಯದಂದೆ, ತಮ್ಮನ್ನು ಕೇವಲ ಸೀಮಿತ ದೃಷ್ಟಿಯಲ್ಲಿ ನಡೆಯಿಸಿಕೊಳ್ಳುವ ಪ್ರಸಂಗವಾಗಿದೆ.

ಈ ಸೀಮಿತ ಕ್ಷೇತ್ರದ ಹೊರತಾಗಿ ತಮ್ಮ ಕುರಿತು ತೀರ್ಮಾನಿಸಲು, ಅಥವಾ ತಮ್ಮ ನಡತೆ, ಧೋರಣೆಗಳನ್ನು ವಿಮರ್ಶಿಸಲು ನಾನು ಸಮರ್ಥನಲ್ಲ. ಅದು ನನ್ನ ಕರ್ತವ್ಯವೂ ಅಲ್ಲ. ತಾವು ಕಾನೂನು ಕ್ಷೇತ್ರಕ್ಕೊಳಪಡುವ ವ್ಯಕ್ತಿಯಾಗಿದ್ದು ತಾವೇ ಒಪ್ಪಿರುವಂತೆ, ಕಾನೂನು ನಿಯಮ ಉಲ್ಲಂಘಿಸಿದವರೆಂದೂ, ಸಾಮಾನ್ಯ ವ್ಯಕ್ತಿಯೊಬ್ಬನ ದೃಷ್ಟಿಯಲ್ಲಿ ರಾಷ್ಟ್ರ ವಿರೋಧ ಮಹಾಪರಾಧಿ ಎಂದೂ ಪರಿಗಣಿಸಿ ತೀರ್ಪು ನೀಡಬೇಕಾಗಿದೆ. ಹಿಂಸೆಯ ವಿರೋಧ ಸದಾ ಬೋಧಿಸುವವರೆಂದೂ, ಅಲ್ಲದೆ ನಾನು ಸಂಪೂರ್ಣ ನಂಬಿರುವಂತೆ, ಹಿಂಸೆಯ ಪ್ರಕರಣಗಳನ್ನು ತಡೆದವರೆಂಬುದನ್ನು ನಾನು ಬಲ್ಲೆ. ಇಂತಿರುವುದಾದರೂ, ತಮ್ಮ ರಾಜಕೀಯ ಬೋಧನೆಯ ಸ್ವಭಾವ ಮತ್ತು ಬೋಧನೆಗೊಳಪಡುವ ಜನರ ಸ್ವಭಾವ ತಮಗೆ ಸರಿಯಾಗಿ ತಿಳಿದಿದ್ದು, ತಮ್ಮ ಬೋಧನೆಯ ಸಹಜ ಪರಿಣಾಮ ಅನಿವಾರ್ಯವಾಗಿ ಹಿಂಸೆ ಮತ್ತು ಅರಾಜಕತೆಗೆ ಅವಕಾಶ ಮಾಡಿ ಕೊಡುತ್ತದೆ —ಎಂಬುದು ತಮಗೆ ಇನ್ನೂ ಏಕೆ ತಿಳಿದಿಲ್ಲ ಎಂಬುದು ನನಗೆ ಗೊತ್ತಾಗುವುದಿಲ್ಲ.

ತಮ್ಮ ಚಟುವಟಿಕೆಗಳಿಂದಾಗಿ ಯಾವುದೇ ಸರಕಾರಕ್ಕೆ ತಮಗೆ ಸಂಪೂರ್ಣ ಸ್ವಾತಂತ್ರ್ಯ ನೀಡುವುದು ಸಾಧ್ಯವಾಗಿಲ್ಲ. ತಾವೇ ನಿರ್ಮಿಸಿರುವ ಈ ಪರಿಸ್ಥಿತಿಗಾಗಿ ನಿಜಕ್ಕೂ ದುಃಖಿಸದವರು ಭಾರತದಲ್ಲಿಲ್ಲ. ತಮಗೆ ತಕ್ಕ ನ್ಯಾಯ ಒದಗಿಸುವುದು ಮತ್ತು ಸಾರ್ವಜನಿಕರ ಹಿತ ಸಾಧನೆಗೆ ಏನು ಅವಶ್ಯ ಎಂಬುದನ್ನು ಸಮತೋಲನೆ ಮಾಡಲು ಪ್ರಯತ್ನಿಸುತ್ತೇನೆ. ಇಂದಿಗೆ ಹನ್ನೆರಡು ವರ್ಷಗಳ ಹಿಂದಿನ ಪ್ರಾಯ ಇಂತಹದೇ ಸಂದರ್ಭದಲ್ಲಿ ಶ್ರೀಯುತ ಬಾಲ ಗಂಗಾಧರ ತಿಲಕರ ದಾವೆಯ ತೀರ್ಪನ್ನು ಅನುಸರಿಸಲು ಪ್ರಯತ್ನಿಸುತ್ತೇನೆ. ಅಂತಿಮವಾಗಿ ಅವರಿಗೆ ಆರು ವರ್ಷಗಳ ಸಾದಾ ಸಜೆ ವಿಧಿಸಲಾಗಿತ್ತು. ತಮ್ಮನ್ನು ಶ್ರೀ ಬಾಲ ಗಂಗಾಧರ ತಿಲಕರ ಸ್ಥಾನದಲ್ಲಿರಿಸಿ ಆರು ವರ್ಷಗಳ ಸಾದಾ ಸಜೆ ವಿಧಿಸಲು ತೀರ್ಮಾನಿಸಿದ್ದೇನೆ. ಇದು ನನ್ನ ತೀರ್ಪು ಆಗಿರುವುದಾದರೂ, ಭಾರತದ ರಾಜಕೀಯದ ಮುಂದಿನ ಬೆಳವಣಿಗೆಯಲ್ಲಿ ಸರಕಾರ ಶಿಕ್ಷೆಯ ಅವಧಿಯನ್ನು ಹ್ರಸ್ವಗೊಳಿಸಿ ಬಿಡುಗಡೆಗೊಳಿಸಿದರೆ, ನನಗಿಂತ ಹೆಚ್ಚಿಗೆ ಯಾರೂ ಸಂತೋಷಪಡಲಾರರು. ಶ್ರೀ ಶಂಕರರಾಯ ಬ್ಯಾಂಕರ್ ಅವರ ಗುರು ವಿಶಾಣತಿಯಂತೆ ನಡಕೊಂಡವರಾದುದರಿಂದ ಒಂದು ವರ್ಷದ ಸಾದಾ ಸಜೆ ಹಾಗೂ ಒಂದು ಸಾವಿರ ರೂಪಾಯಿ ದಂಡನೆ ವಿಧಿಸಲಾಗಿದೆ.

ನ್ಯಾಯಾಧೀಶರು ತೋರಿದ ಸೌಜನ್ಯ ಮತ್ತು ಗೌರವಕ್ಕೆ ತುಸುವೇ ಕಡಿಮೆಯಾಗದಂತೆ, ಗಾಂಧೀಜಿಯವರು ತೀರ್ಪಿನ ಅನಂತರ ನ್ಯಾಯಾಲಯಕ್ಕೆ ಬಿನ್ನವಿಸಿಕೊಂಡರು; "ತಮ್ಮಲ್ಲಿ ಒಂದು ಬಿನ್ನಹ. ತಾವು ಲೋಕಮಾನ್ಯ ಬಾಲಗಂಗಾಧರ ತಿಲಕರ ತನಿಖೆಯನ್ನು ನೆನಪಿಸಿ ನನ್ನನ್ನು ಗೌರವಿಸಿದಿರಿ. ಅವರ ಹೆಸರಿನೊಂದಿಗೆ ನನ್ನನ್ನೂ ಸೇರಿಸಿರುವುದು ನನಗೆ ಅತಿ ಹೆಮ್ಮೆಯ ಗೌರವ ಸ್ಥಾನ ಒದಗಿಸಿದಂತಾಗಿದೆ. ತಾವು ವಿಧಿಸಿದ ಶಿಕ್ಷೆ ಯಾವನೇ ನ್ಯಾಯಾಧೀಶ ನೀಡಬಹುದಾದುದಕ್ಕಿಂತ ಹಗುರವಾದ ಶಿಕ್ಷೆ ವಿಧಿಸಿರುತ್ತೀರಿ. ತಮ್ಮ ಸೌಜನ್ಯಕ್ಕೆ ನಾನು ಕೃತಜ್ಞನಾಗಿದ್ದೇನೆ."

# ಬರ ನೀಗಬೇಕಾದರೆ ಬರಹ ಬೇಕು

**ಎ. ಪಿ. ಚಂದ್ರಶೇಖರ**
'ಇಂದ್ರಪ್ರಸ್ಥ' ಜೀವಧಾರಕ ಸಸ್ಯವಾಟಿ
ಕಳಲವಾಡಿಗ್ರಾಮ, ಉದ್ಬೂರು ಅಂಚೆ
ಮೈಸೂರು ೫೭೦ ೦೦೮

ದೂರದ ರಾಜಸ್ಥಾನದಲ್ಲಿ ಎಂದೂ ಕೇಳರಿಯದ ಬರ. ಗುಜರಾತಿನಲ್ಲಿ ಭೂಮಿ ಮೊಳದಗಲ ಬಾಯಿ ಬಿಟ್ಟಿದೆ. ಮಹಾರಾಷ್ಟ್ರದಲ್ಲಿ ಭಾರೀ ಝಳ. ಕರ್ನಾಟಕದ ಪರಿಸ್ಥಿತಿ ಅಷ್ಟೊಂದು ತೀವ್ರವಲ್ಲದಿದ್ದರೂ ವರ್ತಮಾನದಲ್ಲಿ ಸಮರ್ಥ ನಿರ್ವಹಣೆಯಾಗದಿದ್ದರೆ ಭವಿಷ್ಯ ಕರಾಳ ಎಂಬುದಕ್ಕೆ ಪ್ರಕೃತಿ ಎಲ್ಲ ಮುನ್ಸೂಚನೆಗಳನ್ನೂ ಕೊಟ್ಟಿದೆ. ಎಚ್ಚರಿಕೆಯ ಗಂಟೆ ಬಾರಿಸುತ್ತಲೇ ಇದೆ.

ನಮ್ಮ ಹಿರಿಯರು ಮುತ್ಸದ್ದಿತನದಿಂದ ನಿರ್ಮಿಸಿದ್ದ ಕೆರೆ ಕಟ್ಟೆಗಳೆಲ್ಲ ಬತ್ತಿಹೋಗಿ ಎಷ್ಟೋ ವರ್ಷಗಳಾಗಿವೆ. ನಾವೇನೋ ಮಹಾನ್ ಸಾಧಕರೆಂದು ಬೀಗಿ ಕೊರೆದ ತೂತು ಬಾವಿಗಳಲ್ಲಿ ನೀರು ಪಾತಾಳ ಸೇರಿದೆ. ವಿವಿಧ ಲವಣ. ರಾಸಾಯನಿಕಗಳಿಂದ ನೀರು ಅನಾರೋಗ್ಯಕರವಾಗಿದೆ. ಅತ್ಯಂತ ಅರುಚಿಯದ್ದಾಗಿದೆ. ಪ್ರಕೃತಿಯ ನಡೆಯನ್ನು ತಡೆದು ಕಟ್ಟಿದ ಭಾರೀ ಅಣೆಕಟ್ಟುಗಳು ಕೂಡ ಹೂಳು ತುಂಬಿ ಕೂಳಿನ ಬೆಳೆಗಳಿಗೆ ಮತ್ತು ಕುಡಿಯುವ ನೀರಿಗೆ ಎಟಕದಾಗಿದೆ.

ಉದ್ಯಾನನಗರಿ, ದೀಪಾಲಂಕೃತ ಸುಂದರಿ, ಸಾಂಸ್ಕೃತಿಕ ರಾಯಭಾರಿ ಮೈಸೂರು ನಗರದಲ್ಲಿ ಕುಡಿಯಲು ನೀರಿಲ್ಲದೆ ಹಾಹಾಕಾರ ಎದ್ದಿದೆ. ಸಂಸ್ಕೃತಿ ಗಾಳಿಗೆ ಹಾರಿ ಹೋಗಿದೆ. ಅಕ್ಕಪಕ್ಕದವರು, ಇದುತನಕ ಆತ್ಮೀಯರಾಗಿದ್ದವರು ಪರಸ್ಪರ ಹೊಡೆದಾಡುವ ಸ್ಥಿತಿ ಬಂದಿದೆ. ಸಂಸ್ಕೃತಿ, ಸೌಜನ್ಯ ಎಲ್ಲ ಆಮೇಲೆ, ಮೊದಲು ಕುಡಿಯಲು ನೀರು ಬೇಕು ಎಂದು ಬೇಜವಾಬ್ದಾರಿ ಸರ್ಕಾರದ ವಿರುದ್ಧ, ವ್ಯವಸ್ಥೆಯ ವಿರುದ್ಧ ಜನ ಕ್ರುದ್ಧರಾಗಿ ಘೋಷಣೆ ಕೂಗುತ್ತಿದ್ದಾರೆ. ಮೈಸೂರಿನ ಜನ ಕುಡಿಯುವ ನೀರಿಗಾಗಿ, ಮಂಡ್ಯದ ಜನ ತಿನ್ನುವ ಅನ್ನಕ್ಕಾಗಿ (ನೀರಾವರಿಗಾಗಿ) ಮುಷ್ಕರ ನಡೆಸಿದ್ದಾರೆ.

ಮುಷ್ಕರ ನಡೆಸಲು ನಮ್ಮವರಿಗೇನೂ ಹೇಳಿಕೊಡಬೇಕಾದ್ದಿಲ್ಲ. ಸ್ವಾತಂತ್ರ್ಯಪೂರ್ವದಲ್ಲಿ ಸ್ವಾವಲಂಬನೆಯ ಮಹಾನ್ ಆದರ್ಶವನ್ನು ಮುಂದಿಟ್ಟು, ನಮ್ಮ ಹಿರಿಯರು ಬ್ರಿಟಿಷರ ವಿರುದ್ಧ ಮುಷ್ಕರ ಹೂಡಿದ್ದರು. ಸ್ವಾತಂತ್ರ್ಯ ಬಂತು ಆದರೆ ನಮ್ಮ ದುರದೃಷ್ಟ. ಸ್ವಾವಲಂಬನೆ ಬರಲಿಲ್ಲ. ಮುಷ್ಕರ ಹೂಡುವ ಸ್ವಾತಂತ್ರ್ಯ ಪೂರ್ಣ ಪ್ರಮಾಣದಲ್ಲಿ ಬಂದುಬಿಟ್ಟಿತು.

ಜಾತಿಗಾಗಿ ಮುಷ್ಕರ, ಭಾಷೆಗಾಗಿ ಮುಷ್ಕರ, ಗಡಿಗಾಗಿ ಮುಷ್ಕರ, ಬಡ್ತಿಗಾಗಿ ಮುಷ್ಕರ, ವೇತನ ಹೆಚ್ಚಳಕ್ಕಾಗಿ ಮುಷ್ಕರ, ವರ್ಗಾವರ್ಗಿಗಾಗಿ ಮುಷ್ಕರ, ರಜೆಗಾಗಿ ಮುಷ್ಕರ, ಕರ ನಿರಾಕರಿಸಿ ಮುಷ್ಕರ, ರಸ್ತೆಗಾಗಿ ಮುಷ್ಕರ, ವಾಹನಕ್ಕಾಗಿ ಮುಷ್ಕರ, ಶಾಲೆ ಶುಲ್ಕ ಇಳಿಸಲು ಮುಷ್ಕರ, ಸುಲಭದ ತೇರ್ಗಡೆಗಾಗಿ ಮುಷ್ಕರ, ಕೆಲಸಮಾಡದೆ ಸಂಬಳ ತಿನ್ನುವ ಉದ್ಯೋಗಕೋರ ಮುಷ್ಕರ, ಹೀಗೆ ನೂರೆಂಟು ಕಾರಣಗಳಿಗಾಗಿ ಮುಷ್ಕರ ಮಾಡಿದ ಮಂದಿಗಳಿಗೆ ಮುಷ್ಕರಕ್ಕಾಗಿಯೋ ಮುಷ್ಕರದಿಂದಲೇ

ತರಬೇಕಾದ ಮಂದಿಗಳಿಗೆ ಮುಷ್ಕರ ನಡೆಸುವುದೇನೂ ದೊಡ್ಡ ವಿಷಯವಲ್ಲ. ಕಷ್ಟದ ಸಂಗತಿಯೂ ಅಲ್ಲ.

ಆದರೆ, ಈ ಬಾರಿ ನಡೆಯುತ್ತಿರುವ ನೀರಿಗಾಗಿ ಮುಷ್ಕರ ಬಹಳ ಗಂಭೀರ ವಿಷಯ. ಇದುವರೆಗೆ ನಡೆದ ಯಾವುದೇ ಮುಷ್ಕರದ ಜೊತೆಗೆ ಕುಡಿಯುವ ನೀರಿನ ಮುಷ್ಕರವನ್ನು ಹೋಲಿಸಲು ಬರುವುದಿಲ್ಲ. ನಮ್ಮ ಜನರ ಬೇಡಿಕೆಯ ಆದ್ಯತೆ ಇದ್ದಕ್ಕಿದ್ದಂತೆ ಈ ವರ್ಷ ಏಕೆ ಬದಲಾಯಿತು? ಈ ಬದಲಾವಣೆ ಈ ವರ್ಷ ಇದ್ದಕ್ಕಿದ್ದಂತೆ ಆಯಿತೇ? ಈ ಗಂಭೀರ ಪ್ರಶ್ನೆಗೆ ಗಹನ ಚಿಂತನೆಗಳಿಂದ ಉತ್ತರಿಸದೆ ಈಗ ಸಂಘಟಿಸಿರುವ ಬರಕ್ಕೆ ಜಾದೂ ರೀತಿಯಲ್ಲಿ ಯಾರೂ ಪರಿಹಾರ ಕೊಡಲು ಸಾಧ್ಯವಿಲ್ಲ.

ನಮ್ಮ ಹೊಳೆ ಬತ್ತಿದ್ದು, ಕಾಡುಗಳೆಲ್ಲಾ ಹೊತ್ತಿದ್ದು, ಮುಷ್ಕರಗಳ ಮೇಲೆ ಮುಷ್ಕರಗಳು ನಡೆಯುತ್ತಿದ್ದುದೆಲ್ಲಾ ಭವಿಷ್ಯದ ಕರಾಳತೆಯ ಮುನ್ಸೂಚನೆಗಳಾಗಿದ್ದುವು. ನಮ್ಮ ಪೇಟೆಗಳಲ್ಲಿ ಎಷ್ಟೊಂದು ರೀತಿಯ ಸರಕಿನ ಸಾಲುಗಳು! ಹಾಲಿಗಾಗಿ, ಸಕ್ಕರೆಗಾಗಿ, ಸೀಮೆಣ್ಣೆಗಾಗಿ, ಮನೆಗಾಗಿ, ಮದ್ದಿಗಾಗಿ, ಕರೆಂಟ್, ಫೋನ್ ಬಿಲ್ ಕಟ್ಟುವುದಕ್ಕಾಗಿ, ಶಾಲೆಗಾಗಿ, ಉದ್ಯೋಗಕ್ಕಾಗಿ, ಬೇಡಿಕೆಯ ಮೇಲೆ ಬೇಡಿಕೆಗಾಗಿ ಸ್ವಂತಿಕೆಯನ್ನು ಬಿಟ್ಟು, ಸಂಪಾದಿಸಲಾರದ ಅಮೂಲ್ಯ ಕಾಲವನ್ನು ಕೊಟ್ಟು, ಪೇಟೆಯ ಮೂಲೆ ಮೂಲೆಗಳಲ್ಲಿ ಸಾಲು ನಿಲ್ಲುವುದು ಕೂಡ ನಮ್ಮ ಅಭಿವೃದ್ಧಿಯ ಪರಿಕಲ್ಪನೆಯಲ್ಲಿರುವ ದೋಷಗಳನ್ನು ಎತ್ತಿ ತೋರಿಸುತ್ತಿದ್ದುವು. ಇಂಥ ಎಲ್ಲ ಸೂಚನೆಗಳನ್ನೂ, ಸಾಕ್ಷಿಗಳನ್ನೂ ತಿರಸ್ಕರಿಸಿ ಪೇಟೆಗಳನ್ನು ಬೆಳೆಸಿ ನೀರಿಗಾಗಿ ಸಾಲು ನಿಂತರೆ ಕೊಡುವುದಾದರೂ ಎಲ್ಲಿಂದ? ಐವತ್ತು ವರ್ಷಗಳಲ್ಲಿ ಮಾಡಿದ ತಪ್ಪನ್ನು ಮತ್ತೆ ತಪ್ಪು ದಾರಿಯಲ್ಲೇ ಹೋಗುತ್ತಾ ತಿದ್ದಲು ಅದೆಂತು ಸಾಧ್ಯ?

ನಮ್ಮ ಕುಡಿಯುವ ನೀರನ್ನು ನಾವು ಕಳಕೊಂಡಿರುವುದು, ನಮ್ಮ ಕುಡಿಯುವ ನೀರನ್ನು ನಾವೇ ಪಡೆಯಲಾಗದಿರುವುದು, ನಮ್ಮ ಕುಡಿಯುವ ನೀರಿಗಾಗಿ ಎಲ್ಲೆಲ್ಲೋ ಕೈಯೊಡ್ಡುವುದು ಅತ್ಯಂತ ಅವಮಾನದ ಸಂಗತಿ. ನಮ್ಮ ಕುಡಿಯುವ ನೀರನ್ನು ಉಳಿಸಿಕೊಳ್ಳಲಾಗದ, ಗಳಿಸಿಕೊಳ್ಳಲಾಗದ ನಾವು ಶುದ್ಧ ನಾಲಾಯಕರು. ಮಾಳಿಗೆಯ ಮೇಲೆ ಮಾಳಿಗೆ ಕಟ್ಟಿದ್ದರೂ, ಬಟ್ಟೆಯ ಮೇಲೆ ಬಟ್ಟೆ ತೊಟ್ಟಿದ್ದರೂ ನಿರ್ಗತಿಕರು.

ಮೂರು ವರ್ಷಗಳ ಹಿಂದೆ ಹೈದರಾಬಾದಿನಲ್ಲಿ ಶಕ್ತಿ ತಜ್ಞರ ಸಮಾವೇಶ ನಡೆಯಿತಂತೆ. ಅಲ್ಲಿ ಸೇರಿದ್ದ ಎಲ್ಲರೂ ಸಾಕಷ್ಟು ಚರ್ಚಿಸಿ ಕೊನೆಗೆ ಕೈಗೊಂಡ ನಿರ್ಣಯ ಹೀಗಿದೆ— ಇನ್ನು ಐದು ವರ್ಷಗಳಲ್ಲಿ ದೇಶದ ಪರಿಸ್ಥಿತಿ ಸಂಪೂರ್ಣ ಬದಲಾಗುತ್ತದೆ. ಮುಷ್ಕರದ ಆದ್ಯತೆ ಬದಲಾಗುತ್ತದೆ. ವಿದ್ಯುತ್ ಹಾಗೂ ನೀರು ಮೊದಲ ಆದ್ಯತೆಯಾಗುತ್ತವೆ. ಕುಡಿಯುವ ನೀರಿಗಾಗಿ, ನೀರಾವರಿ ವಿದ್ಯುತ್ತಿಗಾಗಿ ಜನ ಕ್ರೂರ ಕರ್ಮಗಳನ್ನು ಎಸಗುತ್ತಾರೆ."

ತಜ್ಞ ಸಮಾವೇಶ ನುಡಿದ ಭವಿಷ್ಯ ಬಹಳ ಬೇಗನೆ ನಿಜವಾಗಿ ಹೋಯಿತು. ಕೃಷ್ಣರಾಜಸಾಗರದ ಕಛೇರಿಯ ಮುಂದೆ, ಮೈಸೂರು ನಗರಪಾಲಿಕೆಯ ಮುಂದೆ, ಜಲಮಂಡಲಿಯ ಮುಂದೆ, ಜಿಲ್ಲಾಧಿಕಾರಿಯ ಕಛೇರಿ ಮುಂದೆ, ಶಾಸಕರ ಮನೆಗಳ

ಮುಂದೆ ಜನ ತಮ್ಮ ಶಕ್ತಿ ಹಾಗೂ ಸಾಹಿತ್ಯ ಪ್ರದರ್ಶನ ಮಾಡುತ್ತಿದ್ದಾರೆ. ಮೂಲ ಅವಶ್ಯಕತೆಯಾದ ಕುಡಿಯುವ ನೀರನ್ನು ಒದಗಿಸಲಾರದ ಸರ್ಕಾರದ ಬೇಜವಾಬ್ದಾರಿಯನ್ನು ದೂಷಿಸುತ್ತಿದ್ದಾರೆ.

ಏಳು ವರ್ಷಗಳ ಹಿಂದೆ ವಿಶ್ವ ಆರೋಗ್ಯ ಸಂಸ್ಥೆ ಇನ್ನೊಂದು ಭವಿಷ್ಯ ನುಡಿದಿತ್ತು. ಅದರ ಪ್ರಕಾರ ೨೦೨೫ನೇ ಇಸವಿಯ ಹೊತ್ತಿಗೆ ಭಾರತದಲ್ಲಿ ಸಲ್ವತ್ತು ಶತಾಂಶ ಜನ ಕುಡಿಯಲು ನೀರಿಲ್ಲದೆ ಸಾಯುತ್ತಾರೆ. ಭಾರೀ ಮಳೆಯ ಅಗುಂಬೆ ಕಾದ ಕಾವಲಿಯಾಗುತ್ತದೆ."

ಈ ಭವಿಷ್ಯವೂ ನಿಜವಾಗುವ ಎಲ್ಲ ಲಕ್ಷಣಗಳೂ ಇಂದು ರೂಪುಗೊಂಡಿವೆ. ಇಂಥ ವೈಜ್ಞಾನಿಕ ಭವಿಷ್ಯವಾಚನಗಳು ಬೇಕಾದಷ್ಟಿವೆ. ಇವುಗಳ ತಳದಲ್ಲಿ ಸುಸಂಬದ್ಧ, ಸುಸಂಗತ ವಿಚಾರಗಳಿವೆ. ಪ್ರಕೃತಿಯ ಸಮರ್ಥ ಅಧ್ಯಯನವಿದೆ. ಎಂತಲೇ ವಾಚನ ನಿಜವಾಗಿದೆ. ನಮ್ಮ ಸಮಸ್ಯೆಗಳು ನೀಗಬೇಕಾದರೆ ಭವಿಷ್ಯವಾಚನದ ಹಿನ್ನೆಲೆಯಲ್ಲಿರುವ ವಿಜ್ಞಾನವನ್ನು ವಿಚಾರವನ್ನೂ ನಾವೆಲ್ಲರೂ ತಿಳಿಯಲೇಬೇಕು. ಸಮಸ್ಯೆಯ ಪರಿಹಾರಕ್ಕೆ ಸಾರ್ವಜನಿಕ, ಸಾರ್ವತ್ರಿಕ ಪ್ರಯತ್ನ ಬೇಕು. ಇದು ಸರ್ಕಾರದ ವಿರುದ್ಧ ಘೋಷಣೆ ಕೂಗುವುದರಿಂದ, ಮುಷ್ಕರ ಹೂಡುವುದರಿಂದ ಆಗುವುದಿಲ್ಲ. ಬದಲು ನಮ್ಮಲ್ಲಿರುವ ಭೋಗಾತಿರೇಕದ ವಿರುದ್ಧ ಘೋಷಣೆ ಕೂಗುವುದರಿಂದ, ನಮ್ಮ ನಮ್ಮಲ್ಲೇ ಇರುವ ಸೋಮಾರಿತನದ ವಿರುದ್ಧ ಮುಷ್ಕರ ಹೂಡುವುದರಿಂದ ಆಗುತ್ತದೆ.

ಸರ್ಕಾರವು ಸಾರ್ವಜನಿಕರ ಪ್ರತಿಬಿಂಬ: ಗಾಳಿ ಮತ್ತು ನೀರು ಮನುಷ್ಯನ ಮೂಲಭೂತ ಆವಶ್ಯಕತೆ ಎಂಬುದು ಇದುತನಕ ನಮ್ಮ ಗಮನಕ್ಕೇ ಬರಲಿಲ್ಲ. ನಮ್ಮ ಶಾಲೆಗಳಲ್ಲಿ ಹೇಳಿಕೊಡುವ ವಿಜ್ಞಾನ ಪುಸ್ತಕಗಳಲ್ಲಿ, ಮೂಲಭೂತ ಅವಶ್ಯಕತೆಗಳ ಪಟ್ಟಿಯಲ್ಲಿ, ಗಾಳಿ ಮತ್ತು ನೀರಿಗೆ ಸ್ಥಾನ ಸಲ್ಲಲಿಲ್ಲ. ನಮ್ಮ ವಿದ್ಯೆ, ವಿಚಾರಗಳು ನೈಸರ್ಗಿಕವಾದ ಅಶನ, ವಸನ, ವಸತಿ ಹಾಗೂ ಭೋಗವಸ್ತುಗಳ ಸಂಗ್ರಹದಲ್ಲಿ ಪ್ರವೃತ್ತವಾಗಿದೆ. ಎಲ್ಲ ಆದ್ಯತೆಗಳೂ ಅಂತಿಮವಾಗಿ ಹಣ ಸಂಗ್ರಹದೆಡೆಗೆ, ಭೋಗವಸ್ತುಗಳೆಡೆಗೆ ಹರಿದಿದೆ. ಒಬ್ಬೊಬ್ಬರೂ ಪಟ್ಟಣ ಸೇರಿದ್ದು ಸುಖಜೀವನದ ಕನಸಿನಿಂದ. ಸುಲಭದ ಹಣದ ಆಸೆಯಿಂದ ಜನರಿಗೆ ಬೇಕಾದಂತೆ ಸರಕಾರವೂ ರೂಪುಗೊಂಡಿತು. ಕಾರ್ಖಾನೆಗಳನ್ನು ಪ್ರೋತ್ಸಾಹಿಸಿತು, ಪೇಟೆಗಳನ್ನು ವಿಸ್ತರಿಸಿತು. ರಸ್ತೆ, ಮನೆ, ಮಳಿಗೆ, ವಿದ್ಯುತ್, ನಲ್ಲಿನೀರು, ಫೋನು, ಪಾರ್ಕು, ಶಾಲೆ, ಟಿ.ವಿ, ಕಂಪ್ಯೂಟರ್, ಹೋಟೆಲು, ಹೋಟೆಲಿನಂಥಾ ಆಸ್ಪತ್ರೆಗಳು ಸರ್ಕಾರದ, ಸಾರ್ವಜನಿಕರ ಆದ್ಯತೆ ಆದುವೇ ಹೊರತು ಮಳೆ ನೀರನ್ನು ಇಂಗಿಸುವ, ಭೂಸಾರವನ್ನು ಸಂರಕ್ಷಿಸುವ ಜೀವಧಾರಕ ಚಕ್ರವನ್ನು ಸಕ್ರಮಗೊಳಿಸುವ ಯಾವುದೇ ವಿಚಾರಗಳೂ ನಾಗರಿಕತೆಗೆ ಪ್ರಿಯವಾಗಲೇ ಇಲ್ಲ. ಪರಿಸರದ ಹೆಸರು ಹೇಳುವವರೆಲ್ಲ ಅಭಿವೃದ್ಧಿ ವಿರೋಧಿಗಳೆಂಬ ಧೋರಣೆ ಬಂತು. ಬೆವರು ಹರಿಸದೆ ಅನ್ನ ಸಂಪಾದಿಸುವವರೆಲ್ಲ ಸಮಾಜದಲ್ಲಿ ಗೌರವಾನ್ವಿತರೆನಿಸಲ್ಪಟ್ಟರು. ಶೇರು, ಬುಕ್ಕಿ, ಲಾಟರಿ, ಮದ್ಯ ವ್ಯವಹಾರಕಾರರು

ದೇಶ ನಿರ್ಮಾತೃಗಳೆಂದೆನಿಸಿದರು. ಇಂಥ ಅಪ್ರಾಕೃತಿಕ ಬೆಳವಣಿಗೆಯಲ್ಲಿ ಗಾಳಿ, ನೀರಿನ ಮೂಲಗಳು, ಮಾತೃಸ್ಥಾನದಲ್ಲಿರುವ ಮರಗಿಡಗಳು, ನಮ್ಮ ಆದ್ಯತೆ ಅಲ್ಲದವುಗಳೆಲ್ಲಾ ಆಯುಷ್ಯ ಕಳೆದುಕೊಂಡುಬಿಟ್ಟವು.

ಇದು ತನಕ ನಮಗೆ ಬೇಡವಾದದ್ದು, ನಮ್ಮ ಸರ್ಕಾರಕ್ಕೂ ಬೇಡವಾದದ್ದು ಈಗ ಧಿಡೀರ್ ಎಂದು ಬೇಕೆನಿಸಿದರೆ, ಅಷ್ಟು ಫಕ್ಕನೆ ಕೊಡುವುದೆಲ್ಲಿಂದ? ನಿಜವಾಗಿ ನಮಗಿಂದು ನೀರು, ಗಾಳಿಗಳು ಬೇಕಾದದ್ದು ಹೌದಾದರೆ, ನಮ್ಮ ನೀರು, ಗಾಳಿಗಳನ್ನು ಬತ್ತಿಸಿದ ಹಲವು ಹಲವು ನಮ್ಮ ತಪ್ಪುಗಳನ್ನು ತಿದ್ದಿಕೊಳ್ಳಲೇ ಬೇಕು. ನಮ್ಮ ದೇಹದ ಬೆವರು ಹರಿಯಲೇ ಬೇಕು. ದೇಶದ ಬಡರೈತರ ನೋವುಗಳನ್ನು ಅರ್ಥವಿಸಲೇ ಬೇಕು.

ಬುದ್ಧಿಯ ಹರವು ವಿಸ್ತರಿಸದೆ ಕೇವಲ ತಂತ್ರವಿದ್ಯೆಯಿಂದ ಏನುಮಾಡಲೂ ಸಾಧ್ಯವಿಲ್ಲ. ದಿನದ ಇಪ್ಪತ್ತನಾಲ್ಕು ಗಂಟೆಯೂ ನಮ್ಮ ಹತ್ತಾರು ನಲ್ಲಿಗಳಲ್ಲಿ ನೀರು ಹರಿದು ಬರಬೇಕಾದರೆ, ನಾವು ಖುಷಿ ಬಂದಂತೆ ನೀರನ್ನು ಬಳಸಬೇಕಾದರೆ, ದಿನದ ಇಪ್ಪತ್ತನಾಲ್ಕು ಗಂಟೆಯೂ ನೂರಾರು ನಾಲೆಗಳಲ್ಲಿ (ಚಾನೆಲ್ಸ್) ಹರಿದು ಬರುತ್ತಿರುವ ಟಿ.ವಿ. ಚಿತ್ರಗಳು ಬತ್ತಲೇ ಬೇಕು. ಇದು ಇರುವಲ್ಲಿ ಅದು ಇರಲು ಸಾಧ್ಯವಿಲ್ಲ. ಎರಡೂ ಒಟ್ಟಿಗೆ ಇರಲು ಸಾಧ್ಯವಿಲ್ಲ. ಸೋಮಾರಿತನವೂ ಸಮೃದ್ಧಿಯೂ ಜೊತೆಯಾಗಿ ಬಹಳ ದಿನ ಬಾಳುವುದಿಲ್ಲ.

ನಮ್ಮ ಪರವಾಗಿ ಯಂತ್ರಗಳು ಅಥವಾ ಬೇರೆಯವರು ಕೆಲಸ ಮಾಡಬೇಕೆಂಬ ದುಷ್ಟ ಪ್ರವೃತ್ತಿಯ ಪ್ರಥಮ ಲಕ್ಷಣಗಳಾಗಿ ಹಲವಾರು ರೀತಿಯ ಮುಷ್ಕರಗಳು ಇದುತನಕ ನಡೆದಿದ್ದವು. ಅಂತಿಮ ಲಕ್ಷಣವಾಗಿ ಇದೀಗ ನೀರಿನ ಮುಷ್ಕರ ಪ್ರಾರಂಭವಾಗಿದೆ. ಬೆಂಗಳೂರಿನಂಥ ಜಾಗಗಳಲ್ಲಿ ಅಮ್ಲಜನಕದ ಬಾರ್‌ಗಳು ಪ್ರತಿಷ್ಠಿತವಾಗಿವೆ. ಹಾಗೆಂದೇ ನೀರಿನ ಲಕ್ಷಣಗಳನ್ನೂ ಮುಷ್ಕರದ ಅವಲಕ್ಷಣಗಳನ್ನೂ ಅರಿತ ನಿಜ ವಿದ್ಯಾವಂತರು (ಬರಹಗಾರರು) ಅಂದು ನುಡಿದ ಭವಿಷ್ಯ ಇಂದು ನಿಜವಾಗುತ್ತಿದೆ.

ನಮ್ಮ ಶಾಲೆ, ನಮ್ಮ ವಿದ್ಯಾಭ್ಯಾಸ, ನಮ್ಮ ತಂತ್ರವಿದ್ಯೆ ಇವೆಲ್ಲವೂ ಹಂತ ಹಂತವಾಗಿ ಪ್ರಕೃತಿನಾಶದ ವಿದ್ಯಮಾನಗಳಾಗಿರುವಾಗ, ನೀರು ಬತ್ತಿಸುವ ಮಾನವೀಯ ಪ್ರೇಮದ ಬಿಸರು ಕುಂದಿಸುವ ದಾವಾಗ್ನಿಯಾಗಿರುವಾಗ ನಾವು ಸುಟ್ಟಲ್ಲದೆ ಪರಿಹಾರ ಸಾಧ್ಯವಿಲ್ಲ.

ಸಾಧ್ಯವಾಗಬೇಕಾದರೆ ನಮಗೆ ನಿಜವಾದ ಜ್ಞಾನಬೇಕು, ಪ್ರಕೃತಿ ವಿಜ್ಞಾನಬೇಕು, ಬರ ನೀಗಬೇಕಾದರೆ ಜೊತೆಗೆ "ಹ" ಸೇರಿ ಬರಬೇಕು. ನಮಗೆಲ್ಲಾ ಬರಹಬೇಕು. ಶಾಲೆಗೆ ಹೋದವರಿಗೆ, ಡಿಗ್ರಿ ಪಡೆದವರಿಗೆ ಸರ್ಕಾರ ಅಥವಾ ಕಂಪ್ಯೂಟರ್ ಕಂಪನಿ ಉದ್ಯೋಗಕೊಡದಿದ್ದರೂ ವಿಷರಹಿತ ಅನ್ನ ಸಂಪಾದಿಸುವ ಬಗೆ ತಿಳಿಯಬೇಕು. ತಮ್ಮ ಭಾವನೆಗಳನ್ನು ಅಕ್ಷರಗೊಳಿಸುವ ಸಾಮರ್ಥ್ಯ ಬರಬೇಕು. (ಗಮನಿಸಿ—ಕಲ್ಲು ತೂರದೆ, ಘೋಷಣೆ ಕೂಗದೆ ಸರ್ಕಾರವನ್ನು ನಿಯಂತ್ರಿಸುವ ಸಾಮರ್ಥ್ಯ ಸಾತ್ವಿಕ ಬರಹಕ್ಕೆ ಇದೆ. ಇದಕ್ಕಾಗಿ ಸಾರ್ವಜನಿಕರೆಲ್ಲರೂ ಬರಹಗಾರರಾಗಬೇಕು.)

ಬರದ ಚಿತ್ರವನ್ನು ಬದಲಿಸಬಲ್ಲ "ಹ"

ಯಾವುದೆಂದು ನೀವು ಬಲ್ಲಿರಾ? ಅದೇ ಹಸುರು. ಪ್ರಕೃತಿಯ ಹಸುರು. ಹೃದಯದ ಹಸುರು, ಈ ಎರಡು ಹಸುರುಗಳನ್ನು ಬೆಳೆಸ ಬಲ್ಲ, ಪ್ರಕೃತಿಯನ್ನೂ ಮಾನವ ಹೃದಯ ಗಳನ್ನೂ ಬೆಸೆಯಬಲ್ಲ ಬರಹ ನಮಗೆಬೇಕು.

ವಿದ್ಯೆಯಿಂದ, ಡಿಗ್ರಿ ಸರ್ಟಿಫಿಕೇಟಿನಿಂದಲೇ ಅನ್ನ ಸಂಪಾದಿಸುವಂಥಾದ್ದು ರಾಕ್ಷಸೀಯವಾದದ್ದು. ರಾಕ್ಷಸರೂ, ಋಷಿಗಳೂ ಸಮಾನವಾಗಿ ವಿದ್ಯಾವಂತರು ಸಾಧಕರು. ಇಬ್ಬರೂ ದೇವರನ್ನು ಸಾಕ್ಷಾತ್ಕರಿಸಲು ಸಮರ್ಥರು. ಆದರೆ ರಾಕ್ಷಸರು ದೇವರಲ್ಲಿ ಬೇಡುವ ವರ ಏನು? ಋಷಿಗಳು ಬೇಡುವ ವರ ಏನು? ಸರ್ವ ಜನರಿಗೆ ಹಿತವಾಗಲಿ' ಎಂದು ಬೇಡುವ ಋಷಿಗಳ ಮನೋಧರ್ಮವನ್ನು ಕೊಡದ ನಮ್ಮ ರಾಕ್ಷಸ ವಿದ್ಯೆಯು ಅಳಿಯುವ ವರೆಗೆ, ಸೋಮಾರಿತನದ ಪರಮಾಧಿಕ್ಯದಲ್ಲಿ ವರ್ತಿಸುತ್ತಿರುವ ಕಂಪ್ಯೂಟರೀಕರಣದ ಹುಚ್ಚು ಬಿರಿಯುವವರೆಗೆ ಇನ್ನೊಂದು ತೊಟ್ಟು ಹೆಚ್ಚುವರಿ ನೀರನ್ನು ಕೊಡಲು ಯಾರಿಂದಲೂ ಸಾಧ್ಯವಿಲ್ಲ.

ಗಾಳಿಯ, ನೀರಿನ, ಆಹಾರದ ಸಮತೋಲನದಲ್ಲಿ, ನಿರಂತರತೆಯಲ್ಲಿ ಹಸುರಿನ ಪಾತ್ರ ಮಹತ್ತರವಾದದ್ದು. ಹಸುರಿಲ್ಲದ ಹೊನ್ನು (ಸಂಪತ್ತು) ವ್ಯರ್ಥವಾದದ್ದು. (ಈಗಾಗಲೇ ಸಾಧಿತವಾಗಿದೆ) ಹೀಗಿರುತ್ತಾ ಹಸುರನ್ನು ಹ್ರಸ್ವಗೊಳಿಸುತ್ತಿರುವ ಪೇಟೆ ಹಾಗೂ ಕೈಗಾರಿಕೆಗಳನ್ನು ಅತ್ಯಂತ ಅಗತ್ಯ ಮಿತಿಗೆ ಇಳಿಸುವ ಕುರಿತು ಗಮನ ಹರಿಸುವುದು ಅನಿವಾರ್ಯ. ಈ ಅನಿವಾರ್ಯತೆಯನ್ನು ಸಾಧ್ಯಗೊಳಿಸುವ ಪ್ರಮುಖ ಮಾರ್ಗ ಸಾವಯವ ಕೃಷಿ. ಸಾವಯವ ಕೃಷಿಯ ವಿಜ್ಞಾನ ವಿಸ್ತಾರಗೊಂಡರೆ ಎಪ್ಪತ್ತು ಶತಾಂಶ ಕಾರ್ಖಾನೆಗಳು ಹಾಗೂ ಪೇಟೆಗಳು ಹಾಗೂ ಸಮಸ್ಯೆಗಳು ಬಹಳ ಸುಲಭವಾಗಿ ಕರಗಿಬಿಡುತ್ತವೆ. ಉಳಿದ ಮೂವತ್ತು ಶತಾಂಶ, ವೈಯಲ್ಲಿ ಅಪರೂಪ ಕ್ಕೊಮ್ಮೆ ಬರುವ ನವೆಯಂತೆ, ಉಳುಕಿನಂತೆ ಬಂದು ಹೋಗುತ್ತಿರುತ್ತವೆ. ಹೈಟೆಕ್ ವೈದ್ಯದ ಅಗತ್ಯ ಬರುವುದಿಲ್ಲ. ಇಂಥಾ ಹಸುರಿಗಾಗಿ ನಾವು ಹಂಬಲಿಸೋಣ. ಮೂಲದಲ್ಲೇ ತಪ್ಪುಗಳನ್ನು ತಿದ್ದೋಣ. ಭಗೀರಥ ಪ್ರಯತ್ನವಿಲ್ಲದೆ ಗಂಗೆ ಅವತರಿಸಲಾರಳು ಎಂಬ ಪ್ರಕೃತಿ ತತ್ವವನ್ನು ಅರಿತು ಆಚರಿಸೋಣ.

ಪ್ರಕೃತಿ ಚಕ್ರದ ನಿರಂತರ ಪರಿಕ್ರಮಣಕ್ಕೆ
ವಿಕೃತಮತಿ ಬಿರಿಹಾಕಿ ಸ್ವಾರ್ಥಗಟ್ಟಿಸಿಕೊಂಡ
ಪ್ರಕೃತಲಾಭದ ದುರಾಶೆಯಮಳಿಗೆ ಸೆರೆಯಾದ
ಭೂ ಕೃಷಿಕ ಬರಕೆ ತಾ ಬಲಿಯಾದ ಅತ್ರಿಸೂನು

---

# ಡೋನಿ ಲಾಮಾನ ಧೈರ್ಯ

ಕೆ. ಸುಕನ್ಯಭಟ್
ಮಗೀರಾ ಹೌಸ್
ಕದ್ರಿರಾಕ್‌ಸೈಡ್
ಮಂಗಳೂರು–೫೭೫ ೦೦೪

ಸೌದಿ ಅರೇಬಿಯಾದಲ್ಲಿ ಪ್ರತಿಯೊಬ್ಬ ಫಿಲಿಪ್ಪೈನ್ ಕೆಲಸಗಾರನ ಧರ್ಮದ ಮೇಲಿನ ನಂಬಿಕೆಯನ್ನು ತೀಕ್ಷ್ಣ ಪರೀಕ್ಷೆಗೆ ಒಳಪಡಿಸಲಾಗುತ್ತಿತ್ತು.

ಸೌದಿ ಅರೇಬಿಯಾದ ರಾಜಧಾನಿ ರಿಯಾದ್‌ನಲ್ಲಿಯ ಕೊಠಡಿಯೊಂದರಲ್ಲಿ ಕುಳಿತಿದ್ದ ಡೋನಿ ಲಾಮಾ, ರಭಸದಿಂದ ಬಾಗಿಲು ಬಡಿದದ್ದು ಕೇಳಿ ಗಾಬರಿಗೊಂಡಿದ್ದ. ಬಿಳಿಯ ಉದ್ದನಿಲುವಂಗಿಗಳನ್ನು ಧರಿಸಿದ್ದ ಏಳು ಮಂದಿ ಧಡೂತಿ ಪೊಲೀಸರು ಒಳನುಗ್ಗಿ ಅವನ ಕೈಗಳಿಗೆ ಕೋಳಗಳನ್ನು ತೊಡಿಸಿದರು.

ಆ ಪೊಲೀಸರು ಶೀತೋಪಕರಣಗಳನ್ನು ತಲೆಕೆಳಗುಮಾಡಿ, ಕಪಾಟಿನ ಮತ್ತು ಡ್ರಾಯರ್‌ನ ಶೋಧನೆ ಮಾಡಿದಾಗ, "ನಾನೇನು ಮಾಡಿದ್ದೇನೆ"—ಎಂದು ಲಾಮಾ ತಗಾದೆ ಮಾಡಿದ್ದ.

"ನಾವು ನಿನ್ನನ್ನು ಪೊಲೀಸ್ ಠಾಣೆಗೆ ಕರೆದೊಯ್ಯುತ್ತಿದ್ದೇವೆ. ಅಲ್ಲಿ ನಿನ್ನ ಪ್ರಶ್ನೆಗಳನ್ನ ಕೇಳು"—ಎಂದು ಅವರ ಪೈಕಿ ಒಬ್ಬನೆಂದಿದ್ದ.

ಒಂದು ವಾರದ ಹಿಂದೆ ಕೊಲೆ ಮಾಡಲ್ಪಟ್ಟಿದ್ದ ಫಿಲಿಪ್ಪೈನ್ ಅತಿಥಿ ಕೆಲಸಗಾರನೊಬ್ಬನ ಫೋಟೋವನ್ನು ಅಧಿಕಾರಿಯೊಬ್ಬ ಅಲ್ಲಿ ಲಾಮಾನಿಗೆ ತೋರಿಸಿದ್ದ.

"ಆ ವೇಳೆಯಲ್ಲಿ ನಾನು ಮನಿಲಾದಲ್ಲಿದ್ದೆ" —ಎಂದಿದ್ದ ಲಾಮಾ. ನನ್ನ ಪಾಸ್‌ಪೋರ್ಟ್ ಆ ಮಾತನ್ನು ದೃಢಪಡಿಸುತ್ತದೆ ಎಂದು ಹೇಳಿ ಸಮಾಧಾನದಿಂದ ಉಸಿರಾಡಿದ್ದ. ಕೂಡಲೇ ಪೊಲೀಸನೊಬ್ಬನು ಕಿರುಚುತ್ತಾ "ನೀನೊಬ್ಬ ಪಾದ್ರಿ"—ಎಂದು ಹೇಳಿ ಫೋಟೋ ಒಂದನ್ನು ಅವನ ಮುಖಕ್ಕೆ ಹಿಡಿದಿದ್ದ.

"ಇಲ್ಲ....ನಾನಲ್ಲ"—ಎಂದು ಲಾಮಾ ಅನೇಕ ಸಲ ಹೇಳಿದ್ದ. ಆದರೆ ಅದು ನಿಜವೆಂಬುದು ಅವನಿಗೆ ತಿಳಿದಿತ್ತು. ತಾನು ಕಷ್ಟದಲ್ಲಿದ್ದೇನೆ ಎಂಬುದು ಅವನಿಗೆ ತಿಳಿದು ಹೋಗಿತ್ತು. ಆ ಫೋಟೋ....ಅವನು ಬಿಟ್ಟು ಬಂದಿದ್ದ ಸಾಮಾನಿನ ಜೊತೆ ಅವರಿಗೆ ಸಿಕ್ಕಿತ್ತು. ರಿಯಾದ್‌ನಲ್ಲಿಯ ಚರ್ಚ್ ಒಂದರ ಪ್ರಾರ್ಥನೆಯಲ್ಲಿ ಅವನಿದ್ದಾಗ ತೆಗೆದ ಫೋಟೋ....ಅದಾಗಿತ್ತು.

ಹದಿನೆಂಟು ಗಂಟೆಗಳವರೆಗೆ ಅವನನ್ನು ಪ್ರಶ್ನಿಸುತ್ತಾ, ಹೊಡೆಯುತ್ತಾ ಇದ್ದ ಪೊಲೀಸರು ಅನಂತರ ಅವನನ್ನು ರಸ್ತೆಗೆ ಎಸೆದರು. ಆಗ ಅವನು, ತಾನು ಅಲ್ಲಿಯ ನಿಕೃಷ್ಟ ಶಿಕ್ಷೆಯಿಂದ ಪಾರಾದೆ ಎಂದುಕೊಂಡಿದ್ದ. ಆದರೆ ಅವರು ಅವನನ್ನು ಪುನಃ ಹಿಡಿದು, ಎಲ್ಲರಿಂದ ಪ್ರತ್ಯೇಕವಾಗಿ ಇಟ್ಟಿದ್ದರು. ಆನಂತರ ಧರ್ಮನಿಷ್ಠ ಪೊಲೀಸ

೨೦೦೦ರ ಮಾರ್ಚಿ ತಿಂಗಳ 'ರೀಡರ್ಸ್ ಡೈಜೆಸ್ಟ್'ನಲ್ಲಿ ಪ್ರಕಟವಾದ ಫ್ಲಾಯಡ್ ವ್ಹೇಲೆ ಅವರ "ದ ಕರೇಜ್ ಆಫ್ ಡೋನಿ ಲಾಮಾ" ಎಂಬ ಲೇಖನದ ಅನುವಾದ.

ರಿಂದ ಅವನು ಪ್ರಶ್ನಿಸಲ್ಪಟ್ಟಿದ್ದ. ಹೊಡೆತಗಳಿಂದ ಅವನ ಪುಟ್ಟ ಶರೀರ ನೀಲಿ-ಕಪ್ಪು ಬಣ್ಣ ತಾಳಿದ ನಂತರವೇ ಪೊಲೀಸರು ಅವನೊಡನೆ ಒಪ್ಪಂದಕ್ಕೆ ಬಂದಿದ್ದರು. "ನೀನು ಈ ಪತ್ರಕ್ಕೆ ಸಹಿ ಹಾಕಿದರೆ ಮಾತ್ರ ನಿನ್ನನ್ನು ನಾವು ಬಿಡುತ್ತೇವೆ. ಇಲ್ಲದಿದ್ದರೆ ನೀನಿಲ್ಲೇ ಸಾಯಬಹುದು"—ಎಂದು ಒಬ್ಬ ಅಧಿಕಾರಿ ತಿಳಿಸಿದ್ದ.

ಅರೆಜ್ಞಾನಾವಸ್ಥೆಯಲ್ಲಿದ್ದ ಲಾಮಾ.... ತನಗೆ ಓದಲು ಸಾಧ್ಯವಿರದ ಅರೇಬಿಕ್ ಭಾಷೆಯಲ್ಲಿ ಬರೆದಿದ್ದ ವರದಿ ಪತ್ರದ ಮೇಲೆ ಹೆಬ್ಬೆಟ್ಟನ್ನೊತ್ತಿದ್ದ. ಅನಂತರ ಅವನನ್ನು ಅವನ ಸೆಲ್‌ಗೆ ಕಳಿಸಿದ್ದರು. ಈ ತನಕ ಅವನನ್ನು ಯಾವ ನ್ಯಾಯಾಧೀಶರ ಮುಂದೂ ಹಾಜರುಪಡಿಸಿರಲಿಲ್ಲ. ಅವನ ಮೇಲಿದ್ದ ಅಪಾದನೆ ಏನೆಂಬುದನ್ನೂ ಅವನಿಗೆ ತಿಳಿಸಿರಲಿಲ್ಲ ಮತ್ತು ವಕೀಲನನ್ನು ಕಾಣಲೂ ಬಿಟ್ಟಿರಲಿಲ್ಲ.

೧೯೯೫ರ ನವೆಂಬರ್ ತಿಂಗಳು 'ಮನಿಲಾ'ದಲ್ಲಿ ವಾಸಿಸುತ್ತಿದ್ದ ಲಿಯೋನಾರಾ ಲಾಮಾಳು, ತನಗೆ ಬಂದ ಪತ್ರದಿಂದ ದಿಗ್ಭ್ರಮೆಗೊಂಡಿದ್ದಳು. "ಡೋನಿಯನ್ನು ಬಂಧಿಸಿದ್ದಾರೆ. ತನ್ನ ಧರ್ಮದ ಮೇಲೆ ಅವನಿಗಿದ್ದ ನಂಬಿಕೆಯಿಂದಾಗಿ ಅವನೀಗ ಕಾರಾಗೃಹದಲ್ಲಿದ್ದಾನೆ. ನೀನು ಧೈರ್ಯವಾಗಿರು"—ಎಂದು ಲಾಮಾನ ಗೆಳೆಯರು ಪತ್ರದಲ್ಲಿ ಬರೆದಿದ್ದರು.

ಸೌದಿಯದಲ್ಲಿದ್ದ ೨೬,೦೦೦೦ಕ್ಕಿಂತಲೂ ಹೆಚ್ಚಿದ್ದ ಫಿಲಿಫೈನ್ ಕೆಲಸಗಾರರಂತೆ ಲಾಮಾ ಕೂಡ ಗೌಪ್ಯವಾಗಿ ಚರ್ಚಿನ ಪ್ರಾರ್ಥನೆಗೆ ಹೋಗಿದ್ದ. ಗೌಪ್ಯ ಅಲ್ಲಿ ಅತಿ ಅಗತ್ಯವಾಗಿತ್ತು. ಇಸ್ಲಾಂ ಹೊರತು ಇತರ ಮತ ಪ್ರಚಾರ ಅಲ್ಲಿ ನಿಷೇಧಿಸಲಾಗಿತ್ತು. ಗಲ್ಫ್ ಯುದ್ಧದ ವೇಳೆ ರಾಜಧಾನಿಯನ್ನು ಕಾಪಾಡಲು ಬಂದಿದ್ದ ಅಮೆರಿಕಾದ ಯೋಧರಿಗೂ, ಪ್ರಾರ್ಥನೆ ಮಾಡುವುದು, ಶಿಲುಬೆ ಮತ್ತು ಬೈಬಲ್‌ನನ್ನು ಇಟ್ಟುಕೊಳ್ಳುವುದು ನಿಷೇಧಿಸಲಾಗಿತ್ತು.

ಸುದ್ದಿ ತಿಳಿದ ಕ್ಷಣ ಲಿಯೋನಾರಾ ತಮ್ಮ ದೇಶದ ಮತ್ತು ಪರದೇಶದ ರಾಜತಾಂತ್ರಿಕರನ್ನು ಕಂಡು ಸಹಾಯ ಕೋರಿದಳು.... ಆದರೆ ಅದರಿಂದ ಯಾವ ರೀತಿಯ ಸಹಾಯವೂ ಅವಳಿಗೆ ದೊರಕಲಿಲ್ಲ.

ತನ್ನ ಮನೆಗೆ ಬಸ್ಸಿನಲ್ಲಿ ನಿರಾಶಳಾಗಿ ಹಿಂತಿರುಗಿದ್ದ ವೇಳೆ ಲಿಯೋನಾರಾಳಿಗೆ ಸತ್ಯದ ಅರಿವಾಗಿತ್ತು. ಫಿಲಿಫೈನ್ ಸರ್ಕಾರಕ್ಕೆ, ಸೌದಿ ಅರೇಬಿಯಾದಲ್ಲಿ ಕೆಲಸ ಮಾಡುವ ತಮ್ಮ ಕೆಲಸಗಾರರು, ದಾದಿಯರು, ಮನೆ ಕೆಲಸಗಾರರು ಮತ್ತು ಇತರರೂ ಕಳಿಸುವ ಹಣ ಮಾತ್ರ ಮುಖ್ಯವಾಗಿತ್ತು. ಸೌದಿಗಳನ್ನು ಪ್ರಶ್ನಿಸಿ ಅವರ ಕೋಪಕ್ಕೆ ತುತ್ತಾಗಿ, ಅಲ್ಲಿಂದ ಬರುವ ಹಣ ನಿಲ್ಲಿಸಿಕೊಳ್ಳುವುದು ಸರ್ಕಾರಕ್ಕೆ ಬೇಕಿರಲಿಲ್ಲ.

ಮನೆಯವರಿಂದ, ಚರ್ಚ್‌ನ ಧರ್ಮಗುರುಗಳಿಂದ ಉಪದೇಶಿಸಲ್ಪಟ್ಟಿದ್ದ ಲಾಮಾನಿಗೆ ತನ್ನ ಧರ್ಮದ ಮೇಲೆ ದೃಢನಂಬಿಕೆ ಇದ್ದದ್ದು, ಅವನದನ್ನು ಬಾಲ್ಯದಿಂದಲೇ ಪೋಷಿಸಿಕೊಂಡು ಬಂದದ್ದು ಲಿಯೋನಾರಾಳಿಗೆ ತಿಳಿದಿತ್ತು. ಮನಿಲಾದಿಂದ ೯೦೦ ಕಿ.ಮೀ. ದೂರದ ಫಿಲಿಫೈನ್ ಹಳ್ಳಿಯೊಂದರಲ್ಲಿ ಜನಿಸಿದ್ದ ಲಾಮಾ ಅತಿ ಬಡತನದಿಂದಾಗಿ ಶಾಲೆಗೆ ಹೋಗಲಾಗಿರಲಿಲ್ಲ. ಅದ್ದರಿಂದ ಅವನು ಚಿಕ್ಕವನಿದ್ದಾಗಲೇ

ರಾಜಧಾನಿಗೆ ಕೆಲಸಗಾರನಾಗಿ ಹೋಗಿದ್ದ. ಅಲ್ಲಿ ಇಗರ್ಜಿಗೆ ಹೋಗುತ್ತಿದ್ದ ಮತ್ತು ಅದೇ ಅವನ ಮತ್ತೊಂದು ಮನೆ ಆಗಿದ್ದಿತ್ತು. ಅಲ್ಲಿದ್ದಾಗ ಅವನು ಜ್ಞಾನಸ್ನಾನ ಮಾಡಿಸುವ, ಶವಸಂಸ್ಕಾರ ಮಾಡಿಸುವ ಕೆಲಸಗಳಲ್ಲಿ ಸಹಾಯಮಾಡುತ್ತಿದ್ದ. ಅವನಿಗೆ ತಿಳಿಯದಿದ್ದಾಗ ಹೇಳಿಕೊಡಲು ಸದಾ ಬೇರೆ ಪಾದ್ರಿಗಳು ಇರುತ್ತಿದ್ದರು.

ಆಗಲೇ ಲಾಮಾ ಲೆಕ್ಕಪತ್ರ ಇಡುವ ಬಗ್ಗೆ (ಅಕೌಂಟಿಂಗ್) ಡಿಗ್ರಿ ಪಡೆದು ಸೌದಿಯಲ್ಲಿ ಕೆಲಸ ಗಿಟ್ಟಿಸಿಕೊಂಡಿದ್ದ. ಫಿಲಿಫೈನ್‌ನಲ್ಲಿದ್ದಾಗ ಅವನಿಗೆ ಸಿಗುತ್ತಿದ್ದ ಸಂಬಳದ ಮೂರು ಪಟ್ಟು ಸೌದಿ ಅರೇಬಿಯಾದಲ್ಲಿ ಸಿಕ್ಕಿದ್ದರಿಂದ ಮೊದಲು ಅಲ್ಲಿಗೆ ಹೋಗಲು ಇಷ್ಟಪಡದಿದ್ದರೂ ಲಾಮಾ ಹೋಗಿದ್ದ. ಸಾಧ್ಯವಾದಾಗೆಲ್ಲ ಫಿಲಿಫೈನ್‌ಗೆ ಹಿಂತಿರುಗಿ ಬರುತ್ತಿದ್ದ ಲಾಮಾ, ಲಿಯೋನಾರಾಳನ್ನು ಮದುವೆಯೂ ಆಗಿದ್ದ. ಅವರಿಗೆ ಮೂರು ಮಕ್ಕಳಿದ್ದರು. ಕಷ್ಟಪಟ್ಟು ಕೆಲಸಮಾಡುತ್ತಿದ್ದ ಲಾಮಾ ಉನ್ನತ ಹುದ್ದೆಗೇರಿದ್ದ. ಸೌದಿ ವಿಮಾನಯಾನ ಸಂಸ್ಥೆಯಲ್ಲಿ ದುಡಿಯುತ್ತಿದ್ದ ಅವನು ಮನೆಗೂ ಹೆಚ್ಚು ಹಣ ಕಳಿಸುತ್ತಿದ್ದ. ಆಗಾಗ್ಗೆ, ಮಕ್ಕಳಿಗೆ ಶಾಲಾ ರಜೆ ಇದ್ದಾಗ ಮನೆಯವರನ್ನೆಲ್ಲಾ ಸೌದಿಗೆ ಕರೆದೊಯ್ಯುತ್ತಿದ್ದ. ಆಗ ಲಿಯೋನಾರಾ ಕೂಡ ಚರ್ಚಿಗೆ ಪ್ರಾರ್ಥನೆಗೆಂದು ಹೋಗುತ್ತಿದ್ದುದುಂಟು. ಮುಂದೊಂದು ದಿನ ತನ್ನ ಪತಿ ಸಿಕ್ಕಿಬೀಳಬಹುದೆಂಬ ಕಲ್ಪನೆ ಕೂಡ ಅವಳಿಗಾಗ ಆಗಿರಲಿಲ್ಲ.

ರಿಯಾಧ್‌ನ ಮರುಭೂಮಿಯಲ್ಲಿದ್ದ ಅಲ್-ಮಲಾಜ್ ಜೈಲಿಗೆ ಡೋನಿ ಕಳಿಸಲ್ಪಟ್ಟಿದ್ದ. ಕಾಲಿಗೂ ಸರಪಳಿ ಹಾಕಿ ಅವನನ್ನು ಕರೆದೊಯ್ದಿದ್ದಲ್ಲದೆ, ಅವನ ಸಾಮಾನುಗಳೆಲ್ಲವನ್ನೂ ಮುಟ್ಟುಗೋಲು ಹಾಕಿಕೊಂಡಿದ್ದರು. ಮನೆಯವರ ಫೋಟೋಗಳನ್ನು, ಮದುವೆಯ ಉಂಗುರವನ್ನು ಕೊಡುವಂತೆ ದ್ವಾರಪಾಲಕನನ್ನು ಬೇಡಿಕೊಂಡಿದ್ದರೂ ಅವನು ಉಂಗುರವನ್ನು ತಾನಿಟ್ಟುಕೊಂಡು ಪರ್ಸನ್ನು ಕಸದ ತೊಟ್ಟಿಗೆಸೆದಿದ್ದ.

ಪರ್ಸ್‌ನಲ್ಲಿದ್ದ ತನ್ನ ಪುಟ್ಟ ಮಗುವಿನ ಫೋಟೋವನ್ನಾದರೂ ಕೊಡುವಂತೆ ಬೇಡಿ ಪಡೆದುಕೊಂಡಿದ್ದ ಲಾಮಾ. ಕ್ರೈಸ್ತಧರ್ಮ ಬೋಧನೆ ಮಾಡಿದ್ದನೆಂದು ಲಾಮಾನ ಮೇಲೆ ಅಪರಾಧ ಹೊರಿಸಿದ್ದರು. ವಕೀಲನನ್ನಿಟ್ಟುಕೊಳ್ಳಲು ಬಿಡಲಿಲ್ಲವಾದ್ದರಿಂದ ತನ್ನನ್ನು ಎಷ್ಟುಕಾಲ ಹಿಡಿದಿಟ್ಟಾರೆಂಬುದೂ ಅವನಿಗೆ ತಿಳಿದಿರಲಿಲ್ಲ.

ಇತರ ಇಪ್ಪತ್ತು ಪರದೇಶದ ಕೈದಿಗಳೊಡನೆ, ಅವನನ್ನಿರಿಸಿದ್ದರು. ಉರಿ ಸೆಖೆ ಇದ್ದ ಆ ಸೆಲ್‌ನಲ್ಲಿ ರಾತ್ರಿ ಮರುಭೂಮಿ ಹವಾಮಾನ ಕುಸಿದು, ಮಂಚದ ಮೇಲೆ ಮಲಗಿದ್ದರೂ ಅವನು ನಡಗುತ್ತಿದ್ದ. ಮಗುವಿನ ಫೋಟೋ ದಿಟ್ಟಿಸುತ್ತ, ಪ್ರಾರ್ಥಿಸುತ್ತ ತನ್ನ ಖಿನ್ನತೆಯನ್ನು ಕಡಿಮೆ ಮಾಡಿಕೊಳ್ಳುತ್ತಿದ್ದ.

ಒಂದುದಿನ, ಅವನ ಸಹಕೈದಿಯೊಬ್ಬ– "ನೀನು ನಿನ್ನ ನಂಬಿಕೆ ಬದಲಿಸಿಕೊಂಡರೆ, ಇಲ್ಲಿಂದ ಬೇಗ ಬಿಡುಗಡೆ ಸಿಕ್ಕೀತು", ಎಂದಿದ್ದ. ಲಾಮಾ ಅವನ ಮಾತುಗಳತ್ತ ಗಮನಕೊಟ್ಟರೂ, ಆ ಯೋಚನೆಯನ್ನೆ ತಳ್ಳಿಹಾಕಿದ್ದ. ತಾನು ನಂಬಿದ ಜೀವಂಗೆ

ಬೆನ್ನು ತೋರದಾದ. ಅದರ ಬದಲಿಗೆ, ಅವನು ಇತರ ಸಹಕೈದಿಗಳಿಗೆ ತಿಳಿಹೇಳಿ ಅವರೆಲ್ಲರ ಗುಂಪೊಂದನ್ನು ಕಟ್ಟಿದ್ದ. ಅವರ ದ್ವಾರಪಾಲಕ ತನ್ನ ಪ್ರಾರ್ಥನೆಗಾಗಿ ಬೇರೆಡೆ ಹೋದಾಗ, ಲಾಮಾ ಮತ್ತು ಇತರರು ಆ ಸೆಲ್‌ನ ಮೂಲೆಯಲ್ಲಿ ತಮ್ಮ ಪ್ರಾರ್ಥನೆಯನ್ನು ಸಲ್ಲಿಸಿದ್ದರು. ರೂಯೆಲ್ ಜೌಂಡಾ ಎಂಬ ಕೆಲಸಗಾರ ತನ್ನ ಮೇಲೆ ಸಶಸ್ತ್ರ ಕಳ್ಳತನದ ಆರೋಪ ಹೊರಿಸಿ ಬಂಧಿಸಿದ್ದಾರೆಂದು ಹೇಳಿಕೊಂಡಿದ್ದ. ಜೌಂಡಾನ ದೇವರಲ್ಲಿಯ ನಂಬಿಕೆ ಕಂಡು ಲಾಮಾನಿಗೂ ಅವನ ಮೇಲೆ ನಂಬಿಕೆ ಹುಟ್ಟಿತ್ತು.

ಜೈಲಿನ ಅಧಿಕಾರಿಗಳ ಕೃಪೆಗೊಳಗಾಗಲು ಇಚ್ಛಿಸಿದ ಕೆಲ ಮುಸ್ಲಿಂ ಕೈದಿಗಳು ವಿಶ್ವಾಸ ಘಾತ ಮಾಡಿದ್ದರು. ಗುಟ್ಟು ರಟ್ಟಾಗಿತ್ತು. ಲಾಮಾ ಮತ್ತು ಜೌಂಡಾರನ್ನು ಮತ್ತೊಂದು ಚಿಕ್ಕ ಸೆಲ್‌ಗೆ ಹಾಕಿದ್ದರು. ತೊಂದರೆ ಕೊಡುವ ಕೈದಿಗಳನ್ನು ಆ ಸೆಲ್‌ನ ಎದುರಿದ್ದ ಗೋಡೆಗೆ ಸರಪಳಿಗಳಿಂದ, ನಾಯಿಗಳಂತೆ ಕಟ್ಟಿಹಾಕಿದ್ದರು. ಆ ಅಂಗಳದಲ್ಲಿದ್ದ ಕಟ್ಟೆಯ ಮೇಲೆ ಕೈದಿಗಳನ್ನು ನಿಲ್ಲಿಸಿ ಸೀಸದ ಮೊನೆಯಿದ್ದ ಚಾಪಟಿಯಿಂದ ಥಳಿಸುತ್ತಿದ್ದರು. ಅವರೆಲ್ಲರ ಅಳು ಗೋಳಾಟ ಕಂಡ ಲಾಮಾ ಎಷ್ಟೋ ರಾತ್ರಿಗಳನ್ನು ನಿದ್ರೆ ಇಲ್ಲದೆ ಕಳೆದಿದ್ದ.

ಲಾಮಾ ಮತ್ತು ಜೌಂಡಾರನ್ನು ಅವರು ಹಿಂದೆ ಇದ್ದ ಕಾರಾಗೃಹಕ್ಕೆ ಕಳುಹಿಸಿದ್ದರು. ಅವರಿಗೆ ಕಾದಿರುವುದಾದ ಶಿಕ್ಷೆಯ ಬಗ್ಗೆ ಏನೂ ಹೇಳದಿದ್ದರು ..."ಇನ್ನೊಮ್ಮೆ ಏನಾದರೂ ತೊಂದರೆ ಮಾಡಿದರೆ ನಿಮಗೆ ಕೊನೆಯ ಶಿಕ್ಷೆ ಕಾದಿದೆ" ಎಂದು ಎಚ್ಚರಿಸಿಸಿದ್ದರು. ಶಿರಚ್ಛೇದಿಸುವುದು "ಅಲ್-ಮುಲಾಜ್"ನಲ್ಲಿ ವಿರಳವಾಗಿರಲಿಲ್ಲ.

"ತಂದೆ ಏಕೆ ಜೈಲಿನಲ್ಲಿದ್ದಾರೆ"? ಎಂಬ ಪ್ರಶ್ನೆಗೆ ಲಿಯೋನಾರಾಳಿಗೆ ಉತ್ತರ ಕೊಡುವುದು ಕಷ್ಟವಾಗುತ್ತಿತ್ತು. ಅನ್ಯಧರ್ಮೀಯರ ಬಗ್ಗೆಯೂ ಕರುಣೆ ತೋರಬೇಕೆಂಬುದನ್ನು ಇಸ್ಲಾಂ ಬೋಧಿಸಿದರೂ ...ಸೌದಿಗಳು ಇತರ ಧರ್ಮಗಳನ್ನು ಸಹಿಸುತ್ತಿರಲಿಲ್ಲ" ಎಂದು ಡೇವಿಡ್ ಫೋರ್ಟ್ ಎಂಬ ಅಮೇರಿಕಾ-ಇಸ್ಲಾಂನ ಕಾನೂನು ತಜ್ಞ ಹೇಳಿದ್ದ. ಸಂದರ್ಶಕರೂ ಕೂಡಾ ಅಲ್ಲಿ ತಮ್ಮ ಧರ್ಮದ ಆಚರಣೆಯನ್ನು ಮಾಡಿದರೆ ಶಿಕ್ಷೆ ಕಾದಿರುತ್ತಿತ್ತು.

ಅದರೂ ಲಿಯೋನಾರಾ ಸುಮ್ಮನೆ ಕೂರದೆ ನೇರವಾಗಿ ಫಿಲಿಫೈನಿನ ಅಧ್ಯಕ್ಷರಾದ ಫಿಡೆಲ್ ರ‍್ಯಾಮೋಸ್‌ರಿಗೆ ಪತ್ರ ಬರೆದು ಸಹಾಯ ಯಾಚಿಸಿದ್ದಳು. ಆದರೆ ಅವರಿಂದ ಯಾವ ಉತ್ತರವೂ ಅವಳಿಗೆ ಬರಲೇ ಇಲ್ಲ.

ಸೌದಿ ಅರೇಬಿಯಾದಲ್ಲಿದ್ದ ಇತರ ಗೆಳೆಯರಿಗೆ ಅವಳು ಪತ್ರಗಳನ್ನು ಬರೆದಿದ್ದಳು. ಅದನ್ನವರು ಸಂದರ್ಶಕರಿಗಾಗಿ ಇದ್ದ ದಿನ ಜೈಲಿಗೆ ಹೋಗಿ ಲಾಮಾನಿಗೆ ಕೊಡುತ್ತಿದ್ದರು. "ನಾನೂ ಮತ್ತು ಮಕ್ಕಳು ನಿನಗಾಗಿ ಪ್ರಾರ್ಥಿಸುತ್ತೇವೆ. ನಿನ್ನ ಆರೋಗ್ಯ ನೋಡಿಕೊ"–ಎಂದು ಲಿಯೋನಾರಾ ಪತ್ರದಲ್ಲಿ ಬರೆದಿದ್ದಳು.

ಕೆಲ ಪತ್ರಗಳನ್ನು ಪ್ರಯಾಸಪಟ್ಟು ಲಾಮಾನೂ ತನ್ನ ಪತ್ನಿಗೆ ಕಳಿಸಿದ್ದ. ಅದರಲ್ಲವನು–"ನೀನು ಮಕ್ಕಳಿಗಾಗಿ ಧೈರ್ಯದಿಂದಿರು. ನೀನು ಬೇಸರಪಡುವುದನ್ನವರು ಕಂಡರೆ, ಅವರೂ ಕಂಗೆಡುತ್ತಾರೆ" ಎಂದು ಬರೆದಿದ್ದ.

ಸುಮಾರು ೧ ವರ್ಷ ಮೊಕದ್ದಮೆಯು ವಿಚಾರಣೆಯಿಲ್ಲದೆ, ಕಾರಾಗೃಹದಲ್ಲಿ ಲಾಮಾ ಇದ್ದ. ಕೊನೆಗೆ ನವೆಂಬರ್ ೧೯೯೭ ರಂದು ಕೈ-ಕಾಲುಗಳನ್ನು ಸರಪಳಿಗಳಿಂದ ಬಿಗಿದು ರಿಯಾದ್‌ನಲ್ಲಿನ ನ್ಯಾಯಾಧೀಶರ ಮುಂದೆ ಹಾಜರುಪಡಿಸಿದ್ದರು. "ಈಗಲಾದರೂ....ನೀನು ಮುಸ್ಲಿಂ ಆಗಿದ್ದೀಯಾ?" ಎಂದಾತ ಪ್ರಶ್ನಿಸಿದ್ದ. ಸ್ವಾತಂತ್ರ್ಯದ ಹಕ್ಕು ಇಲ್ಲದ ಸೌದಿಯಲ್ಲಿ, ತನ್ನ ಉತ್ತರದಿಂದ ಒದಗಬಹುದಾದ ಕಠಿಣ ಶಿಕ್ಷೆಯ ಅರಿವಿದ್ದರೂ ಡೋಸಿ ಲಾಮಾ— "ನಾನೆಂದಿಗೂ ಮುಸ್ಲಿಂ ಆಗಲಾರೆ" ಎಂದು ಗಂಭೀರವಾಗಿ ಹೇಳಿದ್ದ.

ಕೋಪೋದ್ರಿಕ್ತನಾದ ನ್ಯಾಯಾಧೀಶ, ಲಾಮಾ ಹೆಟ್ಟಿಟ್ಟುತ್ತಿ ನೀಡಿದ್ದ ಅರೇಬಿಯಾ ಭಾಷೆಯಲ್ಲಿದ್ದ ವರದಿಯನ್ನು ಎತ್ತಿ ತೋರಿಸಿದ್ದ. ತನ್ನ ತಪ್ಪೊಪ್ಪಿಗೆಯ ಪತ್ರ ಅದಾಗಿತ್ತೆಂದು ಆಗಲೇ ಲಾಮಾನಿಗೆ ತಿಳಿದದ್ದು.

ಲಾಮಾನಿಗೆ ಹದಿನೆಂಟು ತಿಂಗಳುವರೆಗೆ ಕಾರಾಗೃಹವಾಸ ಮತ್ತು ಎಪ್ಪತ್ತು ಛಡಿ ಏಟುಗಳ ಶಿಕ್ಷೆ ವಿಧಿಸಿದ್ದರು. 'ಲೆಕ್ಕವಿಡಲಾರದಷ್ಟು ಹೊಡೆಸಿಕೊಂಡ ಇತರ ಕೈದಿಗಳ ನೆನಪಾಗಿ ಲಾಮಾ ನಡುಗಿಹೋದ. ನಿರಾಶೆ ಮತ್ತು ಒಂಟಿತನ ಅವನನ್ನಾಗ ಆವರಿಸಿದ್ದುವು.

ಕ್ರಿಸ್‌ಮಸ್ ಸಮಯದಲ್ಲಿ ಒಬ್ಬಳಿಂದ ಅವನಿಗೆ ಧೈರ್ಯ ತುಂಬುವ ಪತ್ರ ಬಂದಿತ್ತು. ನೆದರ್‌ಲ್ಯಾಂಡ್‌ನಲ್ಲಿದ್ದ ಆ ಹೆಂಗಸಿಗೆ ಅವನು ಬರೆದ ಉತ್ತರದ ಪ್ರತಿಯನ್ನು ಅವಳು ಡಚ್ ದೇಶದಲ್ಲಿದ್ದ ಇತರರಿಗೆ ತೋರಿಸಿದ್ದಳು. ತಮ್ಮ ಧರ್ಮದಲ್ಲಿ ಅಪಾರ ನಂಬಿಕೆಯನ್ನಿಟ್ಟಿದ್ದ ಅವರು, ಡೋಸಿ ಲಾಮಾನ ಬಗ್ಗೆ ಒಂದು ಸಾಹಿತ್ಯಿಕ ಪುರವಣಿಯಲ್ಲಿ ಬರೆದು ಪ್ರಚಾರ ಮಾಡಿದ್ದು.

ಲಾಮಾನ ಶಿಕ್ಷೆಯ ದಿನ ಹತ್ತಿರ ಬಂದಾಗ ಅವನಿಗೆ ಪತ್ರಗಳ ಕಟ್ಟನ್ನ ದ್ವಾರಪಾಲಕ ತಂದುಕೊಟ್ಟಿದ್ದ.

"ನನ್ನ ಜೀವನವೇ ಕಷ್ಟದಲ್ಲಿದೆ. ಆದರೂ ನಿನ್ನ ಕಷ್ಟದ ಮುಂದೆ ಏನೇನೂ ಅಲ್ಲ"–ಎಂದು ಇಪ್ಪತ್ತೈದು ವರ್ಷದ ಅರ್ಥಶಾಸ್ತ್ರ ವಿದ್ಯಾರ್ಥಿ, ದಕ್ಷಿಣ ಅಮೆರಿಕಾದಿಂದ ಬರೆದಿದ್ದ. ಮತ್ತೊಬ್ಬ ಅಮೆರಿಕಾದಿಂದ "ನಿನಗಾಗಿ ಪ್ರಾರ್ಥಿಸುತ್ತಿದ್ದೇನೆ" ಎಂದೂ ತಿಳಿಸಿದ್ದ. ಅನಂತರವೂ ಸುಮಾರು ಇನ್ನೂರು ಪತ್ರಗಳು ಅವನಿಗೆ ಬಂದಿದ್ದುವು. ನಡುಗುತ್ತಾ ಅವನದನ್ನೆಲ್ಲಾ ಓದಿದ್ದ ಮತ್ತು ಧೈರ್ಯ ತಂದುಕೊಳ್ಳುತ್ತಿದ್ದ.

ಫೆಬ್ರವರಿ ೨, ೧೯೯೭ ರಂದು, ಮರುಭೂಮಿಯ ಚಳಿಗಾಳಿ ಬೀಸುತ್ತಿದ್ದಾಗಲೇ ಲಾಮಾನಿಗೆ ತೆಳ್ಳಗಿನ ಉಡುಪು ತೊಡಿಸಿ ಸೆಲ್‌ನಿಂದ ಹೊರಗೆ ಕರೆದೊಯ್ದಿದ್ದರು. ಪ್ರಾರ್ಥಿಸಿ ಕಾಲುಗಳು ನಡುಗುತ್ತಿದ್ದರೂ ಹೊಡೆಸಿಕೊಳ್ಳಲು ಅವನು ಸಿಮೆಂಟಿನ ಕಟ್ಟೆಯೇರಿದ್ದ, ಚಾವಟಿಯ ಹೊಡೆತಗಳು ಒಂದಾದರ ಮೇಲೆ ಮತ್ತೊಂದಂತೆ ಬೀಳುತ್ತಲೇ ಇದ್ದಾಗ ನೋವಿನಿಂದ ಕಿರುಚುತ್ತಿದ್ದ. ಚರ್ಮ ಸುಲಿದಂತಾದರೂ ಹೊಡೆತ ನಿಂತಿರಲಿಲ್ಲ. ಎಚ್ಚರತಪ್ಪಿ ಬಿದ್ದಾಗಲೂ ಮೇಲೆತ್ತಿ ಅವನ ಬೆನ್ನಿಗೆ ಬಾರಿಸುತ್ತಿದ್ದರು.

ಯಾವಾಗ ಹೊಡೆತಗಳೆಲ್ಲಾ ಮುಗಿದುವೋ....ಆಗ ಅವನನ್ನ ಎಳೆದುಕೊಂಡು

ಹೋಗಿ ಸೆಲ್‌ನೊಳಗೆ ಹಾಕಿದ್ದರು. ನೆಲದಲ್ಲಿ ಬಿದ್ದಿದ್ದ ಅವನ ಮೈಯಿಂದ ರಕ್ತ ಸುರಿಯುತ್ತಿತ್ತು. ರೂಯೆಲ್ ಜಾಂಡಾ ಹೇಗೋ ಮಾಡಿ ಔಷಧಿಗಳನ್ನು ಜೈಲಿನ ಆಸ್ಪತ್ರೆಯಿಂದ ತರಿಸಿ, ಎಚ್ಚರಿಕೆಯಿಂದ ಅವನ ಬಾತುಹೋದ ಬೆನ್ನಿಗೆ ಹಚ್ಚಿದ್ದ, "ನಿನ್ನ ಧರ್ಮನಿಷ್ಠೆಗೆ ನೀನು ಅಚಲನಾಗಿದ್ದಿ, ನಿನಗೆ ನೋವು ಮಾಡಿದರೂ ಅವರಿಂದ ನೀನು ನಂಬಿದ ನಿನ್ನ ಧರ್ಮದಿಂದ ಚೂರೂ ಅಲ್ಲಾಡಿಸಲು ಆಗಲಿಲ್ಲ ಡೋನಿ"–ಎಂದು ಜಾಂಡಾ ಪ್ರಶಂಸಿಸಿದ್ದ.

ವಾರಗಟ್ಟಳೆ ಅವನು ಚೇತರಿಸಿಕೊಳ್ಳಲು ಕಷ್ಟಪಡಬೇಕಾಯಿತು. ಮಾರ್ಚ್ ೨೩ ೧೯೯೭ ರಂದು ಲಾಮಾ ತನ್ನ ಗೆಳೆಯನಿಗೆ ವಿದಾಯ ಹೇಳಿದ್ದ. ಅಲ್–ಮಲಾಜ್‌ನಿಂದ ಅವನಿಗೆ ಬಿಡುಗಡೆ ಕೊನೆಗೂ ಸಿಕ್ಕಿತ್ತು.

ತನ್ನ ಎರಡು ಮಾಳಿಗೆಯ ಹಳದಿ ಕಟ್ಟಡದಲ್ಲಿ ಕೂತು ಲಿಯೋನಾರ, ಹೋಗುವ ಎಲ್ಲ ಕಾರುಗಳತ್ತ ದೃಷ್ಟಿ ಚೆಲ್ಲುತ್ತಿದ್ದಳು. ಕೊನೆಗೆ ಒಂದು ಕಾರು ಅವಳ ಮನೆ ಮುಂದೆ ನಿಂತಿತ್ತು. ಹಿಂದಿನ ಸೀಟಿನಲ್ಲಿ ಕುಳಿತಿದ್ದ ಲಾಮಾ ಕೆಳಗಿಳಿದವನೇ ಹೆಂಡತಿಯ ತೋಳುಗಳಲ್ಲಿ ಕುಸಿದಿದ್ದ. ಮಾತಾಡಲು ಬೇಕಾದಷ್ಟಿದ್ದರೂ ಅವರಿಬ್ಬರೂ ಒಟ್ಟಿಗೆ ಆಗ ಮೌನವಾಗಿ ಅತ್ತಿದ್ದರು.

ಮಾರನೆಯ ದಿನ ಈಸ್ಟರ್ ಹಬ್ಬವಾದ್ದರಿಂದ ತನ್ನ ಪತ್ನಿ ಮತ್ತು ಮಕ್ಕಳನ್ನು ಡೋನಿಲಾಮಾ,ಮನೆಯ ಹತ್ತಿರವೇ ಇದ್ದ ಹೊಸ ಚರ್ಚಿಗೆ ಕರೆದೊಯ್ದಿದ್ದ–ಕಿಕ್ಕಿರಿದ ಜನಸ್ತೋಮ ಅಲ್ಲಿ ಆಗ ಇತ್ತು. ಕ್ರೈಸ್ತನ ಪುನರುತ್ಥಾನ ಕತೆಯನ್ನು ಮತ್ತು ಹೊಸ ರೂಪ ಕೊಟ್ಟ ಸಂದೇಶಗಳನ್ನು ಪಾದ್ರಿ ಆಗ ಹೇಳುತ್ತಿದ್ದ. ಅದರಿಂದ ದೊರೆತ ಭರವಸೆಯನ್ನು ಕೇಳಿದನಂತರ ಲಾಮಾ ತನ್ನ ತಲೆಯನ್ನು ಪ್ರಾರ್ಥಿಸುವುದಕ್ಕಾಗಿ ಬಗ್ಗಿಸಿದ್ದ.

ಸೌದಿ ಅರೇಬಿಯಾದಲ್ಲಿ ಶಿಕ್ಷೆಗೆ ಒಳಪಟ್ಟಂತಹ ಫಿಲಿಫೈನ್ ಕೈದಿಗಳ ಸಹಾಯಕ್ಕಾಗಿ ಡೋನಿಲಾಮ ಈಗ ಸಂಸ್ಥೆಯೊಂದನ್ನು ನಡೆಸುತ್ತಿದ್ದಾನೆ. ಬೈಬಲ್‌ನಲ್ಲಿ ತಿಳಿಸಿರುವಂಥ, ಸಿಂಹದ ಗುಹೆಯಿಂದ ಪೊರಬಂದ ಶೂರ ಡ್ಯಾನಿಯಲ್ ಎಂಬುವನ ಹೆಸರನ್ನು ತನ್ನ ನಾಲ್ಕನೇ ಮಗನಿಗೆ ಲಾಮಾ ಇಟ್ಟಿದ್ದಾನೆ. ಅವನ ಗೆಳೆಯ ರೂಯೆಲ್ ಜಾಂಡಾ ಮಾತ್ರ, ತನ್ನ ಧರ್ಮದ ಬಗ್ಗೆ ಅಚಲ ನಿರ್ಧಾರ ತಾಳಿ, ಮೇ, ೪, ೧೯೯೭ ರಂದು ಶಿರಚ್ಛೇದನೆಗೆ ಗುರಿಯಾದ.

# ಪುಸ್ತಕ ವಿಮರ್ಶೆ

**ನಕ್ಷತ್ರಗಳು**—ಸಂ: ರಾಘವೇಂದ್ರ ದಂಡಿನ್ (ಈಶಾನ್ಯ ಕರ್ನಾಟಕದ ಪ್ರಾತಿನಿಧಿಕ ಕವನ ಸಂಗ್ರಹ) ಪ್ರಕಾಶಕರು: ಶ್ರೀ ವಿಜಯ ವಿಠ್ಠಲ ಪ್ರಕಾಶನ, ಗಂಗಾವತಿ, ಪುಟಗಳು: ೧೨+೭೬=೮೮. ಬೆಲೆ: ೪೫–೦೦ ರೂಪಾಯಿಗಳು. ಮೊದಲ ಮುದ್ರಣ: ಮಾರ್ಚ್ ೨೦೦೦.

ಉತ್ತರ ಕರ್ನಾಟಕ ಅದರಲ್ಲೂ ಈಶಾನ್ಯ ಕರ್ನಾಟಕ ಪ್ರಕೃತಿಯು ಅವಕೃಪೆಗೆ ಸಿಲುಕಿ ತತ್ತರಿಸಿದ್ದರೆ ಆ ಭಾಗದ ಜನತೆ ರಾಜಕೀಯ, ಪ್ರಾದೇಶಿಕ ವೈಷಮ್ಯಗಳಿಗೂ ಈಡಾಗಿ ಬಳಲಿಹೋಗಿದ್ದಾರೆ. ಆದರೆ ಸೃಜನಾತ್ಮಕತೆಯನ್ನು ಯಾವುದೇ ರೀತಿಯ ಜಂಜಾಟಗಳೂ ಹತ್ತಿಕ್ಕಲಾರವು. ಅದು ಚಾಪೆಯ ಕೆಳಗಿನ ನೀರಿನಂತೆ ತನ್ನ ಹರಹನ್ನು ತಾನೇ ಕಂಡುಕೊಳ್ಳುತ್ತಾ ಸಾಗುತ್ತದೆ. ಅಂತೆಯೇ ೭೨ರ ದಶಕದಲ್ಲಿ 'ಕರ್ನಾಟಕದ ಈಶಾನ್ಯ ಭಾಗದಲ್ಲಿ ಬೆಳಕೇ ಮೂಡಿಲ್ಲ' ಎಂಬ ಮಾತನ್ನು ಅಳಿಸಿಹಾಕಲು ಶಾಂತರಸರು 'ಬೆನ್ನ ಹಿಂದಿನ ಬೆಳಕು' ಎಂಬ ೨೭ ಕವಿಗಳ ಕವನ ಸಂಕಲನವನ್ನು ತಂದರೆ ಈಗ ಹೊಸ ಸಹಸ್ರಮಾನಕ್ಕೆ ಅಡಿಯಿಡುವ ವೇಳೆಯಲ್ಲಿ 'ಬೆಳಕು' ಮೂಡಿದ ನಂತರ ಆರಿಲ್ಲ. ಜೊತೆಗೆ ಬೇರೆ ಬೇರೆ ದೀಪಗಳನ್ನು ಹೊತ್ತಿಸಿದೆ ಮತ್ತು ಅದರಲ್ಲಿನ ವೈವಿಧ್ಯಮಯವಾದ ದೀಪಗಳ ಕಾಂತಿ ವರ್ಣದೀಪ್ತವಾಗಿವೆ' ಎಂದು ಉತ್ಸಾಹಿ ತರುಣ ಕವಿ ಶ್ರೀ ರಾಘವೇಂದ್ರ ದಂಡಿನ್ ಅವರು ಉಳಿದ ೫೩ ಕವಿಗಳ ಸಹಕಾರದಿಂದ ಈ "ನಕ್ಷತ್ರಗಳು" ಕವನ ಸಂಕಲನದಲ್ಲಿ ಸಾಧಿಸಿದ್ದಾರೆ.

ಕವನ ಸಂಕಲನದ ಪುಟಗಳನ್ನು ತಿರುಗಿಸುತ್ತಾ ಸಾಗಿದಂತೆ ರಮ್ಯ, ನವ್ಯ, ಬಂಡಾಯ ಧ್ವನಿಗಳೆಲ್ಲಾ ಸಮನ್ವಯಗೊಳಿಸುತ್ತಾ ಭಕ್ತಿ, ಪ್ರೇಮ, ವಿರಹ, ನೋವು, ನಿರಾಶೆಮುಂತಾದ ಭಾವನೆಗಳನ್ನೆಲ್ಲಾ ಸಮ್ಮಿಲನಗೊಳಿಸಿಕೊಂಡು ಮುಂಜಾವಿನ ಸೂರ್ಯನ ಶಾಖದಲ್ಲಿ ಚಿಲಿಪಿಲಿಗುಟ್ಟುವ ಕಲ್ಬುರ್ಗಿಯ ಕೋಟೆಯ ಮರುವನದ ಎದಿರು ನಿಂತಂತಾಗುತ್ತದೆ.

ಇಲ್ಲಿ ಅಯ್ಯಪ್ಪಯ್ಯ ಹುಡಾ ಅವರ 'ಕಾವ್ಯ'ದ ಬಗೆಗಿನ ಸರಳ ಹೇಳಿಕೆಗಳಂತೆ ಅಲ್ಲಮಪ್ರಭು ಬೆಟ್ಟದೂರು ಅವರ 'ಕವಿತಾ' ಳೊಡನೆ ಕೂಡುವುದಕ್ಕಿರುವ ಸಂಕಟದ ವರ್ಣನೆಯೂ ಇದೆ. ಉ. ಶಾ. ಬಸವಣ್ಣೆಪ್ಪ 'ಮೂಕನ ಬಿಕ್ಕಳಿಕೆ'ಯಲ್ಲಿ ವ್ಯಕ್ತಪಡಿಸುವ ಶತಮಾನಗಳ ನೋವು ದುಃಖ ಚೀತ್ಕಾರಗಳ ಚಪ್ಪಡಿಗಲ್ಲಿನಡಿ ಸಿಲುಕಿ ನರಳುವ ಶೋಕತಪ್ತ ಮೂಕ ನರಳಿಕೆಯಂತೆ ಎ.ಎ. ರಾಮೇಶ್ವರ ಅವರು 'ಓ ನನ್ನ ವಿನಯವೇ' ಕವನದಲ್ಲಿ ನಿರೂಪಿಸುವ ಮೃದು ವಿನಯದ ಕೋರಿಕೆಯೂ ಗಮನ ಸೆಳೆದುಕೊಳ್ಳುತ್ತದೆ. ಎಂ. ಜಿ. ಗಂಗನಪಳ್ಳಿಯವರ 'ಮಣ್ಣ ಮುಖಗಳು', ಜಂಬಣ್ಣ ಅಮರಚಿಂತ ಅವರ 'ಮಾನವನ ಮಹಾಗಾನ' ಈ ಕವನಗಳಲ್ಲಿ ಮಾನವೀಯತೆಯ ಗಾನ ಅರಳುವ ಪ್ರೇರಣೆಗಳ ವರ್ಣನೆಯಿದ್ದರೆ, ಎಂ. ಲಕ್ಷ್ಮಣರ 'ಯಾರು ನೀನು' ರಾಘವೇಂದ್ರ ದಂಡಿನ್ ಅವರ ಕವಿ, ಬ್ರಹ್ಮ ಮತ್ತು ಅವಳು ಕವನಗಳು ಕವಿಕಲ್ಪನೆಯ ಸ್ಫೂರ್ತಿ ಚಿಲುಮೆಯನ್ನೇ ಬೆದಕಲು ಹೊರಡುತ್ತವೆ. ಎಸ್. ಎಸ್. ಹಿರೇಮಠ ಅವರ ಕವನ 'ಒಳಗೆ

ಹರಿಯುತಲಿಹುದೊ ನಾದಾ', ಶ್ರೀನಾಚಿ ಅವರ 'ಪ್ರಾರ್ಥನೆ' ಕವನಗಳು ಭಕ್ತಿ ಲಹರಿಯ ಅಲೆಗಳನ್ನು ತೇಲಿಬಿಟ್ಟರೆ ಕುಯುವೀರಾ ಅವರ 'ಕಲ್ಯಾಣ', ಡಾ|| ಜಿ. ಬಿ. ವಿಸಾಜಿ ಅವರ 'ತಾಯಿ ಬಂದಿರುವಳು ತನ ಮನಿಗೂ', ಶೇಷ ನವರತ್ನ ಅವರ 'ಕೋರಿಕೆ' ಕವನಗಳು ಕನ್ನಡದ ಅಭಿಮಾನವನ್ನು, ವಿಶ್ವ ಸಾಹಿತ್ಯಕ್ಕೆ ಕನ್ನಡ ನೀಡಿರುವ ಕೊಡುಗೆಗಳನ್ನು ಹೆಮ್ಮೆಯಿಂದ ನಿವೇದಿಸುತ್ತವೆ. ಕುಂ. ವೀರಭದ್ರಪ್ಪ ಅವರ 'ಕುಶಲ ಸಮಾಚಾರ', ಗೌತಮ ತಿಮ್ಮಾಪುರಿ ಅವರ 'ಹೊಸ ದಿಕ್ಕು', ಬಿ. ಎಸ್. ಸೋಲಾಪುರಿ ಅವರ 'ನೋಡಿರೇನಯ್ಯಾ ಪ್ರಜಾಪ್ರಭುಗಳೇ.....?' ಮೋಟೆ ಕೊಟ್ರಪ್ಪ ಅವರ 'ಹುಲಿ ನಿದ್ದೆಯೊಳಗ', ವಿಠಪ್ಪ ಗೋರಂಟ್ಲಿ ಅವರ 'ಹುಚ್ಚು ಮುಂಡೆಯ ಮದುವೆ', ವಿಶ್ವನಾಥ ನಾಯಕ್ ಅವರ 'ಹಾಡಲಿ ಕೋಗಿಲೆ', ಸರಸ್ವತಿ ಚಿಮ್ಮಲಗಿ ಅವರ 'ನಾಯಕರೆ', ಸಿದ್ಧರಾಮಪೊಲೀಸಪಾಟೀಲ ಅವರ 'ನಮ್ಮ ಸಲಹುವವರು' ಇಷ್ಟೂ ಕವನಗಳು ಗೋಮುಖ ವ್ಯಾಘ್ರಗಳಂತಹ ಸೋಗಲಾಡಿತನದ ರಾಜಕಾರಣಿಗಳ ಮೇಲೆ, ಸ್ವಾರ್ಥಸಾಧಕರ ಮೇಲೆ, ಭ್ರಷ್ಟಾಚಾರಿಗಳ ಮೇಲೆ ವೈವಿಧ್ಯಮಯವಾಗಿ ಕಿಡಿಕಾರಿದರೆ, ಕೆ. ಬಿ. ಬ್ಯಾಳಿ ಅವರ 'ಸಬ್ಕೋ ಸನ್ಮತಿ ದೇ' ಮತ್ತು ಸುಬ್ಬಣ್ಣ ಅಂಬೆಸಂಗೆ ಅವರ 'ಹೋದೆಯಾ ಬಾಪು' ಕವನಗಳು ಗಾಂಧೀಜಿಯ ಹಿರಿಮೆ, ಮೌಲ್ಯಗಳನ್ನು ವರ್ಣಿಸಿ ಅವು ಹಾಳಾಗುತ್ತಿರುವ ಇಂದಿನ ಪರಿಸ್ಥಿತಿಯನ್ನು ಕುರಿತ ಅಲವತ್ತುಗೊಳ್ಳುತ್ತವೆ. ಡಾ|| ಎಲ್. ಆರ್. ಕುಲಕರ್ಣಿ ಅವರು 'ಕನ್ನಡದ ಕೋಗಿಲೆ' ಎಂದು ಜಯದೇವಿತಾಯಿ ಲಿಗಾಡೆಯವರ ಮನಮೋಹಕ ವ್ಯಕ್ತಿಚಿತ್ರವನ್ನು ಕಂಡರಿಸಿದರೆ ಭರಮಪ್ಪ ಚಿಲಗೋಡು ಅವರ 'ಅಸ್ತಂಗತ ಹಶ್ಮಿ' ಈ ನಾಡಿನ ಸಾಮಾನ್ಯರ ಮಧ್ಯ ಬದುಕಿ ಅರಿವು ಮೂಡಿಸುವ ಮೊದಲೇ ಅಸ್ತಂಗತನಾಗಿ ಹೋದ ಹಶ್ಮಿಯ ಮರೆಯಲಾಗದ ಸ್ಮೃತಿಯನ್ನು ಛಾಪಿಸುತ್ತದೆ. ಎಸ್. ಬಿ. ಗೊಂಡಬಾಳರ 'ಹೆಣ್ಣಿನ ಶೋಷಣೆ', ದೇಶಾಂಡ ಹುಡಗಿ ಅವರ 'ರಾವಣಾಯಣ'ಪುರಾಣದ ಹೊಸ ಚಿಂತನೆಗಳಾದರೆ ಶರಣಪ್ಪ ಗುಡದಿನ್ನಿ ಅವರ 'ಗಿಡಮರಗಳು', ಹುರಕಡ್ಲಿ ಶಿವಕುಮಾರರ 'ಮರವಾಗಬೇಕು' ಕವನಗಳು ಪ್ರಕೃತಿ ಪ್ರೀತಿಯನ್ನು ವ್ಯಕ್ತಪಡಿಸುತ್ತವೆ.

ಚನ್ನಣ್ಣ ವಾಲೀಕಾರರ 'ಬಂಡಾಯದ ಗೀತೆ' ಬಸವರಾಜ ಸಬರದರ 'ಮೇಲು-ಕೀಳು', ಶಿವರಾಜ ಪಾಟೀಲ್ ಮಹಾಂತಪುರರ 'ಅಂಬೇಡ್ಕರ್ ಅವರಿಗೆ' ಕವನಗಳು ದಲಿತ ಬಂಡಾಯದ ಧ್ವನಿಗಳನ್ನು ತಾರಕ ಸ್ವರದಲ್ಲಿ, ಮಂದ್ರವಾಗಿ ಮನಕಲಕುವಂತೆ ವ್ಯಕ್ತಪಡಿಸಿದರೆ ಲಕ್ಷ್ಮೀದೇವಿ ಶಾಸ್ತ್ರಿಯವರ 'ಗರ್ಲ್' 'ಪ್ರೇಮ ಅದೃಷ್ಟದಲ್ಲಿರಲಿಲ್ಲ ಅದಕ್ಕೇ ಅವನು ಕರಗಲಿಲ್ಲ' ಎಂದು ಪರಂಪರಾಗತ ಸ್ತ್ರೀಚಿಂತನೆಗೆ ಕಟ್ಟುಬಿದ್ದು ಹಳಹಳಿಸಿದರೆ ಡಾ. ವಿಜಯಶ್ರೀ ಸಬರದರ 'ಸೀರೆ' ಮಗಳು ತಾಯಿಯಾಗುತ್ತಾ ತಾಯಿ ಅಜ್ಜಿಯಾದಾಗಲೂ ಬೇತಾಳದಂತೆ ಬೆನ್ನು ಹತ್ತುವ ಸೀರೆಯನ್ನೇ ನೆನೆದು ನಿಟ್ಟುಸಿರು ಬಿಡುತ್ತದೆ. ಆದರೆ ಡಾ. ಪ್ರೇಮಾ ಸಿರ್ಸೆ ಅವರ 'ನಕ್ಕುಬಿಡು ಹುಡುಗಿ' ಮತ್ತೂ ಒಂದು ಹೆಜ್ಜೆ ಮುಂದೆ ಹೋಗಿ 'ಹೆಜ್ಜೆ ಇಟ್ಟಲ್ಲೆಲ್ಲಾ ಹಾವು ತಿಮಿಂಗಿಲ

ಗಳು, ಚಿಗುರೇ ಕನಸುಗಳ ನುಂಗಿಬಿಡುವ ಮೊದಲು ಹೊಟ್ಟೆ ತುಂಬ ನಕ್ಕುಬಿಡು' ಎಂದು ಈ ಕರಾಳ ಜಗತ್ತಿನ ಅನಿವಾರ್ಯ ನಿಯಮವನ್ನು ಉಪದೇಶ ಮಾಡುತ್ತದೆ.

ಈ ಮಧ್ಯೆ ಅಮರೇಶ ನುಗುಡೋಣಿ ಅವರು 'ಬಿಚ್ಚಿದ ಮಾತುಗಳೆಲ್ಲಾ ಬಚ್ಚ ಬರೀ ಮಾತುಗಳಾಗಿ ಬಿಚ್ಚಬೇಕಾದ ಮಾತುಗಳು ಬಿಚ್ಚಲಿಲ್ಲ ಕೊನೆಗೂ' ಎಂದು 'ಆ ಮಾತು' ಕವನದಲ್ಲಿ ಕಳವಳಿಸಿದ್ದರೆ, ಬಿ. ಟಿ. ಲಲಿತಾನಾಯಕ್ ಅವರು—

'ಎದೆಯ ನಂಜಿಗೆ
ಸಿಂಗಾರದೊಡವೆ ಇಕ್ಕದೆ
ಬತ್ತಲಾಗಬೇಕು
ಅರೆ ಬೆತ್ತಲಲ್ಲಿ ಕೊರೆ ಬೆತ್ತಲಲ್ಲಿ
ನಾವು ಬರೆಬೆತ್ತಲಾಗಬೇಕು'

ಎಂದು ಹಂಬಲಿಸುತ್ತಾ, ಸದ್ಯದ ಅವಶ್ಯಕತೆಯ ಪ್ರಾಮಾಣಿಕ ಧ್ವನಿ ಹೊರಡಿಸಿದ್ದಾರೆ.

ಡಾ. ವೇದವ್ಯಾಸ ಜೋಷಿಯವರ 'ಮಣ್ಣಿನ' ಭಾವೈಕ್ಯತಾ ಗೀತೆಯು ಈಗಾಗಲೇ ಮಕ್ಕಳ ಸಮೂಹ ಗೀತೆಯಾಗಿ ನಾಡಿನ ಜನಮನವನ್ನು ಸೆಳೆದುಕೊಂಡಿದೆ.

ಈ ಸಂಕಲನದ ಎಲ್ಲಾ ತಾರೆಗಳ ಕಾಂತಿ ಏಕಪ್ರಕಾರವಾಗಿ ಪ್ರಖರವಾಗಿಲ್ಲ. ಕೆಲವು ಕಣ್ಣಿಗೆ ಕಣ್ಣು ಹೊಡೆದು ಮಿಂಚಿ ನಗು ಚೆಲ್ಲಿದರೆ ಮತ್ತೇ ಕೆಲವು ಮಂದ ಪ್ರಕಾಶ ದಿಂದ ಕಣ್ಣಿಗೆ ಹುಡುಕುವ ಶ್ರಮ ಕಲ್ಪಿಸುತ್ತವೆ. ಆದರೆ, ಒಟ್ಟಾರೆಯಾಗಿ 'ನಕ್ಷತ್ರಗಳು' ಈಶಾನ್ಯ ಕರ್ನಾಟಕದ ಕನ್ನಡ ಸಾಹಿತ್ಯ ಬಾನಂಗಳದ ಕಾಂತಿಯ ಕಿರುಪರಿಚಯ ನೀಡುವಲ್ಲಿ ಯಶಸ್ಸು ಪಡೆಯುತ್ತದೆ.

ಅಶ್ವಶಕ್ತಿ-೫೦೦೦ ನೀಲಾಂಬರಿ (ಮಕ್ಕಳ ಕಥೆಗಳು) ಇಂಚರ ಪ್ರಕಾಶನ.
ಮೊದಲ ಮುದ್ರಣ ೧೯೯೯, ಪುಟಗಳು ೪೦, ಬೆಲೆ ೧೫ ರೂ.

ಮಕ್ಕಳಿಗೆ ಏಕತಾನತೆಯ ಕಥೆಗಳೆಂದರೆ ಬೇಸರವಾಗುವುದು ಸಹಜ. ಅವರೂ ವೈವಿಧ್ಯತೆಯನ್ನು ನಿರೀಕ್ಷಿಸುತ್ತಾರೆ, ಕಾಲಕ್ಕೆ ತಕ್ಕ ಹಾಗೆ ಹೊಸತನ್ನು ಅಪೇಕ್ಷಿಸುತ್ತಾರೆ. ಅಂತಹ ಮಕ್ಕಳಿಗೆಂದೇ ರಚಿತವಾದ ಐದು ಕಥೆಗಳ ಸಂಕಲನ ಈ ಕಿರುಹೊತ್ತಿಗೆ.

ಮೊದಲ ಕಥೆ 'ಅಶ್ವಶಕ್ತಿ–೫೦೦೦' ಸೂರ್ಯನ, ಅವನ ಕುದುರೆಗಳ ಕಾಲ್ಪನಿಕ ಸಂಭಾಷಣೆಯೊಂದಿಗೆ ಪ್ರಾರಂಭವಾಗಿ ಒಂದು ದಿನ ಸೂರ್ಯ ವಿಶ್ರಾಂತಿ ತೆಗೆದುಕೊಂಡರೆ ಏನೆಲ್ಲಾ ಅನಾಹುತಗಳಾಗಬಹುದು, ಸೂರ್ಯನ ವಿಶ್ರಾಂತಿಗೆ ರೋಬೊಟ್ ಸೂರ್ಯ ಹೇಗೆ ಸಹಾಯಕವಾಗಬಹುದು ಎಂದು ಮಕ್ಕಳ ಮುಗ್ಧತೆಯೊಂದಿಗೇ ತಾತ ವಿವರಿಸಿದರೂ 'ಸೂರ್ಯ ತನ್ನ ಸ್ಥಳದಲ್ಲೇ ಗಿರಿಕಿ ಹೊಡೆದರೆ, ಇತರ ಗ್ರಹಗಳು ಸೂರ್ಯನ ಸುತ್ತಲೂ ಗಿರಿಕಿ ಹೊಡೆಯುತ್ತವೆ' ಎಂದು ಹುಯಿಲಿಡುವ ಮಕ್ಕಳು ಕಡೆಗೆ ಬಿಸಿಲು ಹೆಚ್ಚು ಚುರುಗುಟ್ಟಿದರೆ 'ರೋಬೋಟ್ ಸೂರ್ಯ ಬಂದಿದ್ದಾನೆ ಎಂದುಕೊಳ್ಳುತ್ತೇವೆ' ಎಂದು ಲವಲವಿಕೆಯಿಂದ ನುಡಿದು ಈ ಕಥೆಗೆ ಹೊಸ ಆಯಾಮ ಕೊಟ್ಟಿದ್ದಾರೆ.

ಎರಡನೇ ಕಥೆ 'ಅಂತರಿಕ್ಷ ಪಟೆಲ್ ಅಂಗಾರಕ' ಕೂಡ ಅಂತರ್ಗ್ರಹಯಾನದ ವೈಶಿಷ್ಟತೆಯನ್ನು ಒಳಗೊಂಡಿದೆ. ಭೂ ಗ್ರಹದ ಮಹತ್ವದ ವಿಜ್ಞಾನಿಗಳನ್ನು ಹೊತ್ತು ಮಂಗಳ ಗ್ರಹದಿಂದ ಭೂಗ್ರಹ ದತ್ತ ಹೊರಟಿದ್ದ ಅಂತರಿಕ್ಷ ಪಟೆಲ್ ರಾಕೆಟ್ ಸ್ಫೋಟಿಸುವ ಇಂಧನವನ್ನು ಕಳೆದುಕೊಂಡು ಎಲ್ಲರೂ ಜೀವನ್ಮರಣದ ಮಧ್ಯದ ಉಸಿರನ್ನು ಎಳೆಯುವ ಪರಿಸ್ಥಿತಿ ನಿರ್ಮಿಸಿ ಕಡೆಗೆ ಸಂಪಾದಕ ನಾರದನ ಬಳಿಯಿದ್ದ ದ್ರಾಕ್ಷಾರಸವನ್ನು ಬಳಸಿ ಸುಲಭ ವಾಗಿ ಸುರಕ್ಷಿತವಾಗಿ ಭೂಗ್ರಹ ಪ್ರವೇಶಿಸುವ ಕುತೂಹಲದ ಕಥೆಯನ್ನು ನಿರೂಪಿಸುತ್ತದೆ.

ಮೂರನೇ ಕಥೆ 'ದೃಷ್ಟಿ ಪರಿಹಾರ' ಮಾನವ ಮೂಢನಂಬಿಕೆಯ ಅನಾಹುತ ವನ್ನು ಮಗುತನದ ಮುಗ್ಧತೆಯಲ್ಲೇ ವಿವರಿಸಿ ಪೂಜಾ ಸಾಮಾಗ್ರಿಗಳು ಎಲ್ಲಿಂದಲೋ ಬಂದು ಒಂದಾಗಿ, ತಮ್ಮ ಯಾವುದೇ ತಪ್ಪಿಲ್ಲದೆ ಅಥವಾ ಯಾವ ಪುರುಷಾರ್ಥವನ್ನು ಸಾಧಿಸದೆ ಕೇವಲ ಮಾನವರ ನಂಬಿಕೆಯೊಂದನ್ನು ಪೂರ್ಣ ಗೊಳಿಸಲು ಬಲಿಯಾಗುವ ನೋವನ್ನು ವ್ಯಕ್ತಪಡಿಸಿ ಮಕ್ಕಳ ಮನಸ್ಸೂ ಮಾನವನ ಈ ಅನಾಹುತ ತಡೆಯಬೇಕು ಎಂದು ಸ್ಪಂದಿಸುವಂತೆ ಮಾಡುತ್ತದೆ.

'ಹಳ್ಳಿ ಹುಡುಗ' ಹಳ್ಳಿಯ ಮಕ್ಕಳನ್ನು ಹೀಯಾಳಿಸಬಾರದು. ಅವರಲ್ಲೂ ಜಾಣ್ಮೆ, ಪ್ರತಿಭೆ, ಸಹಕಾರ ಮನೋಭಾವ ಯಥೇಚ್ಛವಾಗಿರುತ್ತವೆ ಎಂಬ ತಿಳಿವಳಿಕೆ ನೀಡಿದರೆ ಕೊನೆಯ ಕಥೆ 'ಕಪ್ಪುಪಟ್ಟಿ' ಬೂದು ಬಣ್ಣವೊಂದನ್ನೇ ಪಡೆದಿದ್ದ ಭೂಲೋಕದ ಪ್ರಾಣಿಗಳು ಪ್ರಕೃತಿಯ ಕಲಾವಿದನ ಕೈಚಳಕದಿಂದ ವರ್ಣವೈವಿಧ್ಯ ವನ್ನು ಪಡೆದು ಸಂತೃಪ್ತವಾದುದನ್ನು, ಬಣ್ಣಗಳೆಲ್ಲಾ ಮುಗಿದ ಬಳಿಕ ಬಂದ ರ್‍ಹಿನೋ ಕಪ್ಪು ಪಟ್ಟಿಗಳಿಂದಲೇ ಆಕರ್ಷ ಕತೆಯನ್ನು ಪಡೆದು ಹಿಗ್ಗಿದುದನ್ನು ವರ್ಣಿ ಸುತ್ತದೆ.

ಹೀಗೆ ಈ ಸಂಕಲನದ ಹೊಸ ವಸ್ತುಗಳ ಕಥಾನಕಗಳು ಮಕ್ಕಳಿಗೆ ವಿಶಿಷ್ಟ ಬಗೆಯ ಮುದ ನೀಡುತ್ತವೆ ಎಂಬುದರಲ್ಲಿ ಅನುಮಾನವಿಲ್ಲ.

ಡಾ|| ಎಚ್. ಪಿ. ಮಂಜುಳಾ
ವಾಣಿಜ್ಯ ತೆರಿಗೆ ಉಪ ಆಯುಕ್ತರ ಕಾರ್ಯಾಲಯ
ವೇಗ ಮಾರ್ಗ ೩೧, ೮ನೇ ಮಹಡಿ
ವಾಣಿಜ್ಯ ತೆರಿಗೆಗಳ ಕಾರ್ಯಾಲಯ
ಗಾಂಧೀನಗರ, ಬೆಂಗಳೂರು–೫೬೦ ೦೦೯

---

ಅಮೆರಿಕದ ಕಥೆಗಳು–ಲೇಖಕರು : ಶಾಂತಾರಾಮ ಸೋಮಯಾಜಿ,
ಪ್ರಕಾಶನ : ನವಕರ್ನಾಟಕ ಪಬ್ಲಿಕೇಶನ್ಸ್ ಪ್ರೈವೇಟ್ ಲಿಮಿಟೆಡ್,
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ ಬೆಂಗಳೂರು–೫೬೦೦೦೧, ಮುದ್ರಣ ೧೯೯೯,
ಪುಟ ೧೫೩, ಬೆಲೆ ರೂ. ೫೫.

ಈ ಪುಸ್ತಕದಲ್ಲಿ ಅಮೆರಿಕದ ೮ ಕಥೆಗಳಿವೆ. ಮೊದಲಿನ ಕಥೆ "ಸುಖಿ ಪುರುಷನಿಗೆ ನೆಂಜಿಲ್ಲ" ಎಂಬುವದರಲ್ಲಿ ಪಿ. ಎಚ್. ಡಿ. ಮಾಡಲು ಹೋದವನೊಬ್ಬ ಭಾರತದಲ್ಲಿ ತಂದೆ ತೀರಿಹೋದ ಬಳಿಕ ತನಗೆ ಸಿಗಬೇಕಾಗಿದ್ದ ಪಾಲನ್ನು ತಮ್ಮನು ತೆಗೆದುಕೊಂಡುದುದರಿಂದ ಬೇಸರಗೊಂಡು ಭಾರತದಲ್ಲಿ ತನ್ನವರೆಂದು ಇನ್ನು ಯಾರೂ ಇಲ್ಲವೆಂದು ಅಮೆರಿಕದಲ್ಲಿ ನೆಲಸುತ್ತಾನೆ. ಹಣದ ಮುಗ್ಗಟ್ಟಿನಿಂದ ಬಳಲಿದ ಅವನಿಗೆ ಮೂರು–ನಾಲ್ಕು ವರ್ಷಗಳಲ್ಲಿ ಮುಗಿಸಬೇಕಾಗಿದ್ದ ಪಿಎಚ್‌ಡಿ ಥೀಸಿಸನ್ನು ಬರೆದು ಮುಗಿಸಲು ಏಳು ವರ್ಷಗಳು ಬೇಕಾದುವು. ಅನಂತರ ಅವನಿಗೆ ಒಬ್ಬ ಚೈನೀಸ್‌ನವನ ಬಳಿ ಕಂಪ್ಯೂಟರಿನಲ್ಲಿ ಉದ್ಯೋಗ ದೊರೆಯುತ್ತದೆ. ಒಬ್ಬಂಟಿತನವನ್ನು ಕಳೆಯಲು ಅವನು ದಿನಪತ್ರಿಕೆಯಲ್ಲಿ ಬರುವ ವಧೂ–ವರರ ವಿವಾಹದ ಜಾಹೀರಾತುಗಳಲ್ಲಿ ಹುಡುಗಿಗಾಗಿ ಹುಡುಕಾಟ ನಡೆಸುತ್ತಾನೆ. ಆದರೆ ಸರಿಯಾದ ಹುಡುಗಿ ಸಿಗದೆ ನಿರಾಶನಾಗುತ್ತಾನೆ. ಮುಂದೆ ಇತರ ವಿವಾಹಿತ ದಂಪತಿಗಳ ಜೀವನವನ್ನು ಹತ್ತಿರದಿಂದ ನೋಡಿದ ಆತನಿಗೆ ವಿವಾಹವಾಗದೇ ಇರುವ ತಾನೇ ಸುಖಿ ಎಂದೆನಿಸುತ್ತದೆ.

ಎರಡನೆ ಕಥೆ "ಜೆಟ್ ಪ್ಲೇನ್" ಅಮೆರಿಕದಲ್ಲಿ ಕೆಲಸದಲ್ಲಿರುವ ದಂಪತಿಗಳ ಕುರಿತಾಗಿದೆ. ಇಬ್ಬರು ಮಕ್ಕಳಿರುವ ಮನೆಯಲ್ಲಿ ದಂಪತಿಗಳಿಬ್ಬರೂ ಕೆಲಸಕ್ಕೆ ಹೋಗುತ್ತಿರುತ್ತಾರೆ. ಪತ್ನಿಗೆ ಮನೆಗೆಲಸದಲ್ಲಿ ಮತ್ತು ಮಕ್ಕಳನ್ನು ನೋಡಿಕೊಳ್ಳುವಲ್ಲಿ ಪತಿ ಸ್ವಲ್ಪವೂ ಸಹಾಯ ಮಾಡುವುದಿಲ್ಲ. ಈ ರೀತಿಯಾದರೆ ಆ ಕುಟುಂಬ ಹೇಗೆ ತೊಂದರೆಗೊಳಗಾಗುತ್ತದೆ ಎಂಬುದನ್ನು ಈ ಕಥೆ ತಿಳಿಸುತ್ತದೆ.

ಮೂರನೆಯ ಕಥೆ ಅಶೋಕನ ತಾಯಿ ಎಂಬುದರಲ್ಲಿ ಭಾರತದಿಂದ ಬಂದ ಅತ್ತೆ, ಮಾವ ತಮ್ಮ ಮಗ ತೀರಿಹೋದ ಬಳಿಕ ತಮ್ಮ ಸುಖಕ್ಕಾಗಿ ಮೊಮ್ಮಗನನ್ನು ತಮ್ಮ ಬಳಿ ಇಟ್ಟುಕೊಳ್ಳಲು ಇಚ್ಛಿಸುತ್ತಾರೆ. ವಿಧವೆ ಸೊಸೆ ಮೀನಳ ಆಕಾಂಕ್ಷೆಗಳನ್ನು ಅವರು ಗಮನಿಸುವುದಿಲ್ಲ. ಇದರಿಂದ ರೋಸಿಹೋದ ಮೀನ ತನ್ನ ಮಗ ಅಶೋಕನೊಡನೆ ಕಣ್ಮರೆಯಾಗಿ ತನ್ನ ದಾರಿಯನ್ನು ತಾನೇ ನೋಡಿಕೊಳ್ಳುತ್ತಾಳೆ.

ಜನ್ಮಭೂಮಿ ಎಂಬ ಕಥೆಯಲ್ಲಿ ರವಿ ಭಾರತಕ್ಕೆ ಮದುವೆಯಾಗಲು ಬರುತ್ತಾನೆ. ಆತನ ಅಣ್ಣನಿಗೆ ಪಿಎಚ್‌ಡಿ ಡಿಗ್ರಿ ಹೊಂದಿ ಅಮೆರಿಕದಲ್ಲಿ ಕೆಲಸದಲ್ಲಿರುವ ತನ್ನ ತಮ್ಮನಿಗೆ ಬಹಳ ವರದಕ್ಷಿಣೆ ಕೊಡುವ ಹುಡುಗಿಯ ಜತೆ ಮದುವೆ ಮಾಡಿಸಬೇಕೆಂಬ ಆಲೋಚನೆಯಿರುತ್ತದೆ. ಆದರೆ ರವಿ ವರದಕ್ಷಿಣೆ ತೆಗೆದುಕೊಳ್ಳಲು ಒಪ್ಪುವುದಿಲ್ಲ. ಕೆಲವು ಹುಡುಗಿಯರನ್ನು ನೋಡಿ ತಿರಸ್ಕರಿಸಿದ ರವಿಗೆ ಮಾತಿನಲ್ಲಿ ಮೋಡಿಮಾಡುವ,

ಫ್ಯಾಷನ್ನಿನ ಹುಡುಗಿ ಸಿಗುತ್ತಾಳೆ. ಅವಳೊಡನೆ ಕೆಲವು ದಿನ ತಿರುಗಾಡಿದನಂತರ ಆಕೆಯನ್ನೇ ಮದುವೆಯಾಗುವುದೆಂದು ನಿರ್ಧರಿಸುತ್ತಾನೆ. ಆದರೆ ಅಷ್ಟರಲ್ಲಿ ಆಕೆಯ ಕೆಟ್ಟ ನಡತೆ ಅವನ ಗಮನಕ್ಕೆ ಬರುತ್ತದೆ. ಇದರಿಂದ ರೋಸಿಹೋದ ರವಿ ಭಾರತದ ಯಾವ ಹುಡುಗಿಯೂ ತನಗೆ ಬೇಡವೆಂದು ಅಮೆರಿಕಕ್ಕೆ ಹಿಂದಿರುಗುತ್ತಾನೆ. ಆದರೆ ಅವನನ್ನು ಕಳುಹಿಸಿಕೊಡಲು ಬಂದ ಆತನ ತಾಯಿ ಬೇಸರಪಡುತ್ತಾಳೆ.

ಎಪ್ಪತ್ತಾರರ ಕೆಲೆಂಡರ್ ಎಂಬ ಕಥೆ ಹಿಂದಿನ ಸಂಪ್ರದಾಯ ಬಿಡದ ಒಬ್ಬ ಮುದುಕನ ಕಥೆ. ಪತ್ನಿ ತೀರಿಹೋದ ತರುವಾಯ ಆತ ಅಮೆರಿಕದಲ್ಲಿರುವ ತನ್ನ ಮಗ, ಸೊಸೆ ಮತ್ತು ಮೊಮ್ಮಕ್ಕಳ ಜತೆಯಲ್ಲಿ ವಾಸಿಸುತ್ತಾನೆ. ಆದರೆ ಅವರೊಡನೆ ಹೊಂದಿಕೊಳ್ಳಲು ಸಾಧ್ಯವಾಗದೆ ಬಲು ಕಷ್ಟಪಡುತ್ತಾನೆ. ಒಮ್ಮೆ ಅವನು ಮಗನ ಜತೆ ಭಾರತೀಯರೊಬ್ಬರ ಮನೆಗೆ ಮದುವೆಗೆ ಹೋಗುತ್ತಾನೆ. ಅಲ್ಲಿ ಅವನಿಗೆ ಭಾರತದಿಂದ ಬಂದ ಇನ್ನೊಬ್ಬ ಮುದುಕನ ಸ್ನೇಹವಾಗುತ್ತದೆ. ಮಾತಿನ ನಡುವೆ ಅವನೊಂದಿಗೆ ತನ್ನ ಮಗನ ಮನೆಯ ವಿಚಾರವಾಗಿ ದೂರುತ್ತಾನೆ. ಅವನ ಈ ಮಾತು ಅವನಿಗೇ ಮುಳುವಾಗುತ್ತದೆ. ಅಲ್ಲಿಂದ ಬಂದ ಕೆಲವು ದಿನಗಳ ಮೇಲೆ ಸ್ನೇಹಿತರ ಮೂಲಕ ಈ ವಿಷಯ ತಿಳಿದ ಆತನ ಮಗ ಆತನನ್ನು ಪ್ರಶ್ನಿಸುತ್ತಾನೆ. ಇದರಿಂದ ಬೇಸರಗೊಂಡು ಆತ ಭಾರತಕ್ಕೆ ಹಿಂದೆ ಹೋಗುವುದಾಗಿ ನಿಶ್ಚಯಿಸುತ್ತಾನೆ. ಆದರೆ ಅದರ ಮಾರನೆಯ ದಿನವೇ ಅವನ ಅಂತ್ಯವಾಗುತ್ತದೆ.

ಸಂಸಾರವೆಂಬ ಕಥೆಯಲ್ಲಿ ಬರುವ ನಿಕ್‌ನ ಅಣ್ಣ, ಅಕ್ಕ ಮತ್ತು ತಂದೆ, ತಾಯಿ ಅಲ್ಲದೆ ನಿಕ್‌ನ ಮಕ್ಕಳ ಕುರಿತಾಗಿ ಇದೆ. ಇದನ್ನು ಓದುವಾಗ ಅಮೆರಿಕದ ಸಂಸಾರದ ಪದ್ಧತಿಯ ಅನುಭವ ನಮಗಾಗುತ್ತದೆ. ಮತ್ತು ಭಾರತದ ಸಂಸಾರದ ಪದ್ಧತಿಯೇ ಉತ್ತಮವೆಂದೆನಿಸುತ್ತದೆ.

ಬಿಳಿಕರಡಿ ಎಂಬ ಕಥೆಯಲ್ಲಿ ಮದುವೆಯಾಗುವ ಮೊದಲು ಬಸಿರಾದ ೧೬ ವರ್ಷದ ಹುಡುಗಿ ಆರತಿ ತನ್ನ ತಂದೆ ತಾಯಿಯರ ಭಯದಿಂದ ತನ್ನ ಗೆಳತಿಯ ಮನೆಯಲ್ಲಿ ವಾಸಿಸಲು ಹೋಗುತ್ತಾಳೆ. ಭಾರತದಿಂದ ಬಂದ ಇತರ ಸ್ನೇಹಿತರಿಗೆ ಈ ಸಮಾಚಾರ ತಿಳಿಯಬಾರದೆಂದು ಆರತಿಯ ತಂದೆ ತಾಯಿ ಪ್ರಯತ್ನಿಸುತ್ತಾರೆ. ಆದರೆ ಈ ವಿಷಯ ಗುಟ್ಟಾಗಿ ಉಳಿಯುವುದಿಲ್ಲ. ಅವರ ಸ್ನೇಹಿತ ಕಾಮತ್ ಮತ್ತು ಅವನ ಪತ್ನಿ ಮನೆಗೆ ಬರುತ್ತಾರೆ. ಇದರಿಂದಾಗಿ ಆರತಿಯ ತಂದೆ ತಾಯಿಗಳಿಗೆ ಇನ್ನೂ ಕೆಟ್ಟದೆನಿಸುತ್ತದೆ. ಕೊನೆಗೆ ಅವರು ತಮ್ಮ ಮಗಳನ್ನು ಕ್ಷಮಿಸಿ ಗೆಳತಿಯ ಮನೆಯಿಂದ ತಮ್ಮ ಮನೆಗೆ ಬರಬೇಕೆಂದು ಕರೆಯುತ್ತಾರೆ. ಆರತಿಯ ಗೆಳತಿ ಚಿಕ್ಕವಳಿದ್ದಾಗ ಆಕೆಯ ಬಳಿಯಲ್ಲಿದ್ದಂಥ ಒಂದು ಕರಡಿಯ ಬೊಂಬೆಯನ್ನು ಆರತಿಗೆ ಉಡುಗೊರೆಯಾಗಿ ಕೊಡುತ್ತಾಳೆ.


ಕೊನೆಯ ಕಥೆಯನ್ನು ಓದುವಾಗ ಸ್ವಲ್ಪ ಬೇಜಾರು ಎನಿಸಿದರೂ ಮುಂದೆ ಈ ಕಥೆ ಚೆನ್ನಾಗಿ ಓದಿಸಿಕೊಂಡು ಹೋಗುತ್ತದೆ. ಇದರಲ್ಲಿ ಅಮೆರಿಕದಲ್ಲಿ ಮುದುಕರಾದವರು ಯಾವ ರೀತಿಯಲ್ಲಿ ತಮ್ಮ ಜೀವನ ಸುಖಮಯವಾಗುವಂತೆ ಮಾಡಿಕೊಳ್ಳುತ್ತಾರೆ

ಎಂದು ತಿಳಿಯುತ್ತದೆ. ಪತ್ನಿಯಿಂದ ಬೇರೆಯಾಗಿ ವಾಸಿಸುತ್ತಿದ್ದ ಮುದುಕನಿಗೆ ತನ್ನ ಇಂಗ್ಲೆಂಡಿನ ಪತ್ನಿ ಈಸ್ಟರ್ ಹಬ್ಬದ ದಿನ ತಯಾರಿಸುವ ಸ್ಕೋನನ್ನು ಮರೆಯಲಾಗುವುದಿಲ್ಲ.

ಶಾಂತಾರಾಮ ಸೋಮಯಾಜಿಯವರು ಬರೆದಿರುವ ಈ ಕಥೆಗಳನ್ನು ಓದುವಾಗ ನಮಗೆ ಅಮೆರಿಕದ ಅವರ ಅನುಭವಗಳನ್ನು ಅವರೊಡನೆ ಸೇರಿ ಅನುಭವಿಸಿದಂತಾಗುತ್ತದೆ. ಅವರು ತಮ್ಮ ಕಥೆಗಳ ಮೂಲಕ ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ ಎಂದು ಪರದೇಶಗಳಿಗೆ ಹೋಗಲು ಹಾತೊರೆಯುವವರಿಗೆ ಎಚ್ಚರ ಕೊಟ್ಟಿದ್ದಾರೆ. ಅಮೆರಿಕದ ಜನರು ಇಚ್ಛಿಸಿದಾಗ ಮದುವೆಯಾಗಿ ಬೇಡವಾದಾಗ ಕುಟುಂಬದಿಂದ ಬೇರೆಯಾಗುವ ಸ್ವೇಚ್ಛಾಪ್ರವೃತ್ತಿಯವರಂತೆ ಕಾಣಿಸಿಕೊಳ್ಳುತ್ತಾರೆ. ಈ ಪುಸ್ತಕದಲ್ಲಿ ಮುದ್ರಣ ದೋಷ ಇಲ್ಲವೆಂದೇ ಹೇಳಬಹುದು. ಸುಂದರವಾದ ಮುಖಪುಟ ಹೊಂದಿರುವ, ಒಳ್ಳೆಯ ಕಥೆಗಳಿರುವ ಈ ಪುಸ್ತಕ ಎಲ್ಲರಿಗೂ ಹಿಡಿಸುವಂತಹದು.

ಭಾರತಿಭಟ್
೧೩೪, ಡಿ ಬ್ಲಾಕ್, ೨೨ನೇ ಕ್ರಾಸ್
೩ಎ ಮೆಯಿನ್, ವಿಜಯನಗರ, ೩ನೇ ಹಂತ
ಮೈಸೂರು ೫೭೦ ೦೧೭

---



ವಿಕಾಸವೇ ಬದುಕು, ಸಂಕೋಚವೇ ಮರಣ, ಪ್ರೇಮವೆಲ್ಲಾ ವಿಕಾಸ ಸ್ವಾರ್ಥವೆಲ್ಲ ಸಂಕೋಚ. ಆದ್ದರಿಂದ ಪ್ರೇಮವೇ ಬದುಕಿನ ಧರ್ಮ.

—ಸ್ವಾಮಿ ವಿವೇಕಾನಂದ

## ಓದುಗರ ಅನಿಸಿಕೆ

ಮಾನ್ಯರೇ,

ನೀವು ಪ್ರಕಟಿಸಿದ ಪುಸ್ತಕ ಪ್ರಪಂಚದಲ್ಲಿನ, ಬಾಳೆಹಣ್ಣು ತಿನ್ನುವುದು ಸುಲಭವೇನಲ್ಲ. ಲೇಖನ ತುಂಬ ಉಪಯುಕ್ತವಾಗಿದೆ. ಸಿಕ್ಕಸಿಕ್ಕಕಡೆ, ಉತ್ತಮವೆಂದು ಮೆಲ್ಲುತ್ತಿದ್ದ ಬಾಳೆ ಹಣ್ಣಿಗೆ, ಕಡಿವಾಣ ಹಾಕಲು ಎ. ಪಿ. ಚಂದ್ರಶೇಖರರು ತುಂಬಾ ಚೆನ್ನಾಗಿ ವಿವರಣೆಯೊಂದಿಗೆ ಬರೆದಿದ್ದಾರೆ. ಲೇಖನ ಬರೆದ ಚಂದ್ರಶೇಖರರವರಿಗೂ, ಪ್ರಕಟಿಸಿದ ತಮಗೂ ಅನಂತಾನಂತ ಧನ್ಯವಾದಗಳು.

ವಂದನೆಗಳೊಡನೆ

ಹೆಚ್. ಪಿ. ನಾಗರಾಜು
ವೈಶ್ಯ ಬ್ಯಾಂಕ್, ಮಹಾತ್ಮಗಾಂಧಿ ರಸ್ತೆ
ಚಿಕ್ಕಮಗಳೂರು ೫೭೭೧೦೧

ಸನ್ಮಾನ್ಯ ಸಂಪಾದಕರಿಗೆ,

ಸಪ್ರೇಮ ವಂದನೆಗಳು

ಜೂನ್ ತಿಂಗಳ ಪುಸ್ತಕ ಪ್ರಪಂಚ ಸಂಚಿಕೆಯಲ್ಲಿ ಪ್ರಕಟವಾದ ಶ್ರೀ ಗೋಪಾಲ ಆಶ್ರಿತರವರ "ಆತ್ಮವಂಚನೆ ಸಲ್ಲದು" ಲೇಖನ ಅರ್ಥಗರ್ಭಿತವಾಗಿದ್ದು 'ಸಮಗ್ರತೆ' ಎಂಬುವುದು ವ್ಯಕ್ತಿಯ ನಡತೆಯನ್ನು ನಿರ್ಣಯಿಸುವ ಮಾನದಂಡವೆಂಬುದನ್ನು ಅರ್ಥಪೂರ್ಣವಾಗಿ ಉದಾಹರಣೆಯೊಂದಿಗೆ ಮಾಡಿರುವ ಉಲ್ಲೇಖ ಸಮಂಜಸವಾಗಿರುವುದಲ್ಲದೆ ತತ್ವದಿಂದ ಕೂಡಿದ ಜೀವನ ಮಾತ್ರ ಯಶಸ್ವಿಯಾಗಬಲ್ಲದೆಂಬ ವಾಸ್ತವಿಕತೆಯನ್ನು ಸವಿಸ್ತಾರವಾಗಿ ಪ್ರಚುರ ಪಡಿಸಿರುವುದು ಶ್ಲಾಘನೀಯ. ಶ್ರೀಯುತ ಗೋಪಾಲ ಆಶ್ರಿತರವರಿಗೆ ನನ್ನ ವೈಯುಕ್ತಿಕ ಅಭಿನಂದನೆಗಳು. ಮುಂದೆಯೂ ಈ ರೀತಿಯ ಲೇಖನಗಳು ಪ್ರಕಟವಾಗಲೆಂದು ಆಶಿಸುತ್ತೇನೆ.

ಗೌರವಪೂರ್ವಕ ವಂದನೆಗಳೊಂದಿಗೆ

ಜಿ. ಶಿವಾಜಿರಾವ್ ಸೋಮವಂಶಿ
೨೦೬೪, ೧೪ ನೇ ಪಶ್ಚಿಮದ ತಿರುವು
ಅಶೋಕ ರಸ್ತೆ, ಮೈಸೂರು

## ಕಾರ್ಯಕಾರಿ ಸಮಿತಿ ಸದಸ್ಯರುಗಳು :

ಸರ್ವಶ್ರೀಗಳಾದ :

ಜಿ. ಕೆ. ಲೋಕರೆ, ಅಧ್ಯಕ್ಷರು ಮತ್ತು ಮೈಸೂರು ವಿಭಾಗಾಧಿಕಾರಿಗಳು

ಧರ್ಮರಾಜ ಲಿಂಗಪ್ಪ ರಿತ್ತಿ ಮರಿಯಣ್ಣನವರ್, ಉಪಾಧ್ಯಕ್ಷರು

ವೈ. ಎನ್. ಶಂಕರೇಗೌಡ, ಖಜಾಂಚಿ

ಎಸ್. ಮಾದೇಗೌಡ

ವೈ. ಎಂ. ಚಂದ್ರು

ಕೆ. ಎಂ. ಚನ್ನೇಗೌಡ

ಮಹದೇವಯ್ಯ

ಆರ್. ಜಯರಾಮ

ಎಚ್. ಎಸ್. ನಂಜಪ್ಪ

ಎಸ್. ಮಂಚಯ್ಯ

ಕೆ.ಜಿ. ಚನ್ನಕೇಶವ

ಶ್ರೀಮತಿ ಕಮಲ ಸಿ. ಹೆಗಡೆ

ನಿರ್ದೇಶಕರು, ಲೋಕಶಿಕ್ಷಣ ನಿರ್ದೇಶನಾಲಯ

ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ

ಆಯುಕ್ತರು ಮತ್ತು ಕಾರ್ಯದರ್ಶಿಗಳು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಆಯುಕ್ತರು ಮತ್ತು ಕಾರ್ಯದರ್ಶಿಗಳು
ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆ

ಆಯುಕ್ತರು ಮತ್ತು ಕಾರ್ಯದರ್ಶಿಗಳು
ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ

ಅಭಿವೃದ್ಧಿ ಕಮೀಷನರ್

ಶ್ರೀರಂಗರಾಜು, ಪ್ರಧಾನ ಕಾರ್ಯದರ್ಶಿ

ಮುದ್ರಣ ಮತ್ತು ಪ್ರಕಟಣೆ : ಕ. ರಾ. ವ. ಶಿ. ಸಮಿತಿ, ಮೈಸೂರು–570 006

# ಸಮಿತಿಯ ಪ್ರಕಟಣೆ

ಪುಸ್ತಕ ಪ್ರಪಂಚದಲ್ಲಿ ಪ್ರಕಟಗೊಂಡ ಡಾ॥ ದೇಜಗೌ ಅವರ
ಸಂಪಾದಕೀಯ ಲೇಖನಗಳ ಸಂಗ್ರಹ—

**ಸಂಪಾದಕೀಯ - ಸಂಕಲನ**

(ಬೆಲೆ : ರೂ. ೫೦–೦೦)

ನಾಡಿನ ಖ್ಯಾತಕಲಾವಿದರಾದ ದಿ॥ ಪಿ. ಆರ್. ತಿಪ್ಪೇಸ್ವಾಮಿ ಅವರ ಆಕರ್ಷಕ ಮುಖಚಿತ್ರದೊಂದಿಗೆ, ಡೆಮಿ ೧/೮, ೧೪೪ ಪುಟಗಳ ಆಫ್ ಸೆಟ್ ಮುದ್ರಣ. ವೈವಿಧ್ಯಮಯ ವಿಚಾರಪೂರಿತ ಚಿಂತನಾರ್ಹ ವಿಷಯಗಳ ಸಾರಸಂಗ್ರಹ.

ಪ್ರತಿಗಳಿಗಾಗಿ ಸಂಪರ್ಕಿಸಿ:
**ಪ್ರಧಾನ ಸಂಪಾದಕ**
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಸಂ. ೫/೧, ವಿನೋಬಾ ರಸ್ತೆ, ಮಾನಸಗಂಗೋತ್ರಿ ಆವರಣ, ಮೈಸೂರು–೫೭೦ ೦೦೬

---

Licence No 21, Reg. No. KA/SK/Mys–56
**Licenced to Post with payment at Mysore, R. M. S/II**







ಶ್ರೀ ಚಂದ್ರಶೇಖರ
ನಂ. 1 ಮಹೇಶ್ವರಮ್ಮ
ಗುಡಿರಸ್ತೆ, ಮುನಿರೆಡ್ಡಿ ಪಾಳ್ಯ
ಜೆ. ಸಿ. ನಗರ, ಬೆಂಗಳೂರು–560006

If undelivered please return to:
KARNATAKA STATE ADULT EDUC TION COUNCIL
5/1, Vinoba Road, P.B. No. 15
Manasagangothri Campus, Mysore-570 006